ಜನಶಕ್ತಿ


ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com


ಸಂಪುಟ 7 ಸಂಚಿಕೆ 48
ಡಿಸೆಂಬರ್ 1, 2013 ಪುಟ 16 ರೂ. 10/-



ಜನಮನದಲ್ಲಿ ಅಲೆ ಸೃಷ್ಟಿಸದ ಮೋದಿ ರ್ಯಾಲಿ



'ಭಾರತ ಗೆಲ್ಲಿಸಿ'- ಘೋಷಣೆ ಹಿಂದಿನ ಸಂಚು



ೇಂದ್ರ
ಣಕಾಸು
ಯೋಗ –
ಜ್ಯಗಳ ಕೈ
ರುಚುವುದು
ಲ್ಲಲಿ

ಗುಳೆ ಹೋಗುವ ಲಂಬಾಣಿಗಳ ಗೋಳಿಗೆ ಕೊನೆ ಇಲ್ಲವೇ ?





ಬೀದಿ ಬದಿ ವ್ಯಾಪಾರ- ಕಾಯ್ದೆ: ರಕ್ಷಣೆಗಾಗಿಯೋ ಅಥವಾ.. ?

ನಿಜವಾದ ಮೆರಿಟ್‌ನ ರೆಕ್ಕೆ ಕತ್ತರಿಸಿ, ಪುಕ್ಕ ತರೆಯುವುದೇ ಶಿಕ್ಷಣವೇ ?

ಕರ್ವಾಲೋನಂತಹ, ಬಿ.ಜಿ.ಎಲ್ ಸ್ವಾಮಿಯಂತಹ ವಿಜ್ಞಾನಿಗಳಿಗೆ ಮಾರ್ಗದರ್ಶನ ಮಾಡಬಹುದಾಂತಹವರು ನಮ್ಮ ಶಿಕ್ಷಣ ಪದ್ಧತಿಯ ಕಸದ ಬು ಟ್ಟಿಗೆ ಎಸೆಯಲ್ಪಡುತ್ತಿದ್ದಾರೆ. ಇದು ನಮ್ಮ ಶಿಕ್ಷಣದ ಪದ್ಧತಿಯಲ್ಲಿ ಹುದುಗಿರುವ ಗಂಭೀರ ರೋಗ. ಇಂತಹ ಸಣ್ಣ, ದೊಡ್ಡ ವಜ್ರಗಳಿಗೆ ಸಾಣೆ ಹಿಡಿದು ಹೊಳಪು ನೀಡಿ ಅವರಲ್ಲಿ ಹುದುಗಿದ ಜ್ಞಾನ ಭಂಡಾರ ಸಮಾಜದ ಉಪಯೋಗಕ್ಕೆ ದಕ್ಕಿದರೆ ಮಾತ್ರ ಮೀಸಲಾತಿ ಎಂಬುದು ತನ್ನ ನಿಜ ಅರ್ಥದಲ್ಲಿ ಫಲಿಸುವುದು

ಚೋಮನ ದುಡಿ

ಜಿ. ಎನ್. ನಾಗರಾಜ್ ಭಾಗ -3

"ಅಲ್ಲಿ ಕೈ ಹಾಕಬೇಡ ಕಣೊ, ಅಲ್ಲಿ ದೊಡ್ಡ ದೊಡ್ಡ ಕಲ್ಲೇಡಿಗಳು ಇರ್ತಾವೆ, ಅದರ ಕೊಂಡಿ ಎಷ್ಟು ಬಲವಾಗಿರ್ತಾವೆ ಅಂದರೆ ನಿನ್ನ ಬೆರಳುಗಳನ್ನೇ ಕಚಕ್ ಎಂದು ಕತ್ತರಿಸಿಬಿಡುತ್ವೆ" ಎಂದು ನನ್ನ ಜೊತೆ ದನ ಕಾಯುವ ಗೆಳೆಯ ಗಾಬರಿಯಿಂದ ಕಿರುಚಿದ. ನಾನು ಕೆರೆಯ ಕೋಡಿಯೊಂದಕ್ಕೆ ಕಟ್ಟಿದ್ದ ಕಲ್ಲುಗಳ ಸಂದಿಗೆ ಕೈ ಹಾಕಿದ್ದವನು ಗಾಬರಿಯಿಂದ ಕೈ ತೆಗೆದೆ. ನಮ್ಮ ಗಮನವನ್ನೆಲ್ಲಾ ಏಡಿಯ ಕೊಂಡಿಗಳ ಚಲನೆಯ ಮೇಲೆ ಕೇಂದ್ರೀಕರಿಸಿ, ಕೈ ಗಾಯ ಮಾಡಿಕೊಳ್ಳದೇ ಅದನ್ನು ಗಪ್ಪನೆ ಹಿಡಿಯುವುದರಲ್ಲಿ ನಾನು ಆಗಲೇ ಹೆಸರುವಾಸಿಯಾಗಿದ್ದೆ. ದನ ಮೇಯಿಸುತ್ತಾ ಹೊಲ, ಗದ್ದೆಗಳ ಬದುಗಳನ್ನು, ಗೋಮಾಳಗಳನ್ನು ಅಲೆಯುತ್ತಿದ್ದೆವು. ಆಟವಾಡುತ್ತಲೇ ಅನೇಕ ಸಾಹಸಗಳನ್ನೂ ಮಾಡುತ್ತಿದ್ದೆವು. ಕಾರೆ ಹಣ್ಣು, ಬೋರೆ ಹಣ್ಣು, ಎಲಚಿ ಹಣ್ಣು, ಕಾಕಿಹಣ್ಣು, ನೇರಿಳೆ, ಹತ್ತಿ ಹಣ್ಣು ಮೊದಲಾದ ಕಾಡು ಹಣ್ಣುಗಳನ್ನು ಹುಡುಕುತ್ತಾ, ಮೆಲ್ಲುತ್ತಾ ಸಾಗುತ್ತಿದ್ದೆವು.

"ಇದು ಹಾಲೇಡಿ. ಇದನ್ನು ತಿನ್ನುವುದಕ್ಕೆ ಬರುವುದಿಲ್ಲ."

"ಇವು ವಿಷದ ಅಣಬೆಗಳು. ಇವು ತುಪ್ಪದ ಅಣಬೆಗಳು."

ಹೀಗೆ ಅನೇಕ ಸಂಗತಿಗಳನ್ನು ಹೀಗೆ ನನ್ನ ದನ ಕಾಯುವ ಮಿತ್ರರಿಂದ ಕಲಿತೆ. ಇವು ನನಗೆ ಗೊತ್ತಾಗುವಂತೆ ಕಲಿತದ್ದು. ಆದರೆ ನನಗೇ ಗೊತ್ತಾಗದಂತೆ ನನ್ನ ಸುಪ್ತ ಪ್ರಜ್ಞೆ ಕಲಿತದ್ದು ಎಷ್ಟು ಎಂಬುದು ಮುಂದೆ ಅನೇಕ ವರ್ಷಗಳಲ್ಲಿ ನನಗೆ ಅರಿವಾಗುತ್ತಾ ಹೋಯಿತು.

ಕೇವಲ ಕಾಡು ಗಿಡಗಳ ಬಗ್ಗೆ ಮಾತ್ರವಲ್ಲ, ದನಗಳ ಕುರಿಗಳ, ಮಾವಿನ ಹಣ್ಣಿನ, ಭತ್ತ, ರಾಗಿಯ ವಿವಿಧ ತಳಿಗಳ ಬಗ್ಗೆ ಪ್ರಾಥಮಿಕ ಜ್ಞಾನವನ್ನು ಪಡೆದುಕೊಂಡದ್ದು ಆಗಲೇ.

ನಮ್ಮ ಮನೆಯಲ್ಲಿ ಎರಡು ಹಸುಗಳಿದ್ದವು. ಅವುಗಳನ್ನು ಹೊರಗೆ ಮೇಯಿಸುವುದು, ಮನೆಯಲ್ಲಿ ಅದರ ಮೇವು, ನೀರು ನಿಡಿ, ಸಗಣಿ ಬಾಚುವುದು, ಕೆಲ ಕಾಲ ಪೂರ್ಣವಾಗಿ ನಂತರ ತಮ್ಮಂದಿರು ಬೆಳೆದ ಮೇಲೆ ಭಾಗಶಃ ಐದನೆ ಕ್ಲಾಸಿನಿಂದ ಬಿಎಸ್ಸಿ (ಕೃಷಿ) ಡಿಗ್ರಿ ಮುಗಿಸುವವರೆಗೆ ನನ್ನ ಪಾಲಿಗೆ ಬಂದಿತ್ತು. ರಜಾ ದಿನಗಳಲ್ಲಿ ಹಗಲೆಲ್ಲಾ, ಶಾಲೆಯಿರುವ ದಿನಗಳಲ್ಲಿ ಸಂಜೆ ದನ ಮೇಯಿಸುವುದು ನಮ್ಮ ರೂಢಿಯಾಗಿ-ತ್ತು. ಹಗಲೆಲ್ಲಾ ದನ ಮೇಯಿಸುವಾಗ ದನ ಕಾಯುವ ಬಾಲಕ, ಬಾಲಕಿಯರ ಜೊತೆ-ಯ ಒಡನಾಟ ಕಲಿಸಿದ ಪಾಠಗಳು ಯಾವುದೇ ಕಾಲೇಜಿನಲ್ಲಿ ಕಲಿಯುವ ವಿಷಯಗಳಿಗೆ ಪೂರಕವಾಗಿತ್ತು. ಕಾಲೇಜುಗಳಲ್ಲಿ ಕಲಿಸದ, ಆದರೆ ಕಲಿಯಬೇಕಾದ ವಿಷಯಗಳನ್ನು ಅಲ್ಲಿ ಕಲಿತಿದ್ದೇನೆ. ದನ ಕಾಯುವ ಧೀರ ಬಾಲರೇ ನಮ್ಮ ಪ್ರಾಧ್ಯಾಪಕರು. ಆದರೆ ಕಲಿಸುವ, ಕಲಿಯುತ್ತಿದ್ದ ವಿಧಾನ ಮಾತ್ರ ಆಸಕ್ತಿಕರವಾಗಿತ್ತು ಹಾಗೂ ಸಾಹಸಮಯವಾಗಿತ್ತು.

ನನ್ನ 'ಪ್ರಾಧ್ಯಾಪಕ'ನಿಗೇ ಕೆನ್ನೆಗೆ ಹೊಡೆಯುವ ಸಂಕಟ

ನನ್ನ ಇಂತಹ ಪ್ರಾಧ್ಯಾಪಕರಲ್ಲೊಬ್ಬ ನನ್ನ ಸಹಪಾಠಿಯೂ ಆಗಿದ್ದ. ಆದರೆ ಶಾಲಾ ಪಾಠಗಳಲ್ಲಿ ಅವನು ಹಿಂದೆ. ನಾನು ಮುಂದೆ. ಕೆಲವೊಮ್ಮೆ ಇದು ನನಗೆ ಸಂಕಟ ತರುತ್ತಿತ್ತು. ನಮ್ಮ ಮೇಷ್ಟರೊಬ್ಬರು ಪದೆ ಪದೇ ಒಂದು ಶಿಕ್ಷೆಗೆ ವಿದ್ಯಾರ್ಥಿಗಳನ್ನು ಗುರಿಪಡಿಸುತ್ತಿದ್ದರು. ಅವರು ಕೇಳುವ ಪ್ರಶ್ನೆಗೆ ಉತ್ತರ ಹೇಳದ ವಿದ್ಯಾರ್ಥಿಗಳಿಗೆ ಉತ್ತರ ಹೇಳಿದ ವಿದ್ಯಾರ್ಥಿಗಳಿಂದ ಕೆನ್ನೆಗೆ ಪಟಾರನೆ ಹೊಡೆಸುತ್ತಿದ್ದರು. ಮೆತ್ತಗೆ ಹೊಡೆದರೆ ಅವರೇ ಹೊಡೆಯುತ್ತಿದ್ದರು. ನನಗೆ ಶಾಲೆಯ ಹೊರಗಿನ ನನ್ನ ಪ್ರಾಧ್ಯಾಪಕನಿಗೆ ಆಗಾಗ್ಗೆ ಕೆನ್ನೆಗೆ ಹೊಡೆಯುವ ಪಾಳಿ ಬರುತ್ತಿತ್ತು. ಬೇರೆಯವರಿಗೆ ಹೆಮ್ಮೆಯಿಂದ ಪಟಾರನೆ ಹೊಡೆಯುತ್ತಿದ್ದ ನನಗೆ ಈ ಮಿತ್ರನಿಗೆ ಹೊಡೆಯುವ ಮನಸ್ಸು ಬರುತ್ತಿರಲಿಲ್ಲ. ಮೆತ್ತಗೆ ಹೊಡೆದರೆ ಅವನೇ ಕಣ್ಣಿನಲ್ಲಿಯೇ ಗದರುತ್ತಿದ್ದ. ಗಟ್ಟಿಯಾಗಿ ಹೊಡೆಯುವಂತೆ ಒತ್ತಾಯಿಸುತ್ತಿದ್ದ. ಇಲ್ಲದಿದ್ದರೆ ಅವನು ಮೇಷ್ಟರಿಂದ ಹೊಡೆತ ತಿನ್ನಬೇಕಾಗುತ್ತಿತ್ತು.



ಇಂತಹ ಅನುಭವ ನಾಡಿನ ಅನೇಕರಿಗೆ , ಆಗಿದೆ. ನಮ್ಮ ಸಾಹಿತಿಗಳು ಇದನ್ನು ಕರ್ವಾಲೋ ಕಾದಂಬರಿಯ ಮಂದಣ್ಣ, ವೆಂಕಟ, ಕುವೆಂಪುರವರು ಪುಟ್ಟಣ್ಣ, ಗುತ್ತಿ, ಭೈರ ಶಿವರಾಮ ಕಾರಂತರು ಚೋಮನ ದುಡಿಯ ಮೂಲಕ ಚೋಮ, ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ಕಾಕನಕೋಟೆಯ ಕಾಚ ಇಂತಹ ಪಾತ್ರಗಳ ಮೂಲಕ ಎತ್ತಿ ತೋರಿಸಿದ್ದಾರೆ. ಕರ್ವಾಲೋನಂತಹ, ಬಿ.ಜಿ.ಎಲ್ ಸ್ವಾಮಿಯಂತಹ ವಿಜ್ಞಾನಿಗಳಿಗೆ ಮಾರ್ಗದರ್ಶನ ಮಾಡಬಹುದಾಂತಹವರು ನಮ್ಮ ಶಿಕ್ಷಣ ಪದ್ಧತಿಯ ಕಸದ ಬುಟ್ಟಿಗೆ ಎಸೆಯಲ್ಪಡುತ್ತಿದ್ದಾರೆ. ಇದು ನಮ್ಮ ಶಿಕ್ಷಣದ ಪದ್ಧತಿಯಲ್ಲಿ ಹುದುಗಿರುವ ಗಂಭೀರ ರೋಗ. ಇಂತಹ ಸಣ್ಣ, ದೊಡ್ಡ ವಜ್ರಗಳಿಗೆ ಸಾಣೆ ಹಿಡಿದು ಹೊಳಪು ನೀಡಿ ಅವರಲ್ಲಿ ಹುದುಗಿದ ಜ್ಞಾನ ಭಂಡಾರ ಸಮಾಜದ ಉಪಯೋಗಕ್ಕೆ ದಕ್ಕಿದರೆ ಮಾತ್ರ ಮೀಸಲಾತಿ ಎಂಬುದು ತನ್ನ ನಿಜ ಅರ್ಥದಲ್ಲಿ ಫಲಿಸುವುದು.

ಜ್ಞಾನ ಸಂಪತ್ತನ್ನು ತುಳಿಯುವ ಶಿಕ್ಷಣ ಪದ್ಧತಿ

ನಮ್ಮ ಶಿಕ್ಷಣ ಪದ್ಧತಿ 10+2+3/4/5 ವರ್ಷಗಳ ವಿಂಗಡಣೆಯನ್ನು ಅನುಸರಿಸುತ್ತಿದೆ. ಈ ಪದ್ಧತಿಯ ಯಾವ ಹಂತದಲ್ಲೂ ಒಬ್ಬ ವಿದ್ಯಾರ್ಥಿಯಲ್ಲಿ ತನ್ನ ವಾತಾವರಣದಿಂದ, ಬದುಕಿನ ಅನುಭವದಿಂದ ಪಡೆದ ತಿಳುವಳಿಕೆಯನ್ನು ಪರಿಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಅದಕ್ಕೆ ಯಾವ ಅಂಕವೂ ಇಲ್ಲ. ಶಾಲೆಗೆ ಸೇರಿದ ಮಗುವನ್ನು ಅದರ ಪರಿಸರದಿಂದ ಬೇರ್ಪಡಿಸಿ ಅದು ಅಲ್ಲಿಯವರೆಗೆ ಪಡೆದ ಹಾಗೂ ಮುಂದೆ ಆ ಪರಿಸರದಿಂದ ಬರುವ ತಿಳುವಳಿಕೆಯನ್ನು ಬ್ಯಾನ್ ಮಾಡಿದಂತಾಗಿದೆ. ಈ ಎಲ್ಲ ಜ್ಞಾನವನ್ನು ಸೋಪು ಹಾಕಿ ತೊಳೆದು ಮಡಿ ಮಾಡಿ ಎಲ್ಲರನ್ನೂ ಒಂದೇ ರೂಪಕ್ಕೆ ಇಳಿಸಿ ಶಿಕ್ಷಣ ವ್ಯವಸ್ಥೆಯ ಮೇಲೆ ಹಿಡಿತ ಹೊಂದಿರುವವರು ರೂಪಿಸಿದ ಪಠ್ಯವನ್ನು ಅವರ ತಲೆಗೆ ತುರುಕುವುದೇ ಶಿಕ್ಷಣ ಎಂಬಂತಾಗಿದೆ. ವಿವಿಧ ರೀತಿಯ ವೃತ್ತಿ, ಕೆಲಸಗಳ ಬದುಕಿನ ವೈವಿಧ್ಯಮಯ ಅನುಭವ ಶ್ರೀಮಂತಿಕೆಯನ್ನು ತೊಡೆದು ಹಾಕುವುದೇ ಶಿಕ್ಷಣವೇ? ಕುಣಿದು ನಲಿಯುವ ಎಳೆಯ ಮಕ್ಕಳನ್ನು ನಾಲ್ಕು ಗೋಡೆಗಳ ಮಧ್ಯೆ ಕೂಡಿಹಾಕಿ ಬದುಕಿನಿಂದ ಬೇರ್ಪಡಿಸಿದ ಅಪರಿಚಿತವಾದ ಪಠ್ಯವನ್ನು ಒದರಿದರೆ ಅವರು ಬಾಯಿಪಾಠ ಮಾಡದೇ ಬೇರೆ ಹೇಗೆ ಕಲಿಯಲು ಸಾಧ್ಯ? ವಿದ್ಯಾರ್ಥಿಗಳ ಸೃಜನಶೀಲತೆ, ಕ್ರಿಯಾಶೀಲತೆಯನ್ನು ಕುಂದಿಸಿ, ವಿಚಾರಶಕ್ತಿಯನ್ನು ಬೆಳೆಸುವ ಬದಲಾಗಿ ಉರು ಹಚ್ಚುವ ಈ ಶಿಕ್ಷಣ ಪದ್ಧತಿ ಮೆರಿಟ್ ಹಾಗೂ ದಕ್ಷತೆಯನ್ನು ಬೆಳೆಸಲು, ಪೋಷಿಸಲು ನೆರವಾಗಬಲ್ಲದೆ ?

ಭಾಷೆಯ ಕಲಿಕೆಯನ್ನೇ ನೋಡೋಣ. ಹರಳು ಉರಿದಂತೆ ತಮ್ಮ ಮಾತೃಭಾಷೆಯನ್ನು ಮಾತನಾಡುವ ಮಕ್ಕಳು ಮೊದಲ ತರಗತಿಗಳಲ್ಲಿಂದ ಆರಂಭವಾಗಿ ಪದವಿ ಪರೀಕ್ಷೆಗಳವರೆಗೂ ಕನ್ನಡದಲ್ಲಿ ಬರೆಯಲು, ತಮಗೆ ಚೆನ್ನಾಗಿ ಗೊತ್ತಿರುವ ವಿಷಯವನ್ನು ಮಂಡಿಸಲು ತಿಣುಕುವಂತಾಗಿದೆ, ರಾಜ್ಯದ ಉದ್ದಗಲಕ್ಕೂ ಇರುವ ವೈವಿಧ್ಯಮಯವಾದ ಆಡು ಭಾಷೆಗೆ ಹೊರತಾದ ಗ್ರಂಥ ಭಾಷೆಯನ್ನು ಮೊದಲ ತರಗತಿಯಿಂದಲೇ ಆರಂಭಿಸಿಬಿಡುವುದರಿಂದ. ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ಆರಂಭಿಸಿದ ದಿನಗಳಿಂದಲೇ ಬಹಳ ಒಪ್ಪವಾದ ನೀತಿಯೆಂದೇ ಇದನ್ನು ಅನುಸರಿಸಲಾಗಿದೆ. ಕನ್ನಡದ ಆಚಾರ್ಯ-ರೆಂದು ಖ್ಯಾತರಾದ ಬಿ.ಎಂ.ಶ್ರೀಯವರು 'ಕನ್ನಡ ಮಾತು ತಲೆಯೆತ್ತುವ ಬಗೆ'ಯನ್ನು ನಿರೂಪಿಸುತ್ತಾ "ಗ್ರಾಮ್ಯವನ್ನು ಬಿಟ್ಟು ವಿದ್ಯಾವಂತರೂ, ಉತ್ತಮ ಜಾತಿಯವರೂ ಆಡತಕ್ಕ ಸ್ಫುಟವಾ[ದ] ಕನ್ನಡವನ್ನು ಗ್ರಂಥ ಭಾಷೆಯಾಗಿ ತಿರುಗಿ[ಸಿ] ಬಿಟ್ಟರೆ, ಅಚ್ಚು ಹಾಕುವುದರಿಂದಲೂ, ಮಕ್ಕಳಿ[ಗೆ] ಕಲಿಸುವುದರಿಂದಲೂ ಇದೇ ನೆಲೆಯಾಗಿ ನಿಂ[ತು] ಎಲ್ಲೆಡೆ ಹರಡುತ್ತದೆ." ಕನ್ನಡಕ್ಕಾಗಿ ಹಗಲಿರುಳು ಶ್ರಮಿಸಿದ ರಾಜ ಸೇವಾಸಕ್ತ ಬಿ.ಎಂ. ಶ್ರೀಯವ[ರ] ಕೊಡುಗೆಯನ್ನು ಗುರುತಿಸುತ್ತಲೇ ಇಂತಹ ಧೋರಣೆಗಳು ಅವರಲ್ಲಿ, ಆಧುನಿಕ ಶಿಕ್ಷಣವನ್ನು ರೂಪಿಸಿದ ಅನೇಕ 'ಆಚಾರ್ಯ ಪುರುಷ'ರ[ಲ್ಲಿ] ಸರ್ವ ವ್ಯಾಪಿಯಾಗಿವೆ ಎಂಬುದನ್ನು ಗುರುತಿಸಬೇಕು. ಇವು ಕನ್ನಡ ಭಾಷೆಯ ಕಲಿಕೆಯಂತಹ ಮೂಲಭೂತ ವಿಷಯದಲ್ಲಿ ಮೇಲ್ಜಾತಿಗಳಿಗೆ ತಂತಾನೆ ಮೀಸಲಾತಿಯನ್ನು ಒದಗಿಸಿ ಕೊಟ್ಟಿದೆ. ಅಂದಿನಿಂದ ಇಂದಿನವರೆಗೆ ಶೂದ್ರರನ್ನು, ಪಂಚಮರನ್ನು ಉಪಾಧ್ಯಾಯರ ತೆಗಳಿಕೆಗೆ ತುತ್ತಾಗುವಂತೆ ಮಾಡಿದೆ. ಈ ಜಾತಿಗಳ ಅಸಂಖ್ಯಾತ ಜನರು ನಿಂತಲ್ಲಿಯೇ ಅವಮಾನದಿಂದ ಕುಗ್ಗಿ ಹೋಗಿದ್ದಾರೆ.

ನಮಗೆ ಬೇಕಾದ್ದು ವಡ್ಡರ, ಕಮ್ಮಾರರ, ನೇಕಾರರ, ರೈತ ಕೂಲಿಕಾರರ ಭಾಷೆ

ಇದರ ಫಲವೆಂದರೆ ನಮ್ಮ ಪತ್ರಿಕೆಗಳು, ಸಿನೆಮಾಗಳು, ಟಿವಿ ಧಾರಾವಾಹಿಗಳು, ಕಾರ್ಯಕ್ರಮಗಳು, ವಾರ್ತೆಗಳು ಎಲ್ಲೆಲ್ಲಿಯೂ ಉತ್ತಮ ಜಾತಿಯ 'ಸಂಸ್ಕರಿಸಿದ' ಕನ್ನಡವೇ ತುಂಬಿ ಹೋಗಿದೆ. ತಮ್ಮ ಜವಾರಿ ತಾಯ್ನುಡಿ ಕನ್ನಡದಿಂದ ಈ ಗ್ರಾಂಥಿಕ ಕನ್ನಡಕ್ಕೆ ವರ್ಗಾವಣೆಯೇ ಪ್ರಯಾಸಕರವಾಗಿ ತಮ್ಮ ಬದುಕಿನ ಶ್ರೀಮಂತ ಅನುಭವ ಮತ್ತು ಅದರಿಂದ ಪಡೆದ ಜ್ಞಾನವನ್ನು ಬಿಚ್ಚಿಡಲು ಎಳೆಯರು ಸೋಲುತ್ತಾರೆ. ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತಾರೆ. ಈ ಹಂತದಲ್ಲಿಯೇ ಬಹಳಷ್ಟು ನಿಜ ಮೆರಿಟ್‌ವಂತ ಕನ್ನಡಿಗರನ್ನು ಬದಿಗೆ ತಳ್ಳುವ ಕ್ರಿಯೆ ಪರಿಣಾಮಕಾರಿಯಾಗಿ ಆರಂಭವಾಗುತ್ತದೆ. ದುಡಿಮೆಯ ಮೂಲಕ ಕನ್ನಡವನ್ನು ರೂಪಿಸಿದ ಈ ಜನ ಸಮುದಾಯಗಳು ತಮ್ಮ ವಿವಿಧ ರೀತಿಯ ದುಡಿಮೆಯನ್ನು ವರ್ಣಿಸಲು ಬೇಕಾದ ಪದ ಸಂಪತ್ತನ್ನು ಸೃಷ್ಟಿಸಿಕೊಂಡಿದ್ದರು. ತಾವು ಉಪಯೋಗಿಸುವ ಉಪಕರಣ, ಸಲಕರಣೆಗಳಿಗೆ ಅಚ್ಚ ಕನ್ನಡದ ಹೆಸರನ್ನು ಬಳಸುತ್ತಿದ್ದರು. ಆದರೆ ಈ ಜಾನಪದ ಪದ ಸಂಪತ್ತನ್ನು ಕಸದ ಬು ಟ್ಟಿಗೆ ಹಾಕಿ ಇಂಗ್ಲಿಷಿನಲ್ಲಿ ಪಠ್ಯಗಳನ್ನು ರಚಿಸಿದರು. ಅದನ್ನು ಕನ್ನಡಕ್ಕೆ ಅನುವಾದ ಮಾಡಿದರು.

ಈ ಅನುವಾದ ಮಾಡಿದವರು ಯಾರು ? ಜನ ನುಡಿಯ ಸಂಪರ್ಕವಿಲ್ಲದ, ದುಡಿಮೆಯಿಂದ ಶತಶತಮಾನಗಳ ಹಿಂದೆಯೇ ದೂರವಾದ ಈ ಅನುವಾದಕರು ದುಡಿಮೆಗೆ ಸಂಬಂಧಿಸಿದ ವಿಜ್ಞಾನಗಳ ಪರಿಕಲ್ಪನೆಗಳನ್ನು ಕನ್ನಡದಲ್ಲಿ ವಿವರಿಸಲು ಸೋತು ಸಂಸ್ಕೃತ ಪದಗಳೇ ತುಂಬಿದ-'ಸಂಸ್ಕೃತ ಭೂಯಿಷ್ಠ' ಪುಸ್ತಕಗಳನ್ನಾಗಿ ಮಾಡಿದರು. ಈ ಕನ್ನಡದ ಪುಸ್ತಕಗಳ ಮೂಲಕ ವಿಜ್ಞಾನವನ್ನು ಅರ್ಥಮಾಡಿಕೊಳ್ಳುವುದು ಸಾಧ್ಯ[ವೇ] ಇಲ್ಲ. ಅದಕ್ಕಿಂತ ಸ್ವಲ್ಪ ಒದ್ದಾಡಿದರೆ ಇಂಗ್ಲಿಷ್

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಗುಳೆ ಹೋಗುವ ಲಂಬಾಣಿಗಳ ಗೋಳಿಗೆ ಕೊನೆ ಇಲ್ಲವೆ ?

ಕೂಲಿ ಅರಸಿಕೊಂಡು ಮಹಾರಾಷ್ಟ್ರಕ್ಕೆ ಗುಳೆ ಹೊರಟ್ಟಿದ್ದ 54 ಮಂದಿ ಲಂಬಾಣಿ ಕೂಲಿಕಾರರನ್ನು ಹೊತ್ತೊಯ್ಯುತ್ತಿದ್ದ ಸರಕು ಸಾಗಣೆ ವಾಹನ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಹಲಕಿ ಕ್ರಾಸ್ ಬಳಿ ಅಪಘಾತಕ್ಕೀಡಾಗಿ ಅವರ ಪೈಕಿ 22 ಮಂದಿ ಸಾವನ್ನಪ್ಪಿದ ಘಟನೆ ರಾಜ್ಯದೆಲ್ಲೆಡೆ ಜನಮನ ಕಲಕಿದೆ. ಮೃತಪಟ್ಟವರಲ್ಲಿ 9 ಮಕ್ಕಳು, 9ಮಹಿಳೆಯರು ಸೇರಿದ್ದಾರೆ. ಬದುಕಿ ಉಳಿದವರಲ್ಲಿ 30 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಇವರೆಲ್ಲರೂ ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ 8 ಲಂಬಾಣಿ ತಾಂಡಾಗಳ ನಿವಾಸಿಗಳು.

ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳ ಕೃಷಿ ಕೂಲಿಕಾರರು ಮತ್ತು ಬಡ ರೈತರು ಪ್ರತಿವರ್ಷ ಗುಳೆ ಹೋಗುತ್ತಿರುತ್ತಾರೆ. ಇತ್ತೀಚಿನ ದಶಕಗಳಲ್ಲಿ ಗುಳೆಹೋಗುವ ಸಮಸ್ಯೆ ಉಲ್ಬಣಗೊಂಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉದಾರೀಕರಣ ಧೋರಣೆಗಳ ಪರಿಣಾಮವಾಗಿ ಬೇಸಾಯ ಒಂದು ಲಾಭದಾಯಕ ವೃತ್ತಿಯಾಗಿ ಉಳಿದಿಲ್ಲ. ಬೇಸಾಯದ ಕ್ಷೇತ್ರದಲ್ಲಿ ಉದ್ಯೋಗದ ಅವಕಾಶಗಳು ಕುಸಿದಿದ್ದು ಗುಳೆ ಹೋಗುವುದು ಹೆಚ್ಚಾಗಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ರಾಜ್ಯ ಸರ್ಕಾರ ವಿಫಲವಾಗಿರುವುದರಿಂದ ಗ್ರಾಮೀಣ ಬಡವರ ವಲಸೆ ಒಂದು ಗಂಭೀರ ಸಾಮಾಜಿಕ ಸಮಸ್ಯೆಯಾಗಿ ಉಲ್ಬಣಗೊಳ್ಳುತ್ತಿದೆ.

ಗುಲ್ಬರ್ಗಾ, ಯಾದಗಿರಿ ಮುಂತಾದ ಅತ್ಯಂತ ಹಿಂದುಳಿದ ಜಿಲ್ಲೆಗಳಿಂದ ಪ್ರತಿವರ್ಷ ಲಕ್ಷಾಂತರ ಬಡವರು ಒಪ್ಪತ್ತಿನ ಕೂಳು ಹುಡುಕುತ್ತಾ ಗುಳೆ ಹೋಗುತ್ತಿರುತ್ತಾರೆ. ಬಸ್ ಪ್ರಯಾಣ ದುಬಾರಿ ಆಗಿರುವುದರಿಂದ ಗುಳೆ ಹೋಗುವವರು ಸಿಕ್ಕ ವಾಹನ ಹತ್ತಿಕೊಂಡು ಪ್ರಯಾಣ ಮಾಡುತ್ತಾರೆ. ಟ್ರಕ್ಕು, ಟ್ರಾಕ್ಟರು, ಕ್ಯಾಂಟರ್ ಮುಂತಾದ ಸರಕು ಸಾಗಾಣೆಯ ವಾಹನಗಳಲ್ಲಿ ಪ್ರಯಾಣ ಮಾಡುವುದು ಅಪಾಯಕಾರಿ ಎಂಬುದು ಕೂಲಿಕಾರರಿಗೆ ಗೊತ್ತಿದ್ದರೂ ಅನಿವಾರ್ಯವಾಗಿ ಅಂತಹ ವಾಹನಗಳಲ್ಲಿ ಪ್ರಯಾಣಮಾಡುತ್ತಾರೆ. ಇಂತಹ ವಾಹನಗಳೇ ಹೆಚ್ಚಾಗಿ ಅಪಘಾತಕ್ಕೀಡಾಗುತ್ತವೆ.

ಎಲ್ಲಾ ಜಾತಿ ಜನಾಂಗಗಳಿಗೆ ಸೇರಿದ ಬಡವರು ಹೊಟ್ಟೆಪಾಡಿಗಾಗಿ ಗುಳೆ ಹೋಗುತ್ತಿರುತ್ತಾರೆ. ಹೀಗೆ ಗುಳೆ ಹೋಗುವವರಲ್ಲಿ ಲಂಬಾಣಿ ಸಮುದಾಯಕ್ಕೆ ಸೇರಿದವರೇ ಅತಿಹೆಚ್ಚು. ಉತ್ತರ ಮತ್ತು ಮಧ್ಯ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಲಂಬಾಣಿ ಜನರಿದ್ದಾರೆ. ಲಂಬಾಣಿ ಕುಟುಂಬಗಳಲ್ಲಿ ಯಾವತ್ತೂ ಗುಳೆ ಹೋಗದಿರುವ ಕುಟುಂಬಗಳ ಸಂಖ್ಯೆ ತೀರಾ ವಿರಳ. ಕಾಫಿ ಸೀಮೆಗೆ ಅವರು ಗುಳೆ ಹೋಗುತ್ತಾರೆ. ಕಟ್ಟಡ ಕಾರ್ಮಿಕರಿಗಾಗಿ ಬೆಂಗಳೂರು, ಮಂಗಳೂರು ಮುಂತಾದ ನಗರಗಳಿಗೆ ವಲಸೆ ಹೋಗುತ್ತಾರೆ. ಗೋವಾ, ಮಹಾರಾಷ್ಟ್ರ ಮುಂತಾದ ಹೊರರಾಜ್ಯಗಳಿಗೂ ಇವರು ವಲಸೆ ಹೋಗುತ್ತಾರೆ. ಮೊನ್ನೆ ಬೆಳಗಾವಿ ಹತ್ತಿರ ಅಪಘಾತಕ್ಕೀಡಾದ ಕ್ಯಾಂಟರ್‌ನಲ್ಲಿ ಪ್ರಯಾಣಿಸುತ್ತಿದ್ದವರೆಲ್ಲರೂ ಲಂಬಾಣಿ ಸಮುದಾಯಕ್ಕೆ ಸೇರಿದವರು. ರಸ್ತೆ ಅಪಘಾತಗಳಲ್ಲಿ ಲಂಬಾಣಿ ಕೂಲಿಕಾರರು ಪ್ರಾಣ ಕಳೆದುಕೊಂಡ ಘಟನೆಗಳು ಈ ಹಿಂದೆಯೂ ಸಂಭವಿಸಿವೆ.

ರಾಜ್ಯದಲ್ಲಿರುವ 3000ಕ್ಕೂ ಹೆಚ್ಚು ತಾಂಡಾಗಳಲ್ಲಿ ವಾಸ ಇರುವ ಲಂಬಾಣಿ ಜನಗಳು ಆಳುವ ಸರ್ಕಾರಗಳಿಂದ ನಿರಂತರವಾಗಿ ನಿರ್ಲಕ್ಷಕ್ಕೆ ಒಳಪಟ್ಟವರು. ಇವರಲ್ಲಿ ಶೇ. 1ಕ್ಕಿಂತಲೂ ಕಡಿಮೆ ಪ್ರಯಾಣದ ಕುಟುಂಬಗಳಿಗೆ ಮಾತ್ರ ಅಲ್ಪಸ್ವಲ್ಪ ಭೂಮಿ ಇದೆ. ಬಹುತೇಕವಾಗಿ ಭೂರಹಿತರಾಗಿರುವ ಇವರು ಕೂಲಿನಾಲಿ ಮಾಡಿಯೇ ಜೀವನ ಸಾಗಿಸುತ್ತಿರುತ್ತಾರೆ. ಇವರು ವಾಸಿಸುವ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವ ಭರವಸೆಯನ್ನು ಸರ್ಕಾರಗಳು ಈಡೇರಿಸದೆ ಇರುವುದರಿಂದ ಸರ್ಕಾರದ ಅನೇಕ ಸೌಲಭ್ಯಗಳನ್ನು ಪಡೆಯಲು ಅವರಿಗೆ ಸಾಧ್ಯವಾಗುತ್ತಿಲ್ಲ. ಇತ್ತೀಚೆಗೆ ಬಂಜಾರಾ ಅಭಿವೃದ್ಧಿ ನಿಗಮ ಸ್ಥಾಪನೆಯಾಗಿದ್ದರೂ ಲಂಬಾಣಿ ಸಮುದಾಯಕ್ಕೆ ಅದರಿಂದ ಗಮನಾರ್ಹವಾದ ಸೌಲಭ್ಯಗಳು ದೊರೆಯಲಾರಂಭಿಸಿಲ್ಲ.

ಲಂಬಾಣಿ ಜನಗಳು ಕಷ್ಟ ಜೀವಿಗಳು, ಜೀವನ ನಿರ್ವಹಣೆಗಾಗಿ ಎಂತಹ ಕಷ್ಟದ ಕೆಲಸಗಳಿಗೂ ಹಿಂದೇಟು ಹಾಕುವವರಲ್ಲ. ಮೊನ್ನೆ ಅಪಘಾತಕ್ಕೆ ಒಳಗಾದವರು ಮಹಾರಾಷ್ಟ್ರದ ಸಾವಂತವಾಡಿಗೆ ಕಲ್ಲು ಕ್ವಾರಿ ಕೆಲಸಕ್ಕೆ ಹೋಗುತ್ತಿದ್ದರು. ಇವರ ತಾಂಡಾಗಳು ಹೆಚ್ಚಾಗಿ ಗುಡ್ಡಗಳ ಮೇಲೆ ಇರುತ್ತವೆ. ಭೂರಹಿತರಾಗಿರುವ ಇವರು ತಮ್ಮ ತಾಂಡಾಗಳ ಆಸುಪಾಸಿನಲ್ಲಿರುವ ಸರ್ಕಾರಿ ಭೂಮಿಯನ್ನು ಸಾಗುವಳಿಮಾಡಿ ಬದುಕು ಸಾಗಿಸಲು ಪ್ರಯತ್ನಿಸುತ್ತಿರುತ್ತಾರೆ. ಆದರೆ ಇದುವರೆಗಿನ ರಾಜ್ಯ ಸರ್ಕಾರಗಳು ಬಗರ್ ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸಲು ಮುಂದಾಗದೇ ಇರುವುದರಿಂದ ಇವರು ಉದ್ಯೋಗ ಹುಡುಕಿಕೊಂಡು ಊರೂರು ಅಲೆಯುವಂತಾಗಿದೆ.

ಲಂಬಾಣಿ ಜನ ಪರಂಪರಾಗತ ಮದ್ಯ ತಯಾರಿಕೆಯನ್ನು ಕರಗತಗೊಳಿಸಿಕೊಂಡು ಬಂದವರು. ಇವರು ತಯಾರಿಸುವ ಮದ್ಯ ಸೇವನೆಯಿಂದ ಯಾರಿಗೂ ಪ್ರಾಣಾಪಾಯ ಸಂಭವಿಸಿಲ್ಲ. ಆದರೆ ಮದ್ಯ ತಯಾರಕ ಲಾಭಿಗಳ ಒತ್ತಡಕ್ಕೆ ಮಣಿದಿರುವ ಸರ್ಕಾರ ಇವರು ಮದ್ಯ ತಯಾರಿಸುವುದನ್ನು ನಿಷೇಧಿಸಿದೆ, ಇವರಲ್ಲಿ ಆಸಕ್ತಿ ಇರುವವರಿಗೆ ವೈಜ್ಞಾನಿಕವಾದ ತರಬೇತಿ ನೀಡಿ ಹೆಚ್ಚು ಆರೋಗ್ಯಕರವಾದ ಪಾನಿಯವನ್ನು ತಯಾರಿಸಲು ಇವರಿಗೆ ಲೈಸನ್ಸ್ ಕೊಡಲು ಸರ್ಕಾರ ಮುಂದೆ ಬಂದರೆ ಇವರ ನಿರುದ್ಯೋಗ ಸಮಸ್ಯೆ ಸ್ವಲ್ಪ ಮಟ್ಟಿಗಾದರೂ ಪರಿಹಾರವಾದಿತು ಮಾತ್ರವಲ್ಲ ಬಡವರಿಗೆ ಆರೋಗ್ಯಕ್ಕೆ ಹಾನಿಕರವಲ್ಲದ ಮದ್ಯವನ್ನು ಕಡಿಮೆ ಬೆಲೆಗೆ ಪೂರೈಸಲು ಸಾಧ್ಯವಾಗಬಹುದು.

ಲಂಬಾಣಿ ಜನರನ್ನು ಕೀಳಾಗಿ ಕಾಣುವ ಪ್ರವೃತ್ತಿ ನಮ್ಮ ಸಮಾಜದಲ್ಲಿ ಇನ್ನೂ ಜೀವಂತವಾಗಿದೆ. ಇದ-ರಿಂದಾಗಿ ವಿದ್ಯಾವಂತ ಯುವಕರು ತೀವ್ರ ಹಿಂಸೆಯನ್ನು ಅನುಭವಿಸುತ್ತಿರುತ್ತಾರೆ. ಕಾಂಗ್ರೆಸ್, ಬಿಜೆಪಿ ಮುಂತಾದ ರಾಜಕೀಯ ಪಕ್ಷಗಳು ಇವರನ್ನು ಓಟ್ ಬ್ಯಾಂಕ್ ಆಗಿ ಬಳಸಿಕೊಂಡಿವೆ. ಈ ಸಮುದಾಯದಿಂದ ಪ್ರತಿ ಸಲ ಅನೇಕ ಜನ ಶಾಸಕರಾಗುತ್ತಾರೆ, ಮಂತ್ರಿಗಳೂ ಆಗುತ್ತಾರೆ. ಆದರೆ ಅವರಿಂದ ಅವರ ಅವಕಾಶವಂಚಿತ ಸಮುದಾಯಕ್ಕೆ ಇದುವರೆಗೆ ಯಾವುದೇ ಪ್ರಯೋಜನ ಆಗಿಲ್ಲ. ಶಾಸಕರಾದವರು, ಮಂತ್ರಿಗಳಾದವರು ಸ್ವಂತಕ್ಕೆ ಲಾಭ ಮಾಡಿಕೊಂಡಿದ್ದಾರೆ. ಹೀಗಾಗಿ ಬಡಪಾಯಿ ಜನಗಳಿಗೆ ಗುಳೆ ಹೋಗುವುದು ತಪ್ಪಲಿಲ್ಲ. ದಾರಿಯಲ್ಲೇ ಹೆಣವಾಗುವುದೂ ತಪ್ಪಲಿಲ್ಲ. ಎಲ್ಲಿಯವರೆಗೆ ಇವರು ಎಚ್ಚರಗೊಂಡು, ತಮ್ಮ ಹಕ್ಕುಗಳಿಗಾಗಿ ಹೋರಾಡಲು ಸಂಘಟಿತರಾಗುವುದಿಲ್ಲವೋ ಅಲ್ಲಿಯ ವರೆಗೆ ಅವರ ಬಾಳಿನ ಗೋಳು ಕೊನೆಗೊಳ್ಳಲಾರದು. ●

ಮಡೆಸ್ನಾನ ಮತ್ತು ಪಂಕ್ತಿಬೇಧದ ಪದ್ಧತಿಗಳನ್ನು ನಿಷೇಧಿಸಲು, ಮೌಢ್ಯತೆ ಪ್ರತಿಬಂಧಕ ಮಸೂದೆ ಅಂಗೀಕರಿಸಲು

ಆಗ್ರಹಿಸಿ ಪ್ರತಿಭಟನೆಗೆ ನಿರ್ಧಾರ


ಮಡೆಸ್ನಾನ ಮತ್ತು ಪಂಕ್ತಿಬೇಧದ ಪದ್ಧತಿಗಳನ್ನು ನಿಷೇಧಿಸಲು ಒತ್ತಾಯಿಸಿ ಇದೇ ಡಿಶೆಂಬರ್ 8 ರಂದು ರಾಜ್ಯದಾದ್ಯಂತ ಪ್ರತಿಭಟಿಸಲು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ರಾಜ್ಯ ಸಮಿತಿಯು ನಿರ್ಧರಿಸಿದೆ. ದಕ್ಷಿಣ ಕನ್ನಡದ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಹಾಗೂ ರಾಜ್ಯದ ಸುಮಾರು 65 ಕಡೆಗಳಲ್ಲಿ ಡಿಶೆಂಬರ್ 6 ರಿಂದ 8ರವರೆಗೆ ಎಂಜಲೆಲೆಯ ಮೇಲೆ ಉರುಳಿದರೆ ಚರ್ಮ ರೋಗಗಳು ಮತ್ತಿತರೆ ಖಾಯಿಲೆಗಳು ವಾಸಿಯಾಗುವವು ಎಂಬ ಮೌಢ್ಯತೆ, ಅಂಧಶ್ರದ್ಧೆಯ ಆಚರಣೆಗಳು ನಡೆಯಲಿವೆ. ಇದು ಜಾತಿ ತಾರತಮ್ಯದ ವ್ಯವಸ್ಥೆಯಾಗಿದೆ. ಪಂಕ್ತಿಬೇಧವೂ ಜಾತಿತಾರತಮ್ಮದ ಇನ್ನೊಂದು ಆಚರಣೆಯಾಗಿದ್ದು ಈ ಬಗೆಯ ಎಲ್ಲಾ ಅನಿಷ್ಠ ಆಚರಣೆಗಳನ್ನು ನಿಷೇಧಿಸಬೇಕೆಂದು ಸಿಪಿಐ(ಎಂ) ನಿರಂತವಾಗಿ ಒತ್ತಾಯಿಸುತ್ತಾ, ಹಲವು ಹಂತಗಳ ಚಳುವಳಿಯನ್ನು ನಡೆಸುತ್ತಾ ಬಂದಿದೆ.

ಅಂದು ರಾಜ್ಯದ ಪ್ರಮುಖ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಸಾರ್ವಜನಿಕ ಪ್ರತಿಭಟನಾ ಧರಣಿಯನ್ನು ನಡೆಸಲಾಗುವುದು.

ಇದೇ ಸಂದರ್ಭದಲ್ಲಿ ಮಹಾರಾಷ್ಟ್ರ ಮಾದರಿಯಲ್ಲಿ ಮೂಢನಂಬಿಕೆ ಪ್ರತಿಬಂಧಕ ಕಾಯ್ದೆಯನ್ನು ತರಲು ಕರ್ನಾಟಕ ಸರಕಾರ ಮುಂದಾಗಿದ್ದು ಅದನ್ನು ವ್ಯಾಪಕ ಚರ್ಚೆ, ಸಮಾಲೋಚನೆ, ಸಾರ್ವಜನಿಕ ತಿಳುವಳಿಕೆಯ ಬಳಿಕ ಕರಡು ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸಿ ಅಂಗೀಕರಿಸಬೇಕೆಂದು ಒತ್ತಾಯಿಸಲಾಗುವುದು. ರಾಷ್ಟ್ರೀಯ ಕಾನೂನು ಶಾಲೆಯು ನೀಡಿರುವ ಈ ಕರಡು ಮಸೂದೆಯು ಪಂಕ್ತಿಬೇಧ ಮತ್ತು ಮಡೆಸ್ನಾನ ಪದ್ಧತಿಗಳನ್ನು ನಿಷೇಧಿಸಲು ಸೂಚಿಸಿದೆ. ಇಂತಹ ಮಸೂದೆಯ ವಿರುದ್ಧ ಪ್ರತಿಗಾಮಿ ಶಕ್ತಿಗಳು ಭಾರೀ ಅಪಪ್ರಚಾರದಲ್ಲಿ ತೊಡಗಿ ತಪ್ಪು ಮಾಹಿತಿಗಳಿಂದ ಪ್ರಚೋದಿಸುತ್ತಾ ಜನರನ್ನು ಎತ್ತಿ ಕಟ್ಟಲು ಯತ್ನಿಸುತ್ತಿವೆ. ಇದನ್ನು ಸಮರ್ಥವಾಗಿ ಎದುರಿಸಬೇಕಿದೆ, ವಾಸ್ತವ ಅಂಶಗಳಿಂದ ಜಾಗೃತಗೊಳಿಸಬೇಕಿದೆ.

ಈಗಾಗಲೇ ಹಲವಾರು ಪ್ರಗತಿಪರರು, ಪ್ರಗತಿಪರ ಜನಸಂಘಟನೆಗಳು ನಾಡಿನಾದ್ಯಂತ ಹೋರಾಟಕ್ಕೆ ಇಳಿದಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಿಡುಮಾಮಿಡಿ ಮಠದ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿಯವರ ನೇತೃತ್ವದಲ್ಲಿ 35 ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮಠಾಧೀಶರು ಚಿಂತನಾ ಸಮಾವೇಶ ನಡೆಸಿ ಹಲವಾರು ಸೂಚನೆಗಳನ್ನು ಮುಖ್ಯಮಂತ್ರಿಗಳಿಗೆ ನೀಡಿದ್ದಾರೆ. ಇದು ಅತ್ಯಂತ ಸ್ವಾಗತಾರ್ಹವಾದುದು, ಶ್ಲಾಘನೀಯವಾದುದು.

ಆದರೆ ಇದನ್ನು ಸಹಿಸದ ಕೆಲವು ಸ್ಥಾಪಿತ ಹಿತಾಸಕ್ತಿಗಳು ಅವರಿಗೆ ಬೆದರಿಕೆ ಒಡ್ಡಿ, ದಬ್ಬಾಳಿಕೆಯ ಮೂಲಕ ಅವರ ಧ್ವನಿಯನ್ನು ಅಡಗಿಸಲು ನಡೆಸುತ್ತಿರುವ ಪ್ರಯತ್ನವನ್ನು ಸಿಪಿಐ(ಎಂ) ಖಂಡಿಸಿದೆ. ವೈಚಾರಿಕ ಮಂಥನದಲ್ಲಿ ಭಿನ್ನಾಭಿಪ್ರಾಯಗಳು ಸಹಜವೆಂಬುದನ್ನು ಅವರು ಅರಿಯಬೇಕು. ಸರಕಾರ ಯಾವುದೇ ಒತ್ತಡ-ಕ್ಕೆ ಮಣಿಯದೇ ಈ ಮಸೂದೆಯನ್ನು ಮಂಡಿಸಿ ವ್ಯಾಪಕ ಚರ್ಚೆಯ ಬಳಿಕ ಅಂಗಿಕರಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ. ●



ಮೌಢ್ಯತೆ ಪ್ರತಿಬಂಧಕ ಮಸೂದೆ ಕುರಿತು ಚಿಂತನ ಸಭೆಯಲ್ಲಿ ಮಠಾಧೀಶರು



ಕೂಲಿ ಅರಸಿಕೊಂಡು ಮಹಾರಾಷ್ಟ್ರಕ್ಕೆ ಗುಳೆ ಹೊರಟ್ಟಿದ್ದ ಕೂಲಿಕಾರರನ್ನು ಹೊತ್ತೊಯ್ಯುತ್ತಿದ್ದ ಸರಕು ಸಾಗಣೆ ವಾಹನ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಹಲಕಿ ಕ್ರಾಸ್ ಬಳಿ ಅಪಘಾತಕ್ಕೀಡಾಗಿರುವುದು.


'ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ' ಬೆಂಗಳೂರಿನಲ್ಲಿ ಮೊದಲ ಸಮ್ಮೇಳನ

ಜಗತ್ತಿನ ಒಟ್ಟು 37 ಮಿಲಿಯನ್ ಕುರುಡರಿದ್ದಾರೆ. ಇದರಲ್ಲಿ ಭಾರತ ದೇಶವೊಂದರಲ್ಲೇ 15 ಮಿಲಿಯನ್ ಕುರುಡರು ಇದ್ದಾರೆಂಬ ಅಂಶಗಳನ್ನು ನೋಡುವಾಗ ಮನಸ್ಸಿನಲ್ಲಿ ಆಳವಾದ ವಿಷಾದದ ಭಾವನೆ ಮೂಡುತ್ತದೆ. ಇನ್ನು ನಾನಾ ಬಗೆಯ ಅಂಗವೈಕಲ್ಯ ಹೊಂದಿರುವವರು, ಬುದ್ಧಿಮಾಂದ್ಯತೆ ಇರುವವರು ಎಲ್ಲ ಸೇರಿ ಅಂಗವಿಲರ ಸಂಖ್ಯೆ ಭಾರತದಲ್ಲಿ ಒಟ್ಟು ಜನಸಂಖ್ಯೆಯ ಶೇ. 2.1% ಇದೆ.

ತಾವು ಅಂಗವಿಕಲರಾಗಿರುವುದಕ್ಕೆ ಅಂಗವಿಕಲರು ಎಂದಿಗೂ ಹೊಣೆಯಲ್ಲ. ಅವರ ತಂದೆ-ತಾಯಿ ಪೋಷಕರು ಸಹ ಹೊಣೆಗಾರರಲ್ಲ. ನಮ್ಮ ಸಮಾಜದಲ್ಲಿ ಅಂಗವೈಕಲ್ಯವಿರುವ ವ್ಯಕ್ತಿಗಳು ಅನುಭವಿಸುವ ಬಹುತೇಕ ಸಂಕಟಗಳು ಈ ನೋವುಗಳನ್ನು ಅನುಭವಿಸಿದವರಿಗೆ, ಮತ್ತು ಅವರನ್ನು ಪಾಲಿಸುವವರಿಗೆ ಮಾತ್ರ ಅರ್ಥವಾಗುವಂತವು.

ಶಿಕ್ಷಣ, ಉದ್ಯೋಗಗಳಂತಹ ಸೌಲಭ್ಯವನ್ನು ಪಡೆಯುವುದು ಮತ್ತು ಘನತೆಯೊಂದಿಗೆ ಬದುಕುವುದು ಎಲ್ಲರ ಹಕ್ಕು. ಅಂಗವಿಕಲರಿಗೆ ಈ ಹಕ್ಕುಗಳನ್ನು ಖಾತ್ರಿ ಮಾಡಬೇಕಾದದ್ದು, ಅದಕ್ಕಾಗಿ ವಿಶೇಷ ಮುತುವರ್ಜಿ ಕಾಳಜಿ ತೋರಬೇಕಾದದ್ದು ಆಳುವ ಸರ್ಕಾರಗಳ ಕರ್ತವ್ಯವಾಗಿದೆ.

ಆದರೆ ನಿರಂತರ ಅಪಮಾನ, ತಾತ್ಸಾರಕ್ಕೆ ತುತ್ತಾದ ಅಂಗವಿಕಲರ ನೋವುಗಳಿಗೆ ಸ್ಪಂದಿಸಬೇಕಾದ ನಮ್ಮ ಸರ್ಕಾರಗಳು ಈ ವಿಷಯದಲ್ಲಿ ಕುರುಡಾಗಿ ವರ್ತಿಸುತ್ತಿವೆ. ಅವು ಅಂಗವಿಕಲರ ಬೇಡಿಕೆಗಳ ಕಡೆಗೆ ಕಿವುಡಾಗಿವೆ. ಅನ್ಯಾಯಕ್ಕೆ ಒಳಗಾದ ಈ ವಿಭಾಗದ ಸಮಸ್ಯೆಗಳನ್ನು ನಿವಾರಿಸಲಾರದ ವಿವೇಕಶೂನ್ಯತೆ-'ಬುದ್ಧಿಹೀನತೆ'ಯನ್ನು ತೋರುತ್ತಿವೆ. ಇಂತಹ ಧೋರಣೆಗಳ ಫಲವಾಗಿ ಹಸಿವು, ಬಡತನಗಳೇ ಬಹುತೇಕ ಅಂಗವಿಕಲರ ಬದುಕಾಗಿದೆ.



ಕೇಂದ್ರಸರ್ಕಾರವೇ ಇರಲಿ, ರಾಜ್ಯ ಸರ್ಕಾರವೇ ಇರಲಿ ಅಥವಾ ಸ್ಥಳೀಯ ಸಂಸ್ಥೆಗಳೇ ಇರಲಿ ತಮ್ಮ ಬಜೆಟ್‌ನಲ್ಲಿ ಶೇ. 3 ರಷ್ಟು ಹಣವನ್ನು ಅಂಗವಿಕಲರ ಕಲ್ಯಾಣಕ್ಕಾಗಿ ಮೀಸಲಿಡಬೇಕೆಂಬ ಕಾನೂನು ಯಾವ ಹಂತದಲ್ಲಿಯೂ ಸಂಪೂರ್ಣವಾಗಿ ಜಾರಿಯಾಗುತ್ತಿಲ್ಲ. ಮೀಸಲಿಡುವ ಹಣವನ್ನು ಸಹ ಬೇರೆ ಉದ್ದೇಶಗಳಿಗೆ ಬಳಸಲಾಗುತ್ತಿದೆ.

ಇನ್ನು ಉದ್ಯೋಗದಲ್ಲಿ ಶೇ. 3 ರಷ್ಟು ಮೀಸಲಾತಿ ನೀಡಬೇಕೆಂಬ ನಿಯಮವನ್ನು ಗಾಳಿಗೆ ತೂರಲಾಗಿದೆ.

ಹಲವು ಒತ್ತಾಯ ಹೋರಾಟಗಳ ಫಲವಾಗಿ ಮಾಸಾಶನ ಸೇರಿದಂತೆ ಕೆಲವು ಅಂಗವಿಕಲ ಕಲ್ಯಾಣ ಯೋಜನೆಗಳು ಬಂದಿದ್ದರೂ ಅವುಗಳ ಬಗೆಗೆ ಅಂಗವಿಕಲರಿಗೆ ಸರಿಯಾದ ಮಾಹಿತಿ ಇಲ್ಲ. ಈ ಬಗೆಗೆ ಅಗತ್ಯ ಪ್ರಚಾರವಿಲ್ಲ. ಇಂತಹ ಸೌಲಭ್ಯಗಳನ್ನು ಪಡೆದುಕೊಳ್ಳಲು ಬರುವ ಅಂಗವಿಕಲರು ಮತ್ತು ಪೋಷಕರನ್ನು ಕಂಬದಿಂದ ಕಂಬಕ್ಕೆ ಕಛೇರಿಯಿಂದ ಕಛೇರಿಗೆ ಅಲೆದಾಡಿಸಲಾಗುತ್ತಿದೆ.

ಅಂಗವಿಕಲರು ಮತ್ತು ಪಾಲಕರು ಸಂಘಟಿತರಾಗುವುದು ಮತ್ತು ತಮ್ಮ ನ್ಯಾಯಬದ್ಧವಾದ ಹಕ್ಕುಗಳಿಗಾಗಿ ದಿಟ್ಟ ಹೋರಾಟಕ್ಕೆ ಮುಂದಾಗುವುದು ಮಾತ್ರವೇ ಈ ಯಾತನೆಯ ಬದುಕಿನ ಸಂಕಟಗಳನ್ನು ಕೊನೆಗಾಣಿಸುವ ದಾರಿಯಾಗಿದೆ. ಅದೊಂದೆ ಅಂಗವಿಲಕರ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರವಾಗಿದೆ.

'ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ'ವು ಹಳ್ಳಿಗಳು, ಗ್ರಾಮ ಪಂಚಾಯತ್ ಮಟ್ಟದಿಂದ ಹಿಡಿದು ರಾಜ್ಯಮಟ್ಟದವರೆಗೆ ಈ ನೊಂದ ಮತ್ತು ಅವಕಾಶವಂಚಿತ ಜನರನ್ನು ಸಂಘಟಿಸುತ್ತಾ ಅಂಗವಿಕಲರಿಗೆ ಘನತೆಯ ಜೀವನವನ್ನು ಕಲ್ಪಿಸಲು ಹೋರಾಡುತ್ತಿದೆ.

ಇದೇ ಹಿನ್ನೆಲೆಯಲ್ಲಿ ಒಕ್ಕೂಟವು ಅಂಗವಿಕಲರು ಹಾಗೂ ಪಾಲಕರ ಮೊದಲ ಸಮ್ಮೇಳನವನ್ನು ಹಾಗೂ 'ಎಲ್ಲಾ ಅಂಗವಿಕಲರಿಗೆ ಘನತೆಯ ಜೀವನ' ಎಂಬ ವಿಷಯದ ಮೇಲೆ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಸಂಘಟಿಸುತ್ತಿದೆ. ಇಂತಹ ಮಹತ್ವದ ಕಾರ್ಯಕ್ರಮಕ್ಕೆ ರಾಜ್ಯದ ಜನತೆಯು ಅಗತ್ಯ ಪ್ರೋತ್ಸಾಹ ಮತ್ತು ಬೆಂಬಲ ನೀಡಬೇಕೆಂದು ವಿನಂತಿ.

ಮೊದಲ ರಾಜ್ಯ ಸಮ್ಮೇಳನ-ವಿವರಗಳ
28-29 ನವೆಂಬರ್ 2013
ಮಹಾರಾಷ್ಟ್ರ ನಿವಾಸ, 2ನೇ ಕ್ರಾಸ್
ಗಾಂಧಿನಗರ, ಬೆಂಗಳೂರು

ನವೆಂಬರ್ 28, 2013 (ಗುರುವಾರ)

ಮೆರವಣಿಗೆ: ಬೆಳಗ್ಗೆ 10.00 ಗಂಟೆಗೆ
ಸ್ಥಳ: ಗಾಂಧಿನಗರದ 'ಗಾಂಧಿಪ್ರತಿಮೆ' ಬಳಿಯ ಮುಖ್ಯಮಂತ್ರಿಗಳ ಕಚೇರಿವರೆಗೆ
ವಿಚಾರ ಸಂಕಿರಣ-'ಎಲ್ಲ ಅಂಗವಿಕಲ ಘನತೆಯ ಜೀವನ' ಸಂಜೆ 4 ಗಂಟೆಗೆ
ಉದ್ಘಾಟನೆ: ಸನ್ಮಾನ್ಯ ಶ್ರೀ ಹೆಚ್. ನಾಗಮೋಹನ್ ದಾಸ್, ನ್ಯಾಯಮೂರ್ತಿ
ಸ್ಥಳ: ಮಹಾರಾಷ್ಟ್ರ ನಿವಾಸ, 2ನೇ ಕ ಗಾಂಧಿನಗರ, ಬೆಂಗಳೂರು
ಪ್ರಸ್ತಾವನೆ : ಶ್ರೀ ಕೆ.ಎಸ್. ರಾಜಣ್ಣ, ಆಯುಕ್ತರು, ಅಂಗವಿಕಲ ವ್ಯ ಅಧಿನಿಯಮ

ನವೆಂಬರ್ 29, 2013 (ಶುಕ್ರವಾರ)

ಉಪನ್ಯಾಸಗಳು

'ಅಂಧರ ಮತ್ತು ಉಳಿದವರ ಶಿಕ್ಷಣ ನೀಡು ಅನುಭವಗಳು' – ಶ್ರೀಮತಿ ಮುಕ್ತಾರವರು,

ಕರ್ನಾಟಕ ರಾಜ್ಯ ಮಕ್ಕಳ ಹಕ್ಕು ಸಂರ ಆಯೋಗದ ಸದಸ್ಯರು ಹಾಗೂ ನಿರ್ದೇಶ ಮಾತೃ ಛಾಯ ಅಂಧರ, ಶ್ರವಣ ದೋಷವು ಶಾಲೆ, ಬೆಂಗಳೂರು.

'ಅಂಗವಿಕಲ ವ್ಯಕ್ತಿಗಳ ಶಿಕ್ಷಣ ನೀಡು ತಂದೆ ತಾಯಿಯ ಪಾತ್ರ ಅನುಭವಗಳು' – ರವೀಂದ್ರ ಭಟ್ಟ ಐನಕೈ, ಮುಖ್ಯ ರಾಜಕೀ ವರದಿಗಾರರು, ಪ್ರಜಾವಾಣಿ.

'ಅಂಗವಿಕಲರಿಗೆ ಸಾಹಸ ಮತ್ತು ಶಿಕ್ಷಣ'– ಎಸ್.ಎಲ್.ಎನ್. ಸ್ವಾಮಿ, 'ದಿ ಅಡ್ವೆಂಚರರ್ಸ್'

ಜಿ.ಎನ್. ನಾಗರಾ
ಪ್ರಧಾನ ಕಾರ್ಯದರ್ಶಿ, ಸ್ವಾಗತ ಸ

ಹುಣಸೂರು: ಡಿಪ್ಲೋಮಾ ಕಾಲೇಜು ಸ್ಥಾಪನೆಗೆ ಒತ್ತಾಯಿಸಿ ಎಸ್‌ಎಫ್‌ಐ ಪ್ರತಿಭಟನೆ

ಹುಣಸೂರು ಪಟ್ಟಣದಲ್ಲಿ ಸರ್ಕಾರಿ ಡಿಪ್ಲೋಮಾ ಕಾಲೇಜು ಸ್ಥಾಪನೆ ಹಾಗೂ ಬಾಕಿ ಉಳಿದಿರುವ ವಿದ್ಯಾರ್ಥಿ ವೇತನ ಬಿಡುಗಡೆ ಮಾಡುವಂತೆ ಒತ್ತಾಯಿಸಿ ನವೆಂಬರ್ 12, 2013ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ತಾಲ್ಲೂಕು ಸಮಿತಿಯಿಂದ ಪ್ರತಿಭಟನಾ ಮೆರವಣಿಗೆ ನಡೆಯಿತು.

ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತ್ಯೇಕ ಮೆರವಣಿಗೆ ಮೂಲಕ ತಹಸಿಲ್ದಾರ್ ಕಛೇರಿ ಬಳಿ ತೆರಳಿ ಪ್ರತಿಭಟನೆ ನಡೆಸಿದರು.

ನಂತರ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಜಗಧೀಶ್‌ಸೂರ್ಯ, ಹುಣಸೂರಿನಲ್ಲಿ ಸಾವಿರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಪೈಕಿ ಬಹುತೇಕ ವಿದ್ಯಾರ್ಥಿಗಳು ವೃತ್ತಿ ಶಿಕ್ಷಣಕ್ಕಾಗಿ ದೂರದ ಊರುಗಳಿಗೆ ಹೋಗಲಾಗದೆ ವಿದ್ಯಾಭ್ಯಾಸವನ್ನು ಅ ರ್ಧಕ್ಕೆ ನಿಲ್ಲಿಸಿ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಸರ್ಕಾರ ಹುಣಸೂರಿನಲ್ಲಿ ಡಿಪ್ಲೋಮಾ ಕಾಲೇಜನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿದರು.

ಕಳೆದ ಎರಡು ವರ್ಷಗಳಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಬಿಡುಗಡೆಯಾಗಿಲ್ಲ. ಇದನ್ನು ಅಧಿಕಾರಿಗಳು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಟೀಕಿಸಿದ ಅವರು ಕೂಡಲೇ ಬಾಕಿ ಉಳಿದಿರುವ ವಿದ್ಯಾರ್ಥಿ ವೇತನವನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಕಾರ್ಯದರ್ಶಿ ಮಹೇಶ್‌ಕುಮಾರ್ ಮಾತನಾಡಿ ತಾಲ್ಲೂಕಿನ ಶಾಲಾ ಕಾಲೇಜುಗಳಲ್ಲಿ ಕುಡಿಯುವ ನೀರು, ಶೌಚಾಲಯ ಮುಂತಾದ ಮೂಲಸೌಕರ್ಯಗಳಿಲ್ಲದೆ ವಿದ್ಯಾರ್ಥಿಗಳು ಬವಣೆ ಪಡುವಂತಾಗಿದೆ. ನಗರ ಹಾಗೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಡಿಪ್ಲೋಮಾ ಮಾಡಲು ಮೈಸೂರು, ಕುಶಾಲನಗರವನ್ನು ಅವಲಂಬಿಸಬೇಕಿದೆ ಎಂದರು. ತಾಲ್ಲೂಕು ಅಧ್ಯಕ್ಷ ಎನ್. ರಂಜಿತ ಮಾತನಾಡಿ ವಿದ್ಯಾರ್ಥಿನಿಯರು ಮೂಲ ಸೌಕರ್ಯಗಳಿಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ. ಕುಡಿಯುವ ನೀರು



ಸೇರಿದಂತೆ ಇತರೆ ಸೌಲಭ್ಯಗಳಿಲ್ಲದೆ ಅರ್ಧದಲ್ಲೇ ವಿದ್ಯಾಭ್ಯಾಸ ನಿಲ್ಲಿಸುವ ಪರಿಸ್ಥಿತಿ ಉಂಟಾಗಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ತಾಲ್ಲೂಕು ಕಾರ್ಯದರ್ಶಿ ವಿನೋದ್, ಉಪಾಧ್ಯಕ್ಷ ಸಂದೀಪ್, ಅಂಜುಶ್ರೀ, ಜಿಲ್ಲಾ ಸಮಿತಿ ಸದಸ್ಯರಾದ ಶ್ರೀನಿವಾಸ್, ವಿನೋದ್ (ಚಾಮುಂಡಿ) ಅಮೃತ್‌ರಾಜ್, ಅಭಿಷೇಕ, ಶಶಿಕಲಾ, ಶೇಖರ್, ಪೂಜಾ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ದಲಿತ ಕೇರಿಗೆ ಒಳಚರಂಡಿಗೆ ಒತ್ತಾಯಿಸಿ ಹುಣಸೂರಿನಲ್ಲಿ ಸಿಪಿಐ(ಎಂ)ನಿಂದ ಪುರಸಭೆಗೆ ಮುತ್ತಿಗೆ

ದಲಿತರೇ ಹೆಚ್ಚಾಗಿ ವಾಸಿಸುವ ಹುಣಸೂರು ಪಟ್ಟಣದ ಒಂದನೇ ವಾರ್ಡಿಗೆ ಒಳಚರಂಡಿ, ಶೌಚಾಲಯ ಒದಗಿಸುವಂತೆ ಒತ್ತಾಯಿಸಿ ಸಿಪಿಐ(ಎಂ), ಮಹಿಳಾ ಸ್ವಸಹಾಯ ಸಂಘ ಮತ್ತು ಡಿವೈಎಫ್‌ಐನಿಂದ ಹುಣಸೂರು ಪುರಸಭೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು.

ರಂಗನಾಥ ಬಡಾವಣೆಯಿಂದ ಮೆರವಣಿಗೆ ಮೂಲಕ ತಮಟೆ ವಾದ್ಯಗಳೊಂದಿಗೆ ಪುರಸಭೆ ವಿರುದ್ಧ ಘೋಷಣೆ ಕೂಗುತ್ತಾ ಪ್ರಮುಖ ಬೀದಿಗಳಲ್ಲಿ ಸಾಗಿ ನಂತರ ಪುರಸಭೆಗೆ ಮುತ್ತಿಗೆ ಹಾಕಲಾಯಿತು. ಈ ಸಂದರ್ಭದಲ್ಲಿ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಹುಣಸೂರು ಶಾಖಾ ಕಾರ್ಯದರ್ಶಿ ವಿ. ಬಸವರಾಜು ಕಲ್ಕುಣಿಕೆ, ಬಡವರು ಮತ್ತು ದಲಿತರು ವಾಸ ಮಾಡುವ ಬೀದಿಗಳಿಗೆ ಒಳಚರಂಡಿ ಸೌಲಭ್ಯ ಕಲ್ಪಿಸದ ಪುರಸಭೆಯ ಕ್ರಮ ನಾಚಿಕೆಗೇಡಿನ ಸಂಗತಿ. ಶೌಚಾಲಯ ಇಲ್ಲದ ಕಾರಣ ಮಹಿಳೆಯರು, ಮಕ್ಕಳು, ವೃದ್ಧರು ನರಕ ಯಾತನೆ ಅನುಭವಿಸುವಂತಾಗಿದೆ. ಹೀಗಿದ್ದರೂ, ಜನಪ್ರತಿನಿಧಿಗಳು ಹಾಗೂ ಪುರಸ ಮುಖ್ಯಾಧಿಕಾರಿಗಳು ಗಮನ ಹರಿಸದೆ ನಿರ್ಲ ವಹಿಸಿದ್ದಾರೆ. ಈ ರೀತಿಯ ವರ್ತನೆ ಬಡ ಮತ್ತು ದಲಿತರ ವಿರೋಧಿ ನೀತಿಯಾಗಿದ್ದು, ಕೂಡಲೇ ಒಳಚರಂಡಿ ವ್ಯವಸ್ಥೆ ಕಲ್ಪಿಸಬೆ ಎಂದು ಒತ್ತಾಯಿಸಿದರು. ನಂತರ ಮಾತನಾ ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಜಗಧೀಶ್‌ಸು ಸಂವಿಧಾನವನ್ನು ಆಳುವವರೇ ಉಲ್ಲಂಘಿಸು ಅದರ ಆಶಯವನ್ನು ತಿರುಚುತ್ತಾರೆ. ಅಧಿಕಾರಿಗ ದಲಿತರಿಗೆ ನೀಡಬೇಕಾದ ಸೌಲಭ್ಯಗಳನ್ನು ನೀ ತಾರತಮ್ಯ ಎಸಗುತ್ತಿದ್ದಾರೆ. ಎಷ್ಟೇ ಮ ಸಲ್ಲಿಸಿದರೂ ಕಿವುಡ, ಕುರುಡರ ರೀತಿ ವರ್ತಿಸುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದ

ನಂತರ ಪುರಸಭಾ ಮುಖ್ಯಾಧಿಕ ರಮೇಶರಿಗೆ ಮನವಿ ಸಲ್ಲಿಸಲಾಯಿತು. ಮ ಸ್ವೀಕರಿಸಿ ಮಾತನಾಡಿದ ಮುಖ್ಯಾಧಿಕಾರಿಗ ಪಟ್ಟಣದ ಒಳಚರಂಡಿ ವ್ಯವಸ್ಥೆಗೆ ಕೋಟಿ ರೂ. ಪ್ರಸ್ತಾವನೆಯನ್ನು ಈಗಾಗ ಸಲ್ಲಿಸಲಾಗಿದ್ದು, ಶೀಘ್ರವಾಗಿ ಒಳಚರ ಕಾಮಗಾರಿ ಪ್ರಾರಂಭವಾಗಲಿದೆ ಎಂದು ಭರ ನೀಡಿ ತಕ್ಷಣವೇ ವಾರ್ಡಿಗೆ ಭೇಟಿ ಕೊಟ್ಟು ಪರಿಶೀಲಿಸಿದರು. ನಂತರ ಪ್ರತಿಭಟನೆಯ ತಾತ್ಕಾಲಿಕವಾಗಿ ಕೈಬಿಡಲಾಯಿತು.

ಈ ಪ್ರತಿಭಟನೆಯಲ್ಲಿ ಸಿಪಿಐ(ಎ ಮುಖಂಡರಾದ ವಿ. ದುರ್ಗೇಶ್, ಎಸ್‌ಎಫ ಜಿಲ್ಲಾ ಕಾರ್ಯದರ್ಶಿ ಮಹೇಶ್‌ಕುಮಾ ತಾಲ್ಲೂಕು ಅಧ್ಯಕ್ಷ ಎನ್. ರಂಜಿತ, ಅಂಜು ರಘು, ಸ್ವಾಮಿ, ಮಹಿಳಾ ಸ್ವಸಹಾಯ ಸಂಘ ರಾಣಿ, ಗೌರಮ್ಮ, ಅರುಣ, ಜಯವ ದಸಂಸ ಸಂಚಾಲಕ ಬೆಳ್ತೂರು ಮಹದ ಪಾಲ್ಗೊಂಡಿದ್ದರು.

ವರದಿ: ಜಗಧೀಶ್‌ಸೂ

ಜನಶಕ್ತಿ
ಕನ್ನಡ ವಾರಪತ್ರಿಕೆ

'ಬೀದಿ ಬದಿ ಮಾರಾಟಗಾರರ(..) ಕಾಯ್ದೆ'
ಜೀವನಾಧಾರ ರಕ್ಷಣೆಗೋ? ಬೀದಿ ಬದಿ ವ್ಯಾಪಾರದ ನಿಯಂತ್ರಣಕ್ಕೊ?

ಕೇಂದ್ರ ಸರ್ಕಾರ 'ಬೀದಿ ಬದಿ ಮಾರಾಟಗಾರರ ಕಾಯ್ದೆ'ಯನ್ನು ಜಾರಿಗೆ ತಂದು ಬಿಟ್ಟಿದೆ. ಇನ್ನು ಮುಂದೆ ಈ ಬಡಪಾಯಿ ವ್ಯಾಪಾರಿಗಳನ್ನು ಪೋಲಿಸರು ಎತ್ತಂಗಡಿ ಮಾಡುವಂತಿಲ್ಲ ಎಂದು ಟಿ.ವಿ. ಜಾಹಿರಾತುಗಳು ಸಾರುತ್ತಿವೆ. ಅದು ನಿಜವೇ ? ಓದಿ. ನೋಡಿ.

ಕೆ.ಎನ್.ಉಮೇಶ್

ರಾಷ್ಟ್ರದ ಸಂಸತ್ ತನ್ನ ಕಳೆದ ಅಧಿವೇಶನದಲ್ಲಿ ಬೀದಿ ಬದಿ ಮಾರಾಟಗಾರರ (ಜೀವನಾಧಾರ ರಕ್ಷಣೆ ಮತ್ತು ಬೀದಿ ಬದಿ ಮಾರಾಟ ನಿಯಂತ್ರಣ) ಮಸೂದೆ 2012ನ್ನು ಮಂಡಿಸಿ ಅಂಗೀಕರಿಸಿದೆ. ಇದು ರಾಷ್ಟ್ರದ ಉದ್ದಗಲಕ್ಕೂ ದಶಕಗಳ ಕಾಲ ಬೀದಿ ಬದಿಯಲ್ಲಿ ಮಾರಾಟ ಮಾಡುತ್ತಾ ಬದುಕನ್ನು ಕಟ್ಟಿಕೊಂಡಿರುವ ಕೋಟ್ಯಾಂತರ ಬೀದಿ ಬದಿ ಮಾರಾಟಗಾರರ ಹಾಗೂ ಅಸಂಘಟಿತ ಕಾರ್ಮಿಕರ ಹೋರಾಟಕ್ಕೆ ಸಂದ ಜಯವಾಗಿದೆ.

ದಶಕಗಳ ಕಾಲದಿಂದ ತಾತ, ಅಪ್ಪ, ಅಮ್ಮ ಮಾಡಿಕೊಂಡುಬಂದ ಬೀದಿಬದಿಯ ಮಾರಾಟವನ್ನೇ ಅದೇ ಸ್ಥಳದಲ್ಲಿ ಮಾಡುತ್ತಾ ಬಂದಿದ್ದರೂ ಯಾವಾಗ ಯಾರು ಬಂದು ನಮ್ಮನ್ನು ಅಲ್ಲಿಂದ ಎತ್ತಂಗಡಿ ಮಾಡುತ್ತಾರೋ? ಎಂಬ ಭಯದಲ್ಲೇ ಆತಂಕದಿಂದ ಬದುಕು ರೂಢಿಸಿಕೊಂಡು ಬಂದ ಬೀದಿ ಬದಿ ಮಾರಾಟಗಾರರಿಗೆ ಅವರ ಬದುಕಿಗೆ ಆಧಾರವಾಗಿರುವ ಬೀದಿ ಬದಿಯಲ್ಲಿ ಮಾರಾಟ ಮಾಡುವ ಹಕ್ಕನ್ನು ಈ ಕಾಯ್ದೆ ನೀಡುತ್ತದೆ. ಇದರಿಂದಾಗಿ ಪೋಲಿಸರೋ, ಮುನ್ಸಿಪಾಲಿಟಿಯವರೋ, ಕಾರ್ಪೋರೇಷನ್‌ರವರೋ, ಏಕಾಏಕಿ ಬಂದು ಅವರ ಮೇಲೆ ದಾಳಿಮಾಡಿ, ಅವರು ಮಾರುತ್ತಿದ್ದ ವಸ್ತುಗಳನ್ನು ಕಿತ್ತುಕೊಂಡು ಹೋಗುವ ಪರಿಪಾಠಕ್ಕೆ ಈ ಕಾಯ್ದೆಯು ಒಂದು ಹಂತದ ತಡೆಯನ್ನು ಹಾಕಲಿದೆ.

ಮಾರಾಟ ಮಾಡುತ್ತಾ .... ಯಾರ್ಯಾರ ನೆನೆಯಲಿ :

ಅಂತೆಯೇ ಬೀದಿ ಬದಿ ಮಾರಾಟ ಮಾಡುತ್ತಾ, ಬಂದ ಸ್ಥಳೀಯ ಠಾಣೆಯ ಪೋಲಿಸರಿಗೆ, ಹೊಯ್ಸಳ ಪೋಲಿಸರಿಗೆ, ಚೀತಾ ಪೋಲಿಸರಿಗೆ, ಟೈಗರ್ ಪೋಲಿಸರಿಗೆ (ಬೆಂಗಳೂರಿನಲ್ಲಿರುವ ಹೆಸರುಗಳು) ಮತ್ತು ಕಾರ್ಪೋರೇಷನ್‌ರವರಿಗೆ ಇಷ್ಟು ಅಂತ ಹಣ ನೀಡುವ ಮತ್ತು ಕೇಳಿದಾಗಲೆಲ್ಲಾ ಮಾರಾಟಗಾರರು ಮಾರುವ ವಸ್ತುಗಳನ್ನು ಪುಕ್ಕಟೆಯಾಗಿ ನೀಡುವುದಕ್ಕೂ ಇದು ಒಂದು ಹಂತದ ತಡೆಯನ್ನು ಒಡ್ಡಲಿದೆ. ಅದರಿಂದಾಗಿ ಸ್ವಲ್ಪ ಪ್ರಮಾಣದ ನಿಟ್ಟುಸಿರನ್ನು ಬಿಡಲು ಬೀದಿ ಬದಿ ಮಾರಾಟಗಾರರಿಗೆ ಇದು ಸಹಕಾರಿಯಾಗಲಿದೆ.

ಕಾಯ್ದೆಯ ಪ್ರಮುಖ ಅಂಶಗಳು :

ಜೀವನಾವಶ್ಯಕ ವಸ್ತುಗಳನ್ನು ರಸ್ತೆ ಬದಿಯಲ್ಲಿ ಮಾರಾಟ ಮಾಡುತ್ತಾ ಸಾಮಾನ್ಯ ಜನತೆಗೆ ಸೇವೆ ಒದಗಿಸುವ ಒಂದು ನಿರ್ದಿಷ್ಟ ಪ್ರದೇಶದಲ್ಲಿ ನಿರಂತರವಾಗಿ ಮಾರಾಟ ಮಾಡುವವರನ್ನು ಸ್ಟೇಷನರಿ ವೆಂಡರ್ ಎಂದು ಮತ್ತು ವಿವಿಧ ಪ್ರದೇಶಗಳಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿದ ಸೂರಿನಿಂದ ಸ್ಥಿರವಾಗಿ ಅಥವ ಚಲಿಸುತ್ತಾ ಮಾರಾಟ ಮಾಡುವವರನ್ನು ಬೀದಿ ಬದಿ ಮಾರಾಟಗಾರರು ಎಂದು ಕಾಯ್ದೆಯು ಪರಿಭಾಷಿಸಿದೆ. ಅಂತಹವರನ್ನು ಬೀದಿ ಬದಿ ಮಾರಾಟಗಾರರೆಂದು, ಅಂತಹವರಿಗೆ ಕಾಯ್ದೆಯಡಿ ರಚನೆಯಾಗುವ "ನಗರ ವೆಂಡಿಂಗ್ ಕಮಿಟಿ" ಮೂಲಕ ನೊಂದಾಯಿಸಿಕೊಳ್ಳಲು ಮತ್ತು ಅಂತಹ ನೊಂದಾವಣೆ ಪ್ರಮಾಣಪತ್ರ ಪಡೆದ ಮಾರಾಟಗಾರರು ಮಾತ್ರ ಬೀದಿ ಬದಿ ಮಾರಾಟ ಮಾಡಲು ಅರ್ಹತೆಯನ್ನು ಪಡೆಯುತ್ತಾರೆ.

ನೊಂದಾವಣೆ-ಪ್ರಮಾಣ ಪತ್ರ ಕಡ್ಡಾಯ :

ಪ್ರತಿಯೊಬ್ಬ ಬೀದಿ ಬದಿ ಮಾರಾಟಗಾರರು ನೊಂದಾವಣೆಗೆ ಅರ್ಜಿ ಸಲ್ಲಿಸಿ ನಿಗದಿತ ಶುಲ್ಕ ಪಾವತಿಸಿ ನೊಂದಾವಣೆ ಪ್ರಮಾಣ ಪತ್ರ ಪಡೆಯಲು ಹಕ್ಕನ್ನು ಪಡೆಯುತ್ತಾರೆ. ನೊಂದಾವಣೆ ಪ್ರಮಾಣ ಪತ್ರ ಪಡೆದ ಬೀದಿ ಬದಿ ಮಾರಾಟಗಾರರು ವೆಂಡಿಂಗ್ ಶುಲ್ಕ ಪಾವತಿಸಿ ಬೀದಿ ಬದಿ ಮಾರಾಟವನ್ನು ಅಧಿಸೂಚಿತ ವೆಂಡಿಂಗ್ ಪ್ರದೇಶದಲ್ಲಿ ನಡೆಸಬಹುದು. ಬೀದಿ ಬದಿ ಮಾರಾಟ ಮಾಡುವ ಪ್ರದೇಶ ಯಾವುದೆಂದು ಗುರುತಿಸಿ ವೆಂಡಿಂಗ್ ಪ್ರದೇಶವೆಂದು ಅಧಿಸೂಚಿಸುವ ಅಧಿಕಾರವನ್ನು ಕಾಯ್ದೆಯು ಸ್ಥಳೀಯ ಆಡಳಿತಕ್ಕೆ ನೀಡಿದೆ. ವೆಂಡಿಂಗ್ ಪ್ರದೇಶವನ್ನು ಬದಲಾಯಿಸುವ, ಮಾರ್ಪಡಿಸುವ ಅಧಿಕಾರವನ್ನು ಸಹ ಸ್ಥಳೀಯ ಆಡಳಿತಕ್ಕೆ ಕಾಯ್ದೆಯು ನೀಡಿದೆ. ವೆಂಡಿಂಗ್ ಪ್ರದೇಶದಲ್ಲಿ ಮಾತ್ರ ಬೀದಿ ಬದಿ ಮಾರಾಟಗಾರರು ತಮ್ಮ ಬೀದಿ ಬದಿ ಮಾರಾಟವನ್ನು ನಡೆಸಬಹುದು.

ಮಾರಾಟ ನಿಷಿದ್ಧ : ದಂಡ ಶತಸಿದ್ಧ :

ವೆಂಡಿಂಗ್ ಪ್ರದೇಶವಲ್ಲವೆಂದು ಸ್ಥಳೀಯ ಆಡಳಿತವು ಯಾವುದಾದರು ರಸ್ತೆಯನ್ನು ಅಥವ ಪ್ರದೇಶವನ್ನು ಘೋಷಿಸಿದರೆ, ಅಂತಹ ಪ್ರದೇಶದಲ್ಲಿ ಬೀದಿ ಬದಿ ಮಾರಾಟ ಮಾಡುವಂತಿಲ್ಲ. ಮಾಡಿದಲ್ಲಿ ಅದು ಅಪರಾಧವಾಗುತ್ತದೆ. ಮಾರಾಟ ಪ್ರಮಾಣಪತ್ರ ಪಡೆಯದೆ ಬೀದಿ ಬದಿ ಮಾರಾಟದಲ್ಲಿ ತೊಡಗುವ, ಪ್ರಮಾಣ ಪತ್ರದ ಷರತ್ತುಗಳನ್ನು ಉಲ್ಲಂಘಿಸುವ ಅಥಾವ ಸೂಚಿತ ಕಾಲಾವಧಿಗಿಂತ ಹೆಚ್ಚುವರಿ ಕಾಲಾವಧಿಗೆ ಮಾರಾಟ ಮಾಡುವುದನ್ನು ಕಾಯ್ದೆಯು ಅಪರಾಧವೆಂದು ಪರಿಗಣಿಸುತ್ತದೆ. ಅಂತಹ ಅಪರಾಧಗಳಿಗೆ ಶಿಕ್ಷೆಯನ್ನು ಪ್ರತಿ ಅಪರಾಧಕ್ಕೆ 2000 ರೂ. ದಂಡದ ರೀತಿಯಲ್ಲಿ ವಿಧಿಸುವ ಅಧಿಕಾರವನ್ನು ಕಾಯ್ದೆಯು ಸ್ಥಳೀಯ ಆಡಳಿತಕ್ಕೆ ನೀಡುತ್ತದೆ.

ಈ ಕಾಯ್ದೆಯ ಅಡಿಯಲ್ಲಿ ಸಾಮಾನ್ಯ ಜನತೆಗೆ ತೊಂದರೆಯಾಗದಂತೆ, ಅನಾರೋಗ್ಯಕರ ರೀತಿಯಲ್ಲಿ ಮಾರಾಟ ನಡೆಯದಂತೆ ನಿರ್ದಿಷ್ಟ ಪ್ರದೇಶ,-ರಸ್ತೆ, ಸ್ಥಳ, ವ್ಯಾಪ್ತಿ, ಮುಂತಾದವುಗಳನ್ನು ನಿರ್ದಿಷ್ಟಗೊಳಿಸಲು ಸ್ಥಳೀಯ ಆಡಳಿತವು ಸ್ಥಳೀಯ ಯೋಜನಾ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ 5 ವರ್ಷಕ್ಕೊಮ್ಮೆ 'ಬೀದಿ ಬದಿ ಮಾರಾಟ ಯೋಜನೆಯನ್ನು' ರೂಪಿಸುವ ಜವಾಬ್ದಾರಿಯನ್ನು ಸ್ಥಳೀಯ ಆಡಳಿತಕ್ಕೆ ಕಾಯ್ದೆಯು ನೀಡಿದೆ.

ಟೌನ್ ವೆಂಡಿಂಗ್ ಕಮಿಟಿ :

ನಗರ ವೆಂಡಿಂಗ್ ಕಮಿಟಿಯಲ್ಲಿ ಸ್ಥಳೀಯ ನಗರಾಡಳಿತದ ಆಯುಕ್ತರು ಅಥವ ಕಾರ್ಯನಿರ್ವಹಣಾಧಿಕಾರಿಗಳು ಅಧ್ಯಕ್ಷರಾಗಿ ಇರುತ್ತಾರೆ. ಸ್ಥಳೀಯ ಆಡಳಿತ, ಯೋಜನಾ ಪ್ರಾಧಿಕಾರ, . ಸಾರಿಗೆ ಪೋಲಿಸರು, ಸ್ಥಳೀಯ ಪೋಲಿಸರು, ಬೀದಿ ಬದಿ ಮಾರಾಟಗಾರರ ಸಂಘದ ಪ್ರತಿನಿಧಿಗಳು, ಮಾರುಕಟ್ಟೆ ಸಂಘಗಳು, ವ್ಯಾಪಾರಿಗಳ ಸಂಘಗಳು, ಸ್ಥಳೀಯ ನಾಗರೀಕ ಸಂಸ್ಥೆಗಳು, ಬ್ಯಾಂಕ್‌ಗಳು ಮತ್ತಿತರೆ ಸಂಬಂಧಿತ ಪ್ರತಿನಿಧಿಗಳನ್ನು ಸಕ್ಷಮ ಸರ್ಕಾರವು ಸರಿಯೆಂದು ಪರಿಗಣಿಸುವ ಸಂಖ್ಯೆಯಲ್ಲಿ ನೇಮಿಸಬಹುದು. ಸಮಿತಿಯಲ್ಲಿ ಬೀದಿ ಬದಿ ಮಾರಾಟಗಾರರ ಪ್ರತಿನಿಧಿಗಳು 40 ಶೇಕಡಕ್ಕಿಂತ ಕಡಿಮೆ ಇರಬಾರದು. ಅವರಲ್ಲಿ 1/3 ರಷ್ಟು ಭಾಗ ಮಹಿಳೆಯರು ಇರುವಂತೆ ನೋಡಿಕೊಳ್ಳುವುದು ಹಾಗು ಎಸ್‌ಸಿ, ಎಸ್‌ಟಿ, ಓಬಿಸಿ ಅಲ್ಪಸಂಖ್ಯಾತರು ಮತ್ತು ವಿಕಲಚೇತನ ಪ್ರತಿನಿಧಿಗಳ ಸಹ ಪ್ರಾತಿನಿಧ್ಯ ಇರುವಂತಾಗಬೇಕೆಂದು ಕಾಯ್ದೆಯು ಒಳಗೊಂಡಿದೆ.

ಬೀದಿ ಬದಿ ಮಾರಾಟ ನಿಯಮಾವಳಿಗಳು :

ಈ ಕಾಯ್ದೆಯನ್ನು ಜಾರಿಗೊಳಿಸಲು ಕೇಂದ್ರ ಹಾಗು ರಾಜ್ಯ ಸರ್ಕಾರಗಳು ನಿಯಾಮವಳಿಗಳನ್ನು ರೂಪಿಸಬೇಕಾಗಿದೆ. ಅದರಡಿ ಸ್ಥಳೀಯ



ಆಡಳಿತವು ಬೈಲಾಗಳನ್ನು ರೂಪಿಸಿ ಅನಿಯಂತ್ರಿತ ಮಾರಾಟ ವಲಯಗಳು, ನಿಯಂತ್ರಿತ ಮಾರಾಟ ವಲಯಗಳು ಮತ್ತು ನಿಯೋಜಿತ ಮಾರಾಟ ವಲಯಗಳೆಂದು ಬೀದಿ ಬದಿ ಮಾರಾಟ ಪ್ರದೇಶಗಳನ್ನು ಗುರುತಿಸಲು ಅಧಿಕಾರವನ್ನು ಕಾಯ್ದೆಯು ನೀಡಿದೆ. ಅಂತೆಯೇ ಶುಲ್ಕ, ದಂಡ, ಬೀದಿ ಬದಿ ಮಾರಾಟಗಾರರಿಗೆ ನಾಗರೀಕ ಸೌಲಭ್ಯಗಳು, ತರಬೇತಿ, ಕೌಶಲ್ಯ ಅಭಿವೃದ್ಧಿ ಪಡಿಸುವ ಹಾಗೂ ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಮತ್ತು ಸುರಕ್ಷಿತ ಮಾನದಂಡಗಳನ್ನು ಎತ್ತಿಹಿಡಿಯುವ ಜವಾಬ್ದಾರಿಯನ್ನು ಹಾಗು ಮಾರಾಟ ಮಾಡಲಾಗುವ ವಸ್ತುಗಳ ಗುಣಮಟ್ಟದ ನಿಯಂತ್ರಣವನ್ನು ಪರಿಶೀಲಿಸಲು ಅಗತ್ಯವಿರುವ ಬೈಲಾವನ್ನು ಇದರಡಿ ರೂಪಿಸಬಹುದಾಗಿದೆ.

ಗಣರಾಜ್ಯದ 63ನೇ ವರ್ಷದಲ್ಲಿ ..... ಏಕೆ ಈ ಕಾಯ್ದೆ?

ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಲ್ಲಿ ಹಾಗೂ ಕಾಯ್ದೆಯ ಉದ್ದೇಶವನ್ನು ಪರಿಶೀಲಿಸಿದಲ್ಲಿ ಕಾಯ್ದೆಯನ್ನು ಅಂಗೀಕರಿಸಿರುವ ಭಾರತ ಗಣರಾಜ್ಯದ 63ನೇ ವರ್ಷದ ಕಾಲಘಟ್ಟದ ಪರಿಸ್ಥಿತಿಯನ್ನು ಅವಲೋಕಿಸಿದಲ್ಲಿ ಈ ಕಾಯ್ದೆಯು ಬೀದಿ ಬದಿ ಮಾರಾಟಗಾರರ ಜೀವನಾಧಾರದ ರಕ್ಷಣೆಗೆ ತರಲಾಗಿದೆಯೋ ಅಥವ ಬೀದಿ ಬದಿ ಮಾರಾಟದ ನಿಯಂತ್ರಣಕ್ಕೆ ತರಲಾಗಿದೆಯೋ ಎಂಬ ಅನುಮಾನ ಉದ್ಭವಿಸುವುದು ಸಹಜ.

ಆದರೆ ಜಾಗತೀಕವಾಗಿ ಜಾಗತೀಕರಣದ ಪರಿಣಾಮವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿನ ದಿವಾಳಿಯಾಗುತ್ತಿರುವ ಕೃಷಿಯು ಗ್ರಾಮೀಣ ಪ್ರದೇಶಗಳಿಂದ ಜನತೆಯನ್ನು ಹೊರದಬ್ಬಿ ನಗರಗಳಿಗೆ ವಲಸೆ ಬರುವಂತೆ ಮಾಡುತ್ತಿದೆ. ಆದರೆ ನಗರಗಳಲ್ಲಿ ಈ ಎಲ್ಲರಿಗೂ ಬದುಕನ್ನು ಕಟ್ಟಿಕೊಡುವಷ್ಟು ಕೈಗಾರಿಕೆ ಮತ್ತು ಅದರಲ್ಲಿ ಉದ್ಯೋಗಗಳು ನಿರ್ಮಾಣವಾಗುತ್ತಿಲ್ಲ. ಜಗತ್ತಿನ ದಕ್ಷಿಣಾರ್ಧದಲ್ಲಿ ನಡೆದಿರುವ ನಗರೀಕರಣಕ್ಕೆ ಸಮಾನವಾಗಿ ಕೈಗಾರಿಕೀಕರಣ ಬೆಳೆದಿಲ್ಲ. ಕಳೆದ 30 ವರ್ಷಗಳಲ್ಲಿ ನಗರದ ಜನಸಂಖ್ಯೆಯು ದುಪ್ಪಟ್ಟಿಗೂ ಹೆಚ್ಚಾಗಿದೆ. 2008ರಲ್ಲಿ ಮೊಟ್ಟಮೊದಲ ಬಾರಿಗೆ ಜಗತ್ತಿನ ಬಹುಸಂಖ್ಯಾತ ಜನತೆ ನಗರವಾಸಿಗಳಾಗಿದ್ದಾರೆ. ಈ ಎಲ್ಲದರ ಪರಿಣಾಮ ನಗರ ಪ್ರದೇಶಗಳ ಬಡವರು ಅನೌಪಚಾರಿಕ ಆರ್ಥಿಕತೆಯ ಕೆಲಸಗಳ ಮೇಲೆ ಅವಲಂಬಿತರಾಗಿ ಬದುಕನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಗೆ. ದೂಡಲ್ಪಟ್ಟಿದ್ದಾರೆ. ಅದರಲ್ಲೊಂದು ಜೀವನಾಧಾರವಾಗಿ ಬೀದಿ ಬದಿ ವ್ಯಾಪಾರವು ನಮ್ಮ ಮುಂದೆ ಇದೆ. ಪರಿಣಾಮವಾಗಿ ಭಾರತದಂತ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಕೋಟ್ಯಾಂತರ ಜನ ಬೀದಿ ಬದಿ ಮಾರಾಟವನ್ನು ತಮ್ಮ ಜೀವನಕ್ಕೆ ಆಧಾರವಾಗಿಸಿಕೊಂಡಿದ್ದಾರೆ. ಅವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲಿದೆ.

ಅತ್ತ 'ಎಫ್‌ಡಿಐ'ಗೆ ಮಣೆ ... ಇತ್ತ ಬೀದಿ ಬದಿ ಮಾರಾಟದ ಹಕ್ಕು !

ಇಂತಹ ಪರಿಸ್ಥಿತಿಯಲ್ಲಿ ನಗರಗಳನ್ನು ವಿಶ್ವದರ್ಜೆಯ ನಗರಗಳನ್ನಾಗಿ ರೂಪಿಸುವ ಕನಸಿನಲ್ಲಿ ಮಗ್ನವಾಗಿರುವ ಸರ್ಕಾರಗಳು ಮಾಲ್‌ಗಳಿಗೆ ಹೆಚ್ಚು ಅವಕಾಶವನ್ನು ಕಲ್ಪಿಸುತ್ತಿವೆ. ಹಾಗಾಗಿ ದೊಡ್ಡ ದೊಡ್ಡ ವ್ಯಾಪಾರಿ ಸಂಕೀರ್ಣಗಳು ಅಪಾರ್ಟ್‌ಮೆಂಟ್‌ಗಳು ತಲೆಯೆತ್ತುತ್ತಿವೆ. ಆ ಮಾಲ್‌ಗಳ ವ್ಯಾಪಾರ ಮಾಡಲು ರಾಷ್ಟ್ರದ ಹಾಗು ರಾಜ್ಯದ ದೊಡ್ಡ ದೊಡ್ಡ ಬಂಡವಾಳಗಾರರು ಬಂಡವಾಳ ಹೂಡುತ್ತಿದ್ದಾರೆ. ಇತ್ತೀಚೆಗೆ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೂ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಅನುಮತಿಸಿವೆ. ಅಂತಹ ದೊಡ್ಡ ಬಂಡವಾಳದ ಶ್ರೀಮಂತಿಕೆಯ ವ್ಯಾಪಾರಿ ಕೇಂದ್ರಗಳ ಮುಂದೆ ಅಸಂಘಟಿತ ಚಿಲ್ಲರೆ ಮಾರಾಟವನ್ನು ನಿಯಂತ್ರಿಸುವುದು ಈ ಕಾಯ್ದೆಯ ಆಂತರ್ಯದಲ್ಲಿರುವ ಉದ್ದೇಶವಾಗಿದೆ.

ಬಲಗೊಳ್ಳುತ್ತಿರುವ ಹೋರಾಟ ...... ನಿರ್ಲಕ್ಷಿಸಲಾರದ ಅನಿವಾರ್ಯತೆ :

ಆದರೂ ಬೀದಿ ಬದಿ ಮಾರಾಟಗಾರರು ಮತ್ತು ಅಸಂಘಟಿತ ಕಾರ್ಮಿಕರ ಹೋರಾಟಗಳನ್ನು ಕಡೆಗಣಿಸಲಾಗದ ಸರ್ಕಾರವು ಬೀದಿ ಬದಿ ಮಾರಾಟಕ್ಕೂ ಹಕ್ಕು ಕಲ್ಪಿಸುವ ಮತ್ತು ಅವರ ಜೀವನಾಧಾರವನ್ನು ರಕ್ಷಿಸುವ ಪರಿಹಾರವನ್ನು ನೀಡಿದೆ. ಅಂತೆಯೇ ಕಾರ್ಮಿಕ ಚಳುವಳಿಯ ಜಂಟಿ ಹೋರಾಟಗಳ ಪರಿಣಾಮ ಮತ್ತು UPA-I ಗೆ ಬೆಂಬಲ ನೀಡಿದ್ದ ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಒತ್ತಡಕ್ಕೆ ಮಣಿದು ಅನಿವಾರ್ಯವಾಗಿ 2008ರಲ್ಲಿ ಅಂಗೀಕರಿಸಲಾದ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ ಮತ್ತು ಅದರಡಿ ರಚಿಸಲಾಗಿರುವ ರಾಜ್ಯ ಮಟ್ಟದ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗಳನ್ನು ರಚಿಸಲಾಗಿದೆ. ಅದರಡಿಯ ಸಾಮಾಜಿಕ ಸುರಕ್ಷತಾ ಕಲ್ಯಾಣ ಯೋಜನೆಗಳು ಉದಾಹರಣೆಗೆ ಅನಾರೋಗ್ಯ ವೆಚ್ಚ ಭರಿಸುವ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ(ಆರ್‌ಎಸ್‌ಬಿವೈ) ಒಂದು ಕುಟುಂಬಕ್ಕೆ ವಾರ್ಷಿಕ ರೂ.30,000/- ಆಸ್ಪತ್ರೆ ಖರ್ಚನ್ನು ಭರಿಸುವ ಯೋಜನೆ) ಮಕ್ಕಳ ವಿದ್ಯಾಭ್ಯಾಸಕ್ಕೆ ಶಿಷ್ಯ ವೇತನ ನೀಡುವ ಆಮ್ ಅದ್ಮಿ ಭೀಮಾ ಯೋಜನೆ (9, 10, 11 ಮತ್ತು 12ನೇ ತರಗತಿ ಓದುತ್ತಿರುವ 2 ಮಕ್ಕಳಿಗೆ ವಾರ್ಷಿಕ ರೂ.1200/- ಶಿಷ್ಯ ವೇತನ ನೀಡುವ ಯೋಜನೆ) ಹಾಗೂ ಪಿಂಚಣಿಯಂತಹ (ಶೇರು ಮಾರುಕಟ್ಟೆ ಆಧಾರಿತ

ಪುಟ 12 ಕ್ಕೆ

ಮಂಗಳೂರಿನಲ್ಲಿ ದಲಿತ ಹಕ್ಕುಗಳ ಜಾಗೃತಿ ಸಮಾವೇಶ

'ವರ್ಗಶೋಷಣೆ-ಜಾತಿ ದಮನ ಎರಡರ ವಿರುದ್ಧವೂ ಹೋರಾಟ ಅಗತ್ಯ'

ದಲಿತರ ಆರ್ಥಿಕ ಸಾಮಾಜಿಕ ಹಿಂದುಳಿದಿರುವಿಕೆಯಿಂದ ಅವರನ್ನು ಬಿಡುಗಡೆ ಮಾಡಲು ಸ್ವಾತಂತ್ರ್ಯನಂತರ ದೇಶವನ್ನಾಳಿದ ಕಾಂಗ್ರೆಸ್ ಆಗಲೀ, ಬಿಜೆಪಿ ಆಗಲೀ ಏನೂ



ಮಾಡಿರುವುದಿಲ್ಲ. ಅವುಗಳು ಕೇವಲ ಮತ ಬ್ಯಾಂಕುಗಳಾಗಿ ದಲಿತರನ್ನು ಬಳಸಿವೆ. ಆರ್ಥಿಕ ಸಾಮಾಜಿಕ ಸಮಾನತೆಯ ಕನಸು ದಲಿತರಿಗೆ ನನಸಾಗಿಲ್ಲ. ದಲಿತರಿಗೆ ಸೇರಬೇಕಾದ ಭೂಮಿ ಜಮೀನ್ದಾರರ ವಶದಲ್ಲಿದೆ. ಮೊತ್ತ ಮೊದಲನೆಯದಾಗಿ ಗ್ರಾಮೀಣ ದಲಿತರಿಗೆ ಭೂಮಿಯ ಹಂಚಿಕೆಯಾಗಬೇಕು. ಸಂವಿಧಾನದ ಆಶಯಗಳು ಜಾರಿಯಾಗುವುದು ದಲಿತರಿಗೆ ಆರೋಗ್ಯ, ಶಿಕ್ಷಣ, ಉದ್ಯೋಗ ಒದಗಿದಾಗ ಮಾತ್ರ. ದಲಿತರ ಹಕ್ಕುಗಳಿಗಾಗಿ ಸಿಪಿಐ(ಎಂ) ಹೋರಾಟ ನಡೆಸುತ್ತಿದೆ – ಎಂಬುದಾಗಿ ನವಂಬರ್ 17 ರಂದು ಮಂಗಳೂರಿನಲ್ಲಿ ಜರಗಿದ ನಗರ ಮಟ್ಟದ ದಲಿತ ಹಕ್ಕುಗಳ ಜಾಗೃತಿ ಸಮಾವೇಶದಲ್ಲಿ ದಲಿತ ಹಕ್ಕುಗಳ ರಾಜ್ಯ ಸಮಿತಿ ಮುಖಂಡರಾದ ಎನ್.ನಾಗರಾಜ್ ನುಡಿದರು.

ಕಡಲತಡಿ

ವಾ . ಉ.

ದಲಿತರ ಮೇಲಿನ ಶೋಷಣೆ ದೌರ್ಜನ್ಯಗಳು ಇಮ್ಮುಖವಾಗಿವೆ- ಒಂದು ಆರ್ಥಿಕವಾಗಿ; ಇನ್ನೊಂದು ಸಾಮಾಜಿಕವಾಗಿ. ಆದ್ದರಿಂದ ಸಿಪಿಐ(ಎಂ) ನೇತೃತ್ವದಲ್ಲಿ ವರ್ಗಶೋಷಣೆ ಮತ್ತು ಜಾತಿ ದಮನದ ವಿರುದ್ಧ ದಲಿತರು ಹೋರಾಟ ನಡೆಸಬೇಕೆಂದು ಅವರು ಕರೆ ನೀಡಿದರು.

ಮಂಗಳೂರು ನಗರದಲ್ಲಿ ಕಳೆದ ಆರು ವರ್ಷಗಳಲ್ಲಿ ನಗರ ಪಾಲಿಕೆ ದಲಿತರ ಸವಲತ್ತುಗಳನ್ನು ವಂಚಿಸಿದುದರ ವಿರುದ್ಧ ದಲಿತ ಹಕ್ಕುಗಳ ಸಮಿತಿ ಹೋರಾಟ ನಡೆಸುತ್ತಾ ಬಂದುದಲ್ಲದೆ, ಕೆಲವು ಸವಲತ್ತುಗಳನ್ನು ದಲಿತ ಬಡವರಿಗೆ ತೆಗೆಸಿ ಕೊಡಲು ಸಾಧ್ಯವಾಯಿತು ಎಂಬುದಾಗಿ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಹೇಳಿದರು. ದಲಿತರ ಹೋರಾಟವನ್ನು ಮಟ್ಟ ಹಾಕಲು ಯತ್ನಿಸುವ ಪ್ರತಿಗಾಮಿ ಶಕ್ತಿಗಳ ಬಗ್ಗೆಯೂ ಪ್ರತಿ ಹೋರಾಟ ನಡೆಸಬೇಕಾದ ಅಗತ್ಯದ ಬಗ್ಗೆಯೂ ಹೇಳಿದರು.

ದಲಿತ ಹಕ್ಕುಗಳ ದ.ಕ.ಜಿಲ್ಲಾ ಘಟಕದ ಸಂಚಾಲಕ ಕೃಷ್ಣಪ್ಪ ಕೊಂಚಾಡಿ, ದಲಿತ ಹಕ್ಕುಗಳ ಸಮಿತಿ ನಗರ ಕಾರ್ಯದರ್ಶಿ ಲಿಂಗಪ್ಪ ನಂತೂರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಮಿತಿಯ ನಗರಾಧ್ಯಕ್ಷರಾದ ಸಂಜೀವ ಬಳ್ಕೂರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಅಖಿಲ ಭಾರತ ನ್ಯಾಯವಾದಿಗಳ ಸಂಘದ ಜಿಲ್ಲಾ ಮುಖಂಡರಾದ ಯಶವಂತ ಮರೋಳಿ, ಸಮುದಾಯದ ವಾಸುದೇವ ಉಚ್ಚಿಲ, ಬಂದರು ಶ್ರಮಿಕರ ಸಂಘದ ವಿಲ್ಲಿ ವಿಲ್ಸನ್, ಡಿವೈಎಫ್ಐ ನಗರ ಸಮಿತಿಯ ಬಿ.ಕೆ.ಇಮ್ತಿಯಾಜ್, ಕಟ್ಟಡ ಕಾರ್ಮಿಕರ ನಗರ ಸಂಘಟನೆಯ ಯೋಗೀಶ್ ಜಪ್ಪಿನಮೊಗರು, ದಲಿತ ಹಕ್ಕುಗಳ ಉಳ್ಳಾಲ ವಲಯ ಸಮಿತಿ ಮುಖಂಡರಾದ ನಾರಾಯಣ ತಲಪಾಡಿ, ಮೂಡಬಿದರೆ ವಲಯ ಮುಖಂಡರಾದ ಶಂಕರ ವಾಲ್ಪಾಡಿ ಸಮಾವೇಶಕ್ಕೆ ಶುಭ ಕೋರಿದರು.

ಸಮಾವೇಶವು ನೂತನ ನಗರ ಸಮಿತಿಯನ್ನು ಆಯ್ಕೆ ಮಾಡಿದ್ದು, ಲಿಂಗಪ್ಪ ನಂತೂರು ಅಧ್ಯಕ್ಷರಾಗಿಯೂ, ಪ್ರಶಾಂತ್ ಎಂ.ಬಿ. ಪ್ರಧಾನ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿರುತ್ತಾರೆ.



ಕುಂದಾಪುರ ಹೆಮ್ಮಾಡಿಯಲ್ಲಿ ಅಕ್ರಮ ಸಕ್ರಮ ಅರ್ಜಿದಾರರ ಸಮಾವೇಶ:

ಕುಂದಾಪುರ ತಾಲೂಕು ಹೆಮ್ಮಾಡಿಯಲ್ಲಿ ಗ್ರಾಮ ಪಂಚಾಯತು ವ್ಯಾಪ್ತಿಯ ಅಕ್ರಮ ಸಕ್ರಮ ಅರ್ಜಿದಾರರ ಸಮಾವೇಶ ಹೆಮ್ಮಾಡಿಯ ಆದರ್ಶ ಯುವಕ ಮಂಡಲದ ಕಟ್ಟಡದ ವಠಾರದಲ್ಲಿ ನೆರವೇರಿತು.

ಬಡ ಜನರಿಗೆ ಭೂಮಿ ನೀಡುವ ಕುರಿತು ಗಂಭೀರ ಚಿಂತನೆ ನಡೆಸದ ಸರ್ಕಾರದ ಮಂತ್ರಿಗಳು ಹಾಗೂ ಮುಖ್ಯಸ್ಥರು ಭೂ ಕಬಳಿಕೆಯಲ್ಲಿ ತೊಡಗಿದ್ದಾರೆ. ಬೆಂಗಳೂರಿನಲ್ಲಿ ಶ್ರೀಮಂತರು ಅಕ್ರಮ ಭೂಗಳ್ಳರು ಅಂದಾಜು ರೂ.7600 ಕೋಟಿ ಮೌಲ್ಯದ 34 ಸಾವಿರ ಎಕರೆ ಭೂಮಿ ಕಬಳಿಸಿದ್ದಾರೆ – ಎಂದು ಕುಂದಾಪುರ ತಾಲೂಕು ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ರಾಜೀವ್ ಪಡುಕೋಣೆ ಖಂಡಿಸಿದರು.

ಅಕ್ರಮ ಸಕ್ರಮ ಹೋರಾಟ ಸಮಿತಿಯ ತಾಲೂಕು ಸಂಚಾಲಕ ಮಹಾಬಲ ವಡೇರಹೋಬಳಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರೈತ ಮುಖಂಡ ಯು.ದಾಸು ಭಂಡಾರಿ, ಸಿಪಿಐ(ಎಂ) ಅ... ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್, ಕೃಷಿ ಕೂಲಿ... ಸಂಘದ ತಾಲೂಕು ಕಾರ್ಯದರ್ಶಿ ವೆಂ... ಕೋಣಿ ಮತ್ತಿತರರು ಸಭೆಯನ್ನು... ಮಾತನಾಡಿದರು. ಇದೇ ಸಂದರ್ಭದಲ್ಲಿ ಹೆ... ಗ್ರಾಮ ಪಂಚಾಯತ್ ವ್ಯಾಪ್ತಿಯ ಅಕ್ರಮ ... ಹೋರಾಟ ಸಮಿತಿಯನ್ನು ರಚಿಸಲಾಯ್ತು.

ಹಮಾಲಿ ಕಾರ್ಮಿಕನ ಮೇಲೆ ಮಂಗಳೂರಿನಲ್ಲಿ ಪ್ರತಿಭಟನೆ:

ಮಂಗಳೂರಿನ ಕೇಂದ್ರ ಮಾರುಕಟ್ಟೆ... ಹಮಾಲಿ ಕಾರ್ಮಿಕ ಸಿದ್ದೀಕ್ ಅವರ ... ಮಾಲಿಕ ಹಲ್ಲೆ ನಡೆಸಿದ್ದಕ್ಕಾಗಿ, ಕೇಂದ್ರ ಮಾ... ತಲೆ ಹೊರೆ ಕಾರ್ಮಿಕರ ಸಂಘ ನವಂಬ... ರಂದು ಬಂದರು ಪೋಲೀಸ್ ಠಾಣೆ ಎ... ಪ್ರತಿಭಟನೆ ನಡೆಸಿತು.

ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯ... ವಸಂತ ಆಚಾರಿ ಹಾಗೂ ಹಮಾಲಿ ಕಾಮಿ... ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ಸ... ಕುಮಾರ್ ಬಜಾಲ್ ಪ್ರತಿಭಟನಾಕಾ... ಉದ್ದೇಶಿಸಿ ಮಾತನಾಡಿ ಕೇಂದ್ರ ಮಾರುಕಟ್ಟೆ... ದುಡಿಯುವ ಹಲವಾರು ಕಾರ್ಮಿಕ... ಕೇಳುವವರೇ ಇಲ್ಲವಾಗಿದೆ; ಹಾಗ... ಮಾಲಿಕರು ನಡೆಸುವ ದೌರ್ಜನ್ಯವನ್ನು ಸಹಿ... ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ... ಹಲ್ಲೆ ನಡೆಸಿದ ಮಾಲಿಕನನ್ನು ಬಂಧಿಸು... ಸಂಘಟನೆಯ ಸದಸ್ಯರು ಘೋ... ಕೂಗಿದರು.

ಪ್ರತಿಭಟನೆಯಲ್ಲಿ ಬಂದರು ಶ್ರ... ಸಂಘದ ಅಧ್ಯಕ್ಷ ವಿಲ್ಲಿ ವಿಲ್ಸನ್, ಪ್ರ... ಕಾರ್ಯದರ್ಶಿ ಬಿ.ಕೆ.ಇಮ್ತಿಯಾಜ್, ಬೀದಿ ... ವ್ಯಾಪಾರಸ್ಥರ ಸಂಘದ ಮುಖಂಡ... ಮಹಮ್ಮದ್ ಮುಸ್ತಾಫಾ, ಸಂತೋಷ್ ಕುಮಾ... ಆಸಿಫ್ ಮತ್ತಿತರರು ಭಾಗವಹಿಸಿದ್ದರು.

ಪಂಚಾಯತು ಅವ್ಯವಸ್ಥೆಯ ವಿ... ಮುನ್ನೂರಿನಲ್ಲಿ ಡಿವೈಎಫ್ಐ ಪ್ರತಿಭಟನೆ :


ಉಳ್ಳಾಲ ವಲಯದ ಮುನ್ನೂರು ಗ್ರಾ... ಪಂಚಾಯತ್ ವ್ಯಾಪ್ತಿಯಲ್ಲಿ ಮನೆ ಇಲ್ಲದವ... ಹಕ್ಕುಪತ್ರ, ರಸ್ತೆ ಜಂಕ್ಷನ್‌ನಲ್ಲಿ ಸಾರ್ವಜ... ಶೌಚಾಲಯ, ಬೀದಿ ಬದಿ ವ್ಯಾಪಾ... ಸರಿಯಾದ ವ್ಯವಸ್ಥೆ, ಎಲ್ಲಾ ವಾರ್ಡುಗ... ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ... ವಿಸ್ತರಣೆ–ಹೀಗೆ ಹಲವಾರು ಬೇಡಿಕೆಗ... ಉಳ್ಳಾಲ ವಲಯ ಡಿವೈಎಫ್ಐ ವತಿಯಿ... ಮುನ್ನೂರು ಗ್ರಾಮ ಪಂಚಾಯ... ಸಲ್ಲಿಸುತ್ತಿದ್ದರೂ, ಗ್ರಾಮ ಪಂಚಾಯ... ಅವ್ಯವಸ್ಥೆಗಳನ್ನು ನಿವಾರಿಸುವಲ್ಲಿ ವಿಫಲವಾ... ಇದರ ವಿರುದ್ಧವಾಗಿ ಡಿವೈಎಫ್ಐ ನೇತೃತ್ವ... ನವಂಬರ್ 18 ರಂದು ಕುತ್ತಾರು ಜಂಕ್ಷನ್... ಪ್ರತಿಭಟನಾ ಸಭೆಯನ್ನು ಏರ್ಪಡಿಸಲಾಗಿತ್ತು.

ಪ್ರತಿಭಟನಾಕಾರರನ್ನುದ್ದೇಶಿಸಿ ಎಸ್ಎಫ... ರಾಜ್ಯ ಸಮಿತಿ ಸಹ ಕಾರ್ಯದರ್ಶಿ ಜೀವನ್ ರಾ... ಕುತ್ತಾರ್, ಸಿಪಿಐ(ಎಂ) ಉಳ್ಳಾಲ ವಲ... ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಮಾತನಾಡಿದ...

ಉಳ್ಳಾಲ ವಲಯ ಡಿವೈಎಫ್ಐ ಅ... ಮಹಾಬಲ ದೆಪ್ಪೆಲಿಮಾರ್, ಪಂಚಾಯತ್ ಸ... ಗಣೇಶ್ ಟೈಲರ್, ಡಿವೈಎಫ್ಐ ಘ... ಅಧ್ಯಕ್ಷರುಗಳಾದ ರಾಜೇಶ್, ಉದಯ್ ... ಭೋಜ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.



ಜನಶಕ್ತಿ
ಕನ್ನಡ ವಾರಪತ್ರಿಕೆ



‘ಭಾರತ ಗೆಲ್ಲಿಸಿ’ ಘೋಷಣೆ ಹಿಂದಿನ ಸಂಚು

ಜಿ.ವಿ. ಶ್ರೀರಾಮರೆಡ್ಡಿ

‘ಭಾರತ ಗೆಲ್ಲಿಸಿ’. ಘೋಷಣೆಯೊಂದಿಗೆ ಇಡೀ ರಾಜ್ಯದ ತುಂಬಾ ಕಾಣಿಸಿದ ಬ್ಯಾನರ್‌ಗಳು ಮತ್ತು ಕಟೌಟ್‌ಗಳು. ಅದರಲ್ಲಿ ನರೇಂದ್ರ ಮೋದಿ ಭಾವಚಿತ್ರದೊಂದಿಗೆ ಘೋಷಣೆ- ‘ನರೇಂದ್ರ ಮೋದಿ ಗೆದ್ದರೆ ಭಾರತ ಗೆದ್ದಂತೆ’. ಅಂದರೆ ನರೇಂದ್ರ ಮೋದಿಯನ್ನು ಗೆಲ್ಲಿಸಿದರೆ ಭಾರತ ಗೆಲ್ಲಿಸಿದಂತೆ !! ಇದರ ಒಟ್ಟು ಅರ್ಥ ನರೇಂದ್ರ ಮೋದಿ ಅಂದರೆ ಭಾರತ, ಭಾರತ ಅಂದರೆ ನರೇಂದ್ರ ಮೋದಿ. ಇದು ಅಪ್ಪಟ ಫ್ಯಾಸಿಸ್ಟ್ ಧೋರಣೆಯ ಸಂಕೇತ ಮತ್ತು ಅದರ ಸರ್ವಾಧಿಕಾರದ ಪ್ರತೀಕ. 1975ರಲ್ಲಿ ಈ ದೇಶದಲ್ಲಿ ಇಂದಿರಾಗಾಂಧಿ ತುರ್ತು ಪರಿಸ್ಥಿತಿಯನ್ನು ಹೇರಿ ದೇಶದ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿ ಸಂವಿಧಾನದಲ್ಲಿರುವ ಜನರ ಮೂಲಭೂತ ಹಕ್ಕುಗಳನ್ನು ರದ್ದು ಮಾಡಿದ್ದು ಭಾರತದ ಇತಿಹಾಸದಲ್ಲಿ ಕರಾಳ ಅಧ್ಯಾಯವಾಗಿ ದಾಖಲಾಗಿದೆ. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಅಂದಿನ ಅಧ್ಯಕ್ಷರಾಗಿದ್ದ ದೇವಕಾಂತ ಬರೂವ ಅವರು ತುರ್ತು ಪರಿಸ್ಥಿತಿಯನ್ನು ಸಮರ್ಥಿಸುವ ಭರದಲ್ಲಿ ‘ಇಂಡಿಯಾ ಎಂದರೆ ಇಂದಿರಾ, ಇಂದಿರಾ ಎಂದರೆ ಇಂಡಿಯಾ’ ಎಂಬ ಘೋಷಣೆಯನ್ನು ಕೊಟ್ಟಿದ್ದರು. ಈ ಬಿಜೆಪಿಯವರು ಇನ್ನೊಂದು ಹೆಜ್ಜೆ ಮುಂದೆ ಹೋಗಿ ‘ನರೇಂದ್ರ ಮೋದಿ ಗೆದ್ದರೆ ಭಾರತ ಗೆದ್ದ ಹಾಗೇ’ ಎಂಬ ಅತ್ಯಂತ ಅಪಾಯಕಾರಿ ಘೋಷಣೆಯನ್ನು ಕೊಟ್ಟಿದ್ದಾರೆ. ಅಕಸ್ಮಾತ್ ಆಗಿ ನರೇಂದ್ರ ಮೋದಿ ಗೆದ್ದರೆ ನಿಜವಾಗಿಯೂ ಭಾರತದ ಭವಿಷ್ಯತ್ತಿಗೆ ಗಂಭೀರ ಅಪಾಯ.

ಭಾರತ ಜಾತ್ಯಾತೀತ ಗಣತಂತ್ರ, ಇದು ನಮ್ಮ ಸಂವಿಧಾನದ ಘೋಷಣೆ. ಈ ಘೋಷಣೆಯ ಹಿಂದಿರುವ ಐತಿಹಾಸಿಕ ಸತ್ಯವನ್ನು ಮೋದಿ ಭಟ್ಟಂಗಿ ಘೋಷಣೆ ಕೊಟ್ಟವರು ತಿಳಿಯಬೇಕಾಗಿದೆ. ನಮ್ಮ ದೇಶ ಬಹುಧರ್ಮೀಯ, ಬಹು ಸಂಸ್ಕೃತಿ ಮತ್ತು ಬಹುಭಾಷಾ ದೇಶ. ಇಲ್ಲಿ ಎಲ್ಲ ಧರ್ಮಗಳು, ಎಲ್ಲ ಸಂಸ್ಕೃತಿಗಳು ಮತ್ತು ಭಾಷೆಗಳು ಒಟ್ಟಿಗೆ ಬಾಳಿ ಬದುಕಿವೆ. ಅಷ್ಟೇ ಅಲ್ಲ, ಅವರೆಲ್ಲರೂ ಸೇರಿ ಈ ದೇಶವನ್ನು ಕಟ್ಟಿದ್ದಾರೆ. ಇಲ್ಲಿ ಸರ್ವಧರ್ಮಗಳು ಸಮನ್ವಯವಾಗಿ ಮತ್ತು ಶಾಂತಿಯುತವಾಗಿ ಬಾಳಿವೆ, ಬಾಳುತ್ತಿವೆ. ಇದುವೇ ನಮ್ಮ ದೇಶದ ನಿಜವಾದ ಭವ್ಯ ಪರಂಪರೆ. ಇದನ್ನೇ ವಿಶ್ವ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು, ಜಗತ್ತಿಗೆ ಹೆಮ್ಮೆಯಿಂದ ಸಾರಿ ಹೇಳಿದ್ದು. ಇದೇ ಆ ಸಿಂಹವಾಣಿ. ಇಂತಹ ಪರಂಪರೆ ಇರುವ ಈ ದೇಶವನ್ನು ನಾಶಮಾಡಿ ಏಕಧರ್ಮೀಯ, ಏಕಮುಖಿ ಸಂಸ್ಕೃತಿಯ, ದೇಶವನ್ನಾಗಿಸುವ ಮಹಾನ್ ಪಿತೂರಿಯೇ ಈ ಸಂಘ ಪರಿವಾರದ ಯೋಜನೆ. ಇವರ ಭಾರತವೆಂದರೆ ‘ಹಿಂದು ಭಾರತ’. ಇಲ್ಲಿ ‘ಹಿಂದು ರಾಷ್ಟ್ರ’ವನ್ನು ನಿರ್ಮಿಸುವುದೇ ಇವರ ಸಿದ್ಧಾಂತ. ಹಿಂದೂ, ಹಿಂದಿ ಹಿಂದೂಸ್ತಾನ್ ಇದು ಇವರ ಕಾರ್ಯಸೂಚಿ. ಈ ಕಾರ್ಯಸೂಚಿಯನ್ನು ಜಾರಿಗೊಳಿಸುವುದೇ ಇವರ ರಾಜಕೀಯ ಷಡ್ಯಂತರ. ಇದಕ್ಕಾಗಿಯೇ ಇವರು ಇಂದು ‘ಭಾರತ ಎಂದರೆ ನರೇಂದ್ರ ಮೋದಿ, ನರೇಂದ್ರ ಮೋದಿ ಗೆದ್ದರೆ ಭಾರತ ಗೆದ್ದಂತೆ’ ಅನ್ನುತ್ತಿದ್ದಾರೆ. ಅಂದರೆ ನರೇಂದ್ರ ಮೋದಿ ಗೆದ್ದರೆ ಹಿಂದೂ ರಾಷ್ಟ್ರ ನಿರ್ಮಾಣ ಸಾಧ್ಯ, ಇಲ್ಲವಾದರೆ ಹಿಂದೂ ರಾಷ್ಟ್ರ ನಿರ್ಮಾಣ ಸಾಧ್ಯವಿಲ್ಲ ಎಂದು ಇವರು ಯೋಚಿಸುತ್ತಿರಬಹುದು. ಇವರು ಈ ಘೋಷಣೆ ಕೊಡುತ್ತಿರುವ ಕಾರಣ ಎಲ್ಲಾ ಧರ್ಮಗಳಿಗಿಂತ ಹಿಂದೂ ಧರ್ಮವೇ ಶ್ರೇಷ್ಠ ಎಂಬ ವಾದ. ಜಗತ್ತಿನಲ್ಲಿ ಆರ್ಯ ಜನಾಂಗವೇ ಶ್ರೇಷ್ಠ, ಅದು ಮಾತ್ರವೇ ಜಗತ್ತನ್ನು ಆಳಲು ಅರ್ಹ ಎಂದು ಜರ್ಮನಿಯ ಫ್ಯಾಸಿಸ್ಟ್ ಹಿಟ್ಲರ್ ಪ್ರತಿಪಾದಿಸಿದ ಸಿದ್ಧಾಂತವೂ ಇದೆ. ಹಿಟ್ಲರ್‌ನ ಪ್ರತಿರೂಪದಂತಿರುವ ನರೇಂದ್ರ ಮೋದಿ ಇಂದು ಈ ದೇಶದ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಘೋಷಿಸಿರುವ ಆರ್.ಎಸ್.ಎಸ್ ಮತ್ತು ಸಂಘ ಪರಿವಾರ ಈ ದೇಶದಲ್ಲಿ ಹಿಂದೂ ಧರ್ಮದ ಹೆಸರಿನಲ್ಲಿ ‘ಹಿಂದುತ್ವವಾದ’ವನ್ನು ಪ್ರತಿಪಾದಿಸುತ್ತದೆ. ಹಿಂದೂ ಧರ್ಮಕ್ಕೂ ಹಿಂದುತ್ವವಾದಕ್ಕೂ ಯಾವ ಸಂಬಂಧವೂ ಇಲ್ಲ. ಹಿಂದೂಧರ್ಮ ಎಂದೂ ಹಿಂದುತ್ವ ವಾದವನ್ನು ಪ್ರತಿಪಾದಿಸುವುದಿಲ್ಲ. ಇದನ್ನು ಸಂಘ ಪರಿವಾರ ಜನಕ ವಿ.ಡಿ.ಸಾವರ್ಕರ್‌ರವರೇ ಹೇಳಿದ್ದಾರೆ. ಆದರೆ ಸಂಘ ಪರಿವಾರವು ಹಿಂದೂ ಧರ್ಮವೇ ಹಿಂದುತ್ವವಾದ ಎಂದು ಹೇಳಿ ಈ ದೇಶದಲ್ಲಿ ಹಿಂದುಗಳು ಬಿಟ್ಟರೆ ಬೇರೆ ಯಾರೂ ಇರಲು ಸಾಧ್ಯವಿಲ್ಲ, ಒಂದು ವೇಳೆ ಇರಬೇಕೆಂದರೆ ಅವರು ಎರಡನೇ ದರ್ಜೆಯ ಪ್ರಜೆಗಳಾಗಿ ಹಿಂದೂಗಳ ಅಡಿಯಾಳುಗಳಾಗಿರ ಬೇಕೆಂಬುದು ಇವರ ವಾದ.

ನಮ್ಮ ದೇಶವು ಹಲವಾರು ರಾಜ್ಯಗಳ ಒಕ್ಕೂಟ ದೇಶ. ಇಲ್ಲಿ ವಿಭಿನ್ನ ರಾಜ್ಯಗಳು ಸೇರಿ ಒಕ್ಕೂಟ ರಚನೆ ಆಗಿರುವ ಉದ್ದೇಶವೇ ಇಲ್ಲಿ ವಿಭಿನ್ನ ನಾಗರೀಕತೆ, ವಿಭಿನ್ನ ಸಂಸ್ಕೃತಿ ಭಾಷೆಗಳು ಇರುವ ಕಾರಣಕ್ಕಾಗಿ. ಈ ವಿಭಿನ್ನ ಸಂಸ್ಕೃತಿಗಳನ್ನು, ರಾಷ್ಟ್ರೀಯತೆಗಳನ್ನು ಮತ್ತು ಭಾಷೆಗಳನ್ನು ರಕ್ಷಿಸಿ ಅವುಗಳನ್ನು ಅಭಿವೃದ್ಧಿಗೊಳಿಸಬೇಕೆಂಬುದು ಒಕ್ಕೂಟದ ನಿಜವಾದ ಉದ್ದೇಶ. ಈ ಒಕ್ಕೂಟ ರಾಜ್ಯಗಳು ಬಲಿಷ್ಟಗೊಳ್ಳಬೇಕು, ತನ್ಮೂಲಕ ಈ ವಿಭಿನ್ನ ರಾಷ್ಟ್ರೀಯತೆ, ಸಂಸ್ಕೃತಿಗಳು ಬಲಿಷ್ಟಗೊಳ್ಳಬೇಕು. ಹಾಗಾದಾಗಲೇ ಈ ದೇಶ ಬಲಿಷ್ಟಗೊಳ್ಳುವುದು. ಈ ಕಾರಣಕ್ಕೆ ನಮ್ಮ ದೇಶ ಇಡೀ ಜಗತ್ತಿನಲ್ಲೇ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಅದಕ್ಕಾಗಿ ನಮ್ಮ ದೇಶದ ಬಹುತೇಕ ಜನರು ‘ಮೇರಾ ಭಾರತ್ ಮಹಾನ್’ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇಂತಹ ಮಹಾನ್ ದೇಶಕ್ಕೆ ಹಿಂದುತ್ವವಾದವೆಂಬ ಕ್ಯಾನ್ಸರ್ ಬಂದೊದಗಿದೆ. ನಮ್ಮ ದೇಶದ ಬಹುತೇಕರು ಹಿಂದೂ ಧರ್ಮೀಯರು ಎಂಬುದು ನಿಜ. ಆದರೆ ಅವರೆಲ್ಲ ಹಿಂದುತ್ವವಾದಿಗಳಲ್ಲ. ಪರಮತ ಸಹಿಷ್ಣುತೆ ನಮ್ಮ ಜನರಲ್ಲಿದೆ. ಇದನ್ನೇ ಸ್ವಾಮಿ ವಿವೇಕಾನಂದರು ಚಿಕಾಗೋದಲ್ಲಿ ನಡೆದ ವಿಶ್ವ ಸರ್ವಧರ್ಮ ಸಮ್ಮೇಳನದಲ್ಲಿ ಪ್ರತಿಪಾದಿಸಿದ್ದು. ಅದಕ್ಕಾಗಿ ಎಷ್ಟೇ ಭಿನ್ನತೆಗಳಿದ್ದರೂ ನಮ್ಮ ದೇಶದ ಜನ ಭಾರತೀಯರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇಂತಹ ಒಂದು ದೇಶಕ್ಕೆ ವಿಷದ ಬೀಜಗಳನ್ನು ಹಾಕುತ್ತಿದ್ದಾರೆ ಸಂಘ ಪರಿವಾರದವರು. ಈ ದೇಶ ಮತ್ತು ಇದರ ಇತಿಹಾಸದಲ್ಲಿ ಈ ವಿಷದ ಅಲೋಚನೆಯನ್ನು ಹುಟ್ಟಿಹಾಕಿದವರು ಬ್ರಿಟೀಷ್ ಸಾಮ್ರಾಜ್ಯಶಾಹಿಗಳು. ಈ ದೇಶವನ್ನು ಒಡೆದು ಆಳುವ ಹುನ್ನಾರದಲ್ಲಿ ಇವರು ಮತ್ತು ಇತಿಹಾಸಕಾರರು ಮೊದಲ ಬಾರಿಗೆ ಹಿಂದೂ ಇತಿಹಾಸದ ಕಾಲ ಮತ್ತು ಮುಸ್ಲಿಂ ಇತಿಹಾಸ ಕಾಲವೆಂದು ವಿಭಾಗಿಸಿದರು. ಇದರಿಂದ ಪ್ರೇರಿತಗೊಂಡು ಭಾರತದ ಕೆಲವು ಇತಿಹಾಸಕಾರರು ಬ್ರಿಟೀಷರ ವಿರುದ್ಧ ಹೋರಾಟಕ್ಕೆ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಪ್ರಯತ್ನಗಳನ್ನು ಬಹಳ ವ್ಯವಸ್ಥಿತವಾಗಿ ಇತಿಹಾಸದಲ್ಲಿ ಸೇರಿಸಲು ಪ್ರಯತ್ನ ಮಾಡಿದ್ದಾರೆ. ನಮ್ಮನ್ನು ಆಳುತ್ತಿರುವ ಬ್ರಿಟೀಷರು ಕ್ರಿಶ್ಚಿಯನ್ ಧರ್ಮದ ಅನುಯಾಯಿಗಳು, ಅವರು ಈ ದೇಶದಲ್ಲಿ ಬಹಳ ವ್ಯವಸ್ಥಿತವಾಗಿ ಕ್ರಿಶ್ಚಿಯನ್ ಧರ್ಮವನ್ನು ಬೆಳೆಸಿ ಬಲಿಷ್ಟಗೊಳಿಸಲು ಅವರಿಗಿರುವ ರಾಜಕೀಯ ಶಕ್ತಿಯನ್ನು ಉಪಯೋಗಿಸುತ್ತಿದ್ದಾರೆಂದು, ಹಿಂದೂ ಧರ್ಮವು ಕ್ರಿಶ್ಚಿಯನ್ ಧರ್ಮಕ್ಕಿಂತ ಉನ್ನತ ಮಟ್ಟದ್ದೆಂದು ಹಾಗಾಗಿ ಹಿಂದು ಧರ್ಮವನ್ನು ಮತ್ತು ಅದರ ಸಂಸ್ಕೃತಿಯನ್ನು ಉಳಿಸಬೇಕಾದರೆ ಬ್ರಿಟೀಷ್‌ರನ್ನು ಈ ದೇಶದಿಂದ ಓಡಿಸಬೇಕೆಂದು, ಹಿಂದೂ ಧರ್ಮ ನೆಲೆಸಿರುವ ಈ ಭೂಮಿ ಪವಿತ್ರವೆಂದು, ಇದು ಹಿಂದೂಗಳ ಮಾತೃಭೂಮಿಯೆಂದು, ಈ ಮಾತೃಭೂಮಿಯ ಮೇಲೆ ಅನ್ಯಧರ್ಮದವರ ಆಕ್ರಮಣವನ್ನು ಹಿಂದೂಗಳು ಸಹಿಸಲಾರರೆಂದು ಉದ್ರೇಕದ ಅಂಶಗಳನ್ನು ಸೇರಿಸಿ ಬರೆದರು. ಇದರಲ್ಲಿ ಪ್ರಮುಖ ಇತಿಹಾಸಕಾರರಾದ ಪ್ರೊಫೆಸರ್ ನೀಲಕಂಠಶಾಸ್ತ್ರಿಯಿಂದ ಹಿಡಿದು ಇಂದಿನ ಎಂ.ವಿ.ಕಾಮತ್‌ರಂತರವರೆಗೂ ದೊಡ್ಡ ಪಟ್ಟಿಯೇ ಇದೆ. “ಜನನೀ ಜನ್ಮ ಭೂಮಿಷ್ಯ, ಸ್ವರ್ಗಾದಪೇ ಗರಿಯಸಿ” ಎಂಬುದಾಗಿ ಈ ಭೂಮಿಯ ಪವಿತ್ರತೆಯ ಬಗ್ಗೆ ಭಾವನೆಯನ್ನು ಉದ್ರೇಕಗೊಳಿಸಿದ್ದಾರೆ. ಸ್ವರ್ಗಕ್ಕಿಂತ ತಾಯಿ ಮತ್ತು ಈ ಭೂಮಿ ಹೆಚ್ಚೆಂದು ಮೊದಲ ಬಾರಿಗೆ ಇತಿಹಾಸದಲ್ಲಿ ಬರೆದದ್ದು ಪ್ರೊಫೆಸರ್ ನೀಲಕಂಠಶಾಸ್ತ್ರಿಯವರು. ಇತಿಹಾಸದ ಇಂತಹ ತಪ್ಪು ವಿಶ್ಲೇಷಣೆಗಳಿಂದ ಹಿಂದುತ್ವವಾದಿಗಳಿಗೆ ಒಂದು ಅಸ್ತ್ರವನ್ನು ಒದಗಿಸಿಕೊಟ್ಟಿದೆ. ಇಂತಹ ಎಲ್ಲಾ ಅಪಾಯಕಾರಿ ಅಸ್ತ್ರಗಳನ್ನು ಉಪಯೋಗಿಸಿ ಇಂದು ನೂರಾರು ವರ್ಷಗಳಿಂದ ಭಿನ್ನ ರಾಷ್ಟ್ರೀಯತೆ, ಸಂಸ್ಕೃತಿ, ಭಾಷೆಗಳು ಒಂದೂ ಗೂಡಿ ಬದುಕಿ ಈ ದೇಶವನ್ನು ಕಟ್ಟಿ ಬೆಳೆಸಿದ ಈ ದೇಶದ ಇತಿಹಾಸ ತಿರುಚಿ ಸುಳ್ಳು ಇತಿಹಾಸಗಳನ್ನು ಸೃಷ್ಟಿಸಿ ಇತಿಹಾಸವನ್ನು ವಿಕೃತಗೊಳಿಸಿ, ಹುಸಿ ಶತೃಗಳನ್ನು ಇವರೇ ನಿರ್ಮಾಣಮಾಡಿ ದೇಶದ ಜನರನ್ನು ದಿಕ್ಕು ತಪ್ಪಿಸುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಅದರಿಂದಲೇ ಅವರು ಹಿಂದೂ ಧರ್ಮ ಅಪಾಯದಲ್ಲಿದೆ, ದೇಶ ದುರ್ಬಲಗೊಳ್ಳುತ್ತಿದೆ ಎಂಬ ಸುಳ್ಳುಗಳನ್ನು ಹೇಳಿ ಜನರ ಭಾವನೆಗಳನ್ನು ಕೆರಳಿಸಿ ರಾಜಕೀಯ ಅಧಿಕಾರವನ್ನು ಪಡೆಯುವ ಹುನ್ನಾರವನ್ನು ಆರ್.ಎಸ್.ಎಸ್. ಮತ್ತು ಸಂಘ ಪರಿವಾರ ಹೂಡಿದೆ. ಅದಕ್ಕಾಗಿ ಬಲಿಷ್ಟ ನಾಯಕ, ಸಮರ್ಥ ನಾಯಕ, ಅಭಿವೃದ್ಧಿಯ ಹರಿಕಾರ ಎಂಬ ಪದಪುಂಜಗಳನ್ನು ಹರಿಯ ಬಿಟ್ಟಿದ್ದಾರೆ. ಈ ‘ಸಮರ್ಥ’ ನಾಯಕನು 2002ರಲ್ಲಿ ಗುಜರಾತ್‌ನಲ್ಲಿ ನಡೆದ ಹತ್ಯಾಕಾಂಡವನ್ನು ತಡೆಯಲು ರಾಜಧರ್ಮವನ್ನು ಪಾಲಿಸಲಿಲ್ಲವೆಂದು ಇದೇ ಸಂಘ ಪರಿವಾರದ ಮುಖವಾಡವಾಗಿದ್ದ ಅಂದಿನ ಪ್ರಧಾನಿ ವಾಜಪೇಯಿ ಹೇಳಿದ್ದನ್ನು ಇವರು ಮರೆತರೆ? ಈ ರಾಷ್ಟ್ರ ದುರ್ಬಲಗೊಂಡಿದೆ ಎಂದು ಬೊಬ್ಬೆ ಹಾಕುತ್ತಿರುವ ಇವರಿಗೆ ಒಂದು ಪ್ರಶ್ನೆ, ಈ ರಾಷ್ಟ್ರವನ್ನು ದುರ್ಬಲಗೊಳಿಸಿದವರಾರು? ನೀವಲ್ಲವೇ. ಎಷ್ಟೇ ಭಿನ್ನ ರಾಷ್ಟ್ರೀಯತೆಗಳಿರುವ, ಭಿನ್ನ ಸಂಸ್ಕೃತಿಗಳಿರುವ, ಭಿನ್ನ ಭಾಷೆಗಳನ್ನಾಡುವ ಜನರಿದ್ದರೂ ಈ ದೇಶವನ್ನು ಮತ್ತು ಇವರು ಹೇಳುವ ಈ ಮಾತೃಭೂಮಿಯನ್ನು ವಿದೇಶಿ ಆಕ್ರಮಣಕಾರರಿಂದ ವಿಮೋಚನೆಗೊಳಿಸಲು ಒಂದಾಗಿ ಹೋರಾಟ ಮಾಡಲಿಲ್ಲವೆ? ಈ ದೇಶಕ್ಕಾಗಿ ಅವರೆಲ್ಲರೂ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಲಿಲ್ಲವೆ? ಕಡೆಗೆ ಅವರ ಪ್ರಾಣಗಳನ್ನು ಬಲಿಕೊಟ್ಟು ಈ ದೇಶವನ್ನು ವಿಮೋಚನೆಗೊಳಿಸಿದರು. ದೇಶ ಕಂಡ ಈ ಮಹಾನ್ ದೇಶ ಪ್ರೇಮಿ ಹೋರಾಟದಲ್ಲಿ ಈ ದೇಶದ ಮತ್ತು ದೇಶಭಕ್ತಿಯ ವಾರಸುದಾರರೆಂದು ಹೇಳುವ ಈ ಸಂಘ ಪರಿವಾರದವರು ಎಲ್ಲಿದ್ದರು? ಯಾವ ನೇಣುಗಂಬಕ್ಕೆ ಹತ್ತಿದರು, ಯಾವ ಜೈಲಿನಲ್ಲಿದ್ದರು? ಬ್ರಿಟೀಷರ ಜೈಲಿನಿಂದ ಹೊರಗೆ ಬರಲು ನನ್ನನ್ನು ಜೈಲಿನಿಂದ ಬಿಡುಗಡೆಗೊಳಿಸಿದರೆ ನಿಮ್ಮ ಮಹಾರಾಣಿಯವರ ಸರ್ಕಾರದ ನಮ್ರ ಸೇವಕನಾಗಿ ಕೆಲಸ ಮಾಡುತ್ತೇನೆಂದು 1911 ಏಪ್ರಿಲ್‌ನಲ್ಲಿ ಬ್ರಿಟೀಷರಿಗೆ ಮುಚ್ಚಳಿಕೆಯನ್ನು ಬರೆದುಕೊಟ್ಟು, ದಮ್ಮಯ್ಯ ಹಾಕಿ, ಅವರ ಕೈಕಾಲು ಹಿಡಿದು ಅಂಡಮಾನ್ ಜೈಲಿನಿಂದ ಹೊರಗೆ ಬಂದಿದ್ದು ಹಿಂದುತ್ವವಾದ ಪ್ರತಿಪಾದಕ ಮತ್ತು ಇವರ ಸಂಘ ಪರಿವಾರದ ಜನಕ ವಿ.ಡಿ.ಸಾವರ್ಕರ್‌ರವರು ಅಲ್ಲವೆ? 1942 ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿಲ್ಲ, ನಾನು ಸ್ವಾತಂತ್ರ್ಯ ಹೋರಾಟಗಾರನಲ್ಲ ಎಂದು ಆಗ್ರಾದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮುಚ್ಚಳಿಕೆ ಬರೆದುಕೊಟ್ಟು ಹೊರಗೆ ಬಂದಿದ್ದು, ನೀವು ಯಾರಿಗೆ ‘ಭಾರತ ರತ್ನ’ ಕೊಡಿ ಎಂದು ಕಿರುಚಾಡುತ್ತಿದ್ದೀರೋ ಅವರೇ ಈ ಅಟಲ್ ಬಿಹಾರಿ ವಾಜಪೇಯಿ ಅವರಲ್ಲವೆ? ಇವು ಇತಿಹಾಸದ ದಾಖಲೆಗಳಲ್ಲಿ ಇವೆ. ಈ ರೀತಿಯಲ್ಲಿ ಎಲ್ಲ ಧರ್ಮೀಯರು, ಭಾಷಿಕರು ಸೇರಿ ಈ ದೇಶವನ್ನು ಪರಕೀಯರಿಂದ ವಿಮೋಚನೆಗೊಳಿಸಿ

ಪುಟ 11 ಕ್ಕೆ

ಪ್ರಜಾಪ್ರಭುತ್ವದ ಮುಖವಾಡ ಕಳಚಿದ ಒರಟು ವೋಟ್ ಬ್ಯಾಂಕ್ ರಾಜಕೀಯ

ಈಗ ತಮಗೆ ವಾಜಪೇಯಿಯವರಂತ ಮುಖವಾಡಗಳ ಆವಶ್ಯಕತ ಇಲ್ಲ ಎಂದು ನಿರ್ಧರಿಸಿದಂತಿರುವ ಆರೆಸ್ಸೆಸ್/ಬಿಜೆಪಿ ಮಂದಿ ತಾವು ಜಾತ್ಯಾತೀತತೆಯ ವಿರೋಧಿಗಳಷ್ಟೇ ಅಲ್ಲ, ಪಕ್ಕಾ ಪ್ರಜಾಪ್ರಭುತ್ವ-ವಿರೋಧಿಗಳು ಕೂಡಾ ಎಂದು ಮತ್ತೊಮ್ಮೆ ಪ್ರದರ್ಶಿಸುತ್ತಿದ್ದಾರೆ. ಕೋಮು ಧ್ರುವೀಕರಣದ ತಮ್ಮ ತಂತ್ರ ಫಲಿಸುತ್ತಿಲ್ಲ ಎಂಬ ಕಳವಳದಿಂದಾಗಿ ಅವರು ತಮ್ಮ ಬತ್ತಳಿಕೆಯಲ್ಲಿರುವ ಎಲ್ಲ ಅಸ್ತ್ರಗಳನ್ನು ಬಳಸುತ್ತಿದ್ದಾರೆ, ಒರಟು ವೋಟ್ ಬ್ಯಾಂಕ್ ರಾಜಕೀಯಕ್ಕೆ ಇಳಿಯುತ್ತಿದ್ದಾರೆ. ಇದು ಯಶಸ್ವಿಯಾಗಲು ಬಿಡುವುದು ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರಕ್ಕೆ ಮಾರಕ.



ಸೀತಾರಾಮ್ ಯೆಚೂರಿ

ಗುಜರಾತಿನ ಮುಖ್ಯಮಂತ್ರಿಗಳನ್ನು ಬಿಜೆಪಿಯ ಪ್ರಧಾನ ಮಂತ್ರಿ ಆಕಾಂಕ್ಷಿಯಾಗಿ ಬಿಂಬಿಸಲು ಆರೆಸ್ಸೆಸ್ ನಿರ್ಧರಿಸಿದಾಗ ಇದು, ಕೊನೆಗೂ ಆರೆಸ್ಸೆಸ್/ಬಿಜೆಪಿ ತಮ್ಮ ನಿಜ ಆಶಯಗಳನ್ನು ಪ್ರಜಾಪ್ರಭುತ್ವದ ಹಂದರದ ಮರೆಯಲ್ಲಿ ಬಚ್ಚಿಡುವ ಒಂದು ಮುಖವಾಡದ ಆವಶ್ಯಕತೆ ಇನ್ನಿಲ್ಲವೆಂದು ಅದನ್ನು ಬಿಚ್ಚಿಟ್ಟಿರುವುದರ ಸಂಕೇತವಾಗಿದೆ ಎಂದು ಈ ಅಂಕಣದಲ್ಲಿ ಹೇಳಿದ್ದೆವು. ಆರೆಸ್ಸೆಸ್‌ಗೆ ಈಗ ವಾಜಪೇಯಿಯವರಂತವರ ಆವಶ್ಯಕತೆ ಇಲ್ಲ, ಆ ಘಟ್ಟವನ್ನು ಅದು ದಾಟಿ ಹೋಗಿದೆ ಎಂಬುದರ ಸಂಕೇತವಾಗಿತ್ತದು. ಅದಕ್ಕೂ ಮುಖ್ಯವಾಗಿ, ಆರೆಸ್ಸೆಸ್ ತನ್ನ ಮೂಲಮಂತ್ರಕ್ಕೆ, ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ ತನ್ನ ಆವೃತ್ತಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ತನ್ನ ಮೂಲಮಂತ್ರಕ್ಕೆ ಮರಳಿದೆ ಎಂಬುದರ ಸಂಕೇತವಾಗಿತ್ತದು.

ಈ ಗುರಿಸಾಧನೆಗೆ ಆರೆಸ್ಸೆಸ್ ತನ್ನ ಬತ್ತಳಿಕೆಯಲ್ಲಿರುವ ಅಸ್ತ್ರಗಳನ್ನೆಲ್ಲ ಬಳಸುತ್ತದೆ. ಆದರೂ, ಈಗಲೂ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದೇ ಅದರ ಪ್ರಮುಖ ಅಸ್ತ್ರ- ಧಾರ್ಮಿಕ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರ, ಅದರಲ್ಲೂ ಮುಸ್ಲಿಮರ ನಡುವೆ ವೈಷಮ್ಯಪೂರ್ಣ ವಿಭಜನೆಗಳನ್ನು ಸೃಷ್ಟಿಸುವ ಮೂಲಕ. ಇದರೊಂದಿಗೆ ರಕ್ತಪಾತ, ಕೊಲೆ-ಸುಲಿಗೆಗಳ ಘೋರ ಪರಿಣಾಮಗಳು.

ಇತರ ಮಾರಕ ಅಸ್ತ್ರಗಳು

ಅವರ ಇತರ ಮಾರಕ ಅಸ್ತ್ರಗಳೆಂದರೆ- ಭಾರತೀಯ ಇತಿಹಾಸವನ್ನು ಮತ್ತೆ ಬರೆಯುವುದು; ತಾನು ಉದ್ದೇಶಪೂರ್ವಕವಾಗಿಯೇ ಪ್ರಜ್ಞಾಪೂರ್ವಕವಾಗಿ ದೂರವಿರಿಸಿದ್ದ ಸ್ವಾತಂತ್ರ್ಯ ಹೋರಾಟದ ಪ್ರತಿಮೆಗಳನ್ನು ತಮ್ಮದಾಗಿಸಿಕೊಳ್ಳುವುದು; ವೈಯಕ್ತಿಕ ಸ್ವಾತಂತ್ರ್ಯದ ಉದ್ಧಟ ನಿರಾಕರಣೆ, ಮತ್ತು ವೈಯಕ್ತಿಕ ಖಾಸಗಿತನದ ನಗ್ನ ಉಲ್ಲಂಘನೆ; ಚುನಾವಣಾ ಪ್ರಚಾರದಲ್ಲಿ ಪ್ರಜಾಸತ್ತಾತ್ಮಕವಲ್ಲದ ಭಾಷೆಯ, ಪ್ರಜಾಪ್ರಭುತ್ವ-ವಿರೋಧಿ ವಿಧಾನಗಳ ಬಳಕೆ ಇತ್ಯಾದಿ ಇತ್ಯಾದಿ. ಅಂದರೆ ಬಲಿಷ್ಠರು ಮಾಡಿದ್ದೇ ಸರಿ ಎಂಬ ಕಾಡಿನ ನಿಯಮ. ಇದು ಪ್ರಜಾಪ್ರಭುತ್ವಕ್ಕೆ, ಪ್ರಜಾಪ್ರಭುತ್ವ ಆಚರಣೆಗಳಿಗೆ ತದ್ವಿರುದ್ಧವಾದದ್ದು. ಹೀಗೆ, ತಾವು ಜಾತ್ಯಾತೀತತೆಯ ವಿರೋಧಿಗಳಷ್ಟೇ ಅಲ್ಲ, ಪಕ್ಕಾ ಪ್ರಜಾಪ್ರಭುತ್ವ-ವಿರೋಧಿಗಳು ಕೂಡ ಎಂದು ಅವರು ಮತ್ತೊಮ್ಮೆ ಪ್ರದರ್ಶಿಸುತ್ತಿದ್ದಾರೆ.

ಇತ್ತೀಚಿನ ಮುಝಫ್ಫರ್‌ನಗರದ ಗಲಭೆಗಳಲ್ಲಿ ಆಪಾದಿತರಾಗಿರುವ ತಮ್ಮ ಇಬ್ಬರು ಶಾಸಕರನ್ನು ಆಗ್ರಾದಲ್ಲಿ ಬಿಜೆಪಿ ಪ್ರಧಾನ ಪಟ್ಟಾಕಾಂಕ್ಷಿ ಉದ್ದೇಶಿಸಿ ಮಾತಾಡುವ ನವೆಂಬರ್ 21ರ ಒಂದು ರಾಜಕೀಯ ರ್‍ಯಾಲಿಯಲ್ಲಿ 'ಗೌರವಿಸುವ' ಅದರ ಇತ್ತೀಚಿನ ನಿರ್ಧಾರ ಇದನ್ನು ದೃಢಪಡಿಸಿದೆ. ಗುಜರಾತಿನ ಮುಖ್ಯಮಂತ್ರಿಗಳೊಂದಿಗೆ ವೇದಿಕೆಯಲ್ಲಿರುವ ಈ ಇಬ್ಬರು ಬಿಜೆಪಿ ಶಾಸಕರನ್ನು ಸಪ್ಟಂಬರ್ 7ರಂದು ಉದ್ರೇಕಕಾರಿ ಭಾಷಣಗಳನ್ನು ಮಾಡಿ ಗಲಭೆಗಳು ಭುಗಿಲೇಳುವಂತೆ ಮಾಡಿದ್ದಕ್ಕಾಗಿ ಬಂಧಿಸಲಾಗಿತ್ತು. ಇವರಲ್ಲೊಬ್ಬ ಶಾಸಕನ ಮೇಲೆ ಸುಳ್ಳು ವೀಡಿಯೋವನ್ನು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರಕ್ಕೆ ಹಾಕಿದ ಆಪಾದನೆಯೂ ಇದೆ. ಅದು ಕೋಮುಭಾವನೆಗಳನ್ನು ಉದ್ರೇಕಿಸಿ ಗಲಭೆಗಳಿಗೆ ಕಾರಣವಾಗಿತ್ತು. ಇನ್ನೊಬ್ಬ ಬಿಜೆಪಿ ಶಾಸಕನನ್ನು ಈ ವರ್ಷ ಜೂನ್ ತಿಂಗಳಲ್ಲಿ ನಡೆದ ಗಲಭೆಯಲ್ಲಿ ಹಿಡಿಯಲಾಗಿತ್ತು. ಮುಝಫ್ಫರ್‌ನಗರದ ಸಪ್ಟಂಬರ್ ಗಲಭೆಗಳಲ್ಲಿ 65 ಮಂದಿ ಸತ್ತರು, 60ಸಾವಿರಕ್ಕೂ ಹೆಚ್ಚು ಮಂದಿ ನಿರಾಶ್ರಿತರಾದರು ಎಂದು ಮಾಧ್ಯಮಗಳು ವರದಿ ಮಾಡಿವೆ. ರಾಷ್ಟ್ರೀಯ ಭದ್ರತಾ ಕಾನೂನಿನ ಅಡಿಯಲ್ಲಿ ಬಂಧಿಸಲ್ಪಟ್ಟಿದ್ದ ಈ ಇಬ್ಬರು ಬಿಜೆಪಿ ಶಾಸಕರಿಗೆ ಇತ್ತೀಚೆಗೆ ಜಾಮೀನು ಸಿಕ್ಕಿದೆ. ರಾಷ್ಟ್ರೀಯ ಭದ್ರತಾ ಕಾನೂನಿನ ಅಡಿಯಲ್ಲಿ ದಾಖಲಿಸುವ ಕೇಸುಗಳಲ್ಲಿ ಅದು ಅನ್ವಯವಾಗುತ್ತದೋ ಇಲ್ಲವೋ ಎಂದು ಹೈಕೋರ್ಟಿನ ರಾಜ್ಯ ಸಲಹಾ ಮಂಡಳಿ ದೃಢಪಡಿಸಬೇಕು. ಇದಕ್ಕೆ ಈ ಕೇಸಿನಲ್ಲಿ ಸಾಕಷ್ಟು ಸಾಕ್ಷ್ಯಗಳಿಲ್ಲ ಎಂದು ಉತ್ತರಪ್ರದೇಶದ ಹೈಕೋರ್ಟ್ ರಾಜ್ಯ ಸಲಹಾ ಮಂಡಳಿ ದೃಢಪಡಿಸಲಿಲ್ಲ.

ಇತ್ತೀಚೆಗೆ ಈ ಇಬ್ಬರು ಶಾಸಕರಲ್ಲದೆ, ಇನ್ನೂ ಒಬ್ಬ ಬಿಜೆಪಿ ಶಾಸಕ ಮತ್ತು ಇತರ 34 ಮುಝಪ್ಫರ್‌ನಗರ ಗಲಭೆಗಳಿಗೆ ಸಂಬಂಧಪಟ್ಟಂತೆ ಬಂಧಿಸಲ್ಪಟ್ಟಿದ್ದ ಬಿಜೆಪಿ ಕಾರ್ಯಕರ್ತರನ್ನು ಉತ್ತರಪ್ರದೇಶ ರಾಜ್ಯ ಬಿಜೆಪಿ ಸಾರ್ವಜನಿಕವಾಗಿ ಸನ್ಮಾನಿಸಿತ್ತು. ಇವರೆಲ್ಲರಿಗೆ ಗಲಭೆಗಳಲ್ಲಿ ರಾಜ್ಯ ಸರಕಾರದ ವಿರುದ್ಧ ಹೋರಾಟ ನಡೆಸಿದವರು ಮತ್ತು "ಮಾತೆ, ಸೋದರಿ ಮತ್ತು ಮಗಳ ಹಾಗೂ ಭಾರತೀಯ ಸಂಸ್ಕೃತಿಯ ಸುರಕ್ಷಿತತೆಗಾಗಿ ತ್ಯಾಗ (!) ಮಾಡಿ ಬಂಧನಕ್ಕೊಳಗಾದವರು' ಎಂದು ಮೆಚ್ಚುಗೆ ಪತ್ರಗಳನ್ನು ನೀಡಲಾಯಿತು.

ಗಮನಾರ್ಹ ಸಂಗತಿಯೆಂದರೆ, ಈ ಸಮಾರಂಭ ನಡೆದದ್ದು ಮುಝಪ್ಫರ್‌ನಗರದಲ್ಲೇ. ಉತ್ತರಪ್ರದೇಶ ವಿಧಾನ ಸಭೆಯಲ್ಲಿ ಬಿಜೆಪಿಯ ಮುಖಂಡ, ಮತ್ತು ಸ್ವತಃ ಉದ್ರೇಕಕಾರಿ ಭಾಷಣ ಮಾಡಿದವರೆಂದು ಹೆಸರಿಸಲಾದ ವ್ಯಕ್ತಿ ಈ ಸಮಾರಂಭದ ಮುಖ್ಯ ಅತಿಥಿ.

ತಳಮಳ, ಹತಾಶೆ !

ಈ ಪ್ರದೇಶದಲ್ಲಿ ಕೋಮು ಧ್ರುವೀಕರಣ ತರುವ ತನ್ನ ಪ್ರಯತ್ನಗಳು ಯಶಸ್ವಿಯಾಗುತ್ತಿ ಎಂಬ ತಳಮಳಕ್ಕೆ ಬಿಜೆಪಿ ಒಳಗಾಗುತ್ತಿರುವುದು ಸ್ಪಷ್ಟ. ಕೂಲಿಕಾರರ ಸಾಮೂಹಿಕ ವಲಸೆ ಎರಡೂ ಸಮುದಾಯಗಳಿಗೆ ಹಣಕಾಸಿನ ತೊಂದರೆಗಳನ್ನುಂಟು ಮಾಡಿದೆ. ಇದು ಎಲ್ಲ ಮನೆಗಳನ್ನೂ ತಟ್ಟಿದೆ. ಇದರ ಪರಿಣಾಮವಾಗಿ ಎರಡೂ ಸಮುದಾಯಗಳ ಹಿರಿಯರು ಪರಸ್ಪ ರಾಜಿ ಮಾಡಿಕೊಳ್ಳುವ ಪ್ರಯತ್ನಗಳನ್ನು ಆರಂಭಿಸಿದ್ದಾರೆ. ಇದು ಆರೆಸ್ಸೆಸ್/ಬಿಜೆಪಿ ತಂತ್ರಗಳಿಗೆ ಅನುಕೂಲಕರವಲ್ಲ ಎಂಬುದು ಸ್ಪಷ್ಟ. ಆದ್ದರಿಂದಲೇ ಮತ್ತೆ ಧ್ರುವೀಕರಣ ತರುವ, ಜನಗಳನ್ನು ಕೋಮು ಆಧಾರದಲ್ಲಿ ಇನ್ನಷ್ಟು ವಿಭಜಿಸುವ, ಆಮೂಲಕ ಚುನಾವಣಾ ಪ್ರಯೋಜನ ಪಡೆಯುವ ಪ್ರಯತ್ನಗಳಿವು. ಬಹುಸಂಖ್ಯಾತರ ವೋಟ್‌ಬ್ಯಾಂಕನ್ನು ಕ್ರೋಢೀಕರಿಸುವ ಮೂಲಕ ನಡೆಸಿರುವ ವೋಟ್‌ಬ್ಯಾಂಕ್ ರಾಜಕೀಯದ ಒಂದು ಒರಟು ಪ್ರಯತ್ನ.

ಹೀಗಿವೆ 2014ರ ಸಾರ್ವತ್ರಿಕ ಚುನಾವಣೆಗಳ ನಂತರ ತಮ್ಮದೊಂದು ಸರಕಾರ ರಚಿಸುವ ಆರೆಸ್ಸೆಸ್/ಬಿಜೆಪಿಯ ಹತಾಶ ಪ್ರಯತ್ನಗಳು. ಇದಕ್ಕಾಗಿ ತಮ್ಮ ಬತ್ತಳಿಕೆಯಲ್ಲಿರುವ ಎಲ್ಲ ಅಸ್ತ್ರಗಳನ್ನು ಅವರು ಬಳಸುತ್ತಿರುವಂತೆ ಕಾಣುತ್ತದೆ. ಇದರಲ್ಲಿ ಅವರ ಯಶಸ್ಸು ನಮಗೆ ಈಗ ತಿಳಿದಿರುವ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಸಂಪೂರ್ಣವಾಗಿ ನಿರಾಕರಿಸುವ ಪ್ರಯತ್ನಗಳ ಹರಿಕಾರನಾಗುತ್ತದೆ. ಹೀಗಾಗಲು ಬಿಡಲಾಗದು.

ಈಗಿನ ಯುಪಿಎ-2 ಸರಕಾರದ ಜನ-ವಿರೋಧಿ ಧೋರಣೆಗಳಿಂದ ಜನರಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಆರೆಸ್ಸೆಸ್/ಬಿಜೆಪಿ ನೇತೃತ್ವದ ಕೂಟ ದುರುಪಯೋಗ ಪಡಿಸಿಕೊಳ್ಳಲು, ಆಮೂಲಕ ತಮ್ಮ ಗುರಿಸಾಧಿಸಿಕೊಳ್ಳಲು ಬಿಡಲಾಗದು. ನಮ್ಮ ಜನಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿ ಒಂದು ಕಾಂಗ್ರೆಸೇತರ, ಬಿಜೆಪಿ-ವಿರೋಧಿ ರಾಜಕೀಯ ಪರ್ಯಾಯದಲ್ಲಿ ವ್ಯಕ್ತಗೊಳ್ಳಬೇಕಾಗಿದೆ. ಇದು ಜನತೆಗೆ ಅತ್ಯಗತ್ಯವಾಗಿರುವ ಪರಿಹಾರಗಳನ್ನು ಒದಗಿಸಿ, ದೇಶವನ್ನು ಒಂದು ತಾಳಿಕೆಯ ಆರ್ಥಿಕ ಬೆಳವಣಿಗೆ ಮತ್ತು ಪ್ರಗತಿಯ ದಾರಿಯಲ್ಲಿ ಒಯ್ಯಬಲ್ಲ ರಾಜಕೀಯ ಪರ್ಯಾಯವಾಗಿರಬೇಕು.

65 ಮಂದಿಯನ್ನು ಬಲಿ ತೆಗೆದುಕೊಂಡು 60ಸಾವಿರಕ್ಕೂ ಹೆಚ್ಚು ಮಂದಿಯನ್ನು ನಿರಾಶ್ರಿತರಾಗಿಸಿದ ಮುಝಫ್ಫರ್‌ನಗರದ ಸಪ್ಟಂಬರ್ ಗಲಭೆಗಳನ್ನು ಉದ್ರೇಕಿಸಿದ ಆಪಾದನೆಯ ಮೇಲೆ ಒಂದು ತಿಂಗಳು ಜೈಲಿನಲ್ಲಿದ್ದು ಈಗ ಜಾಮೀನು ಪಡೆದಿರುವ ಮೂವರು ಬಿಜೆಪಿ ಶಾಸಕರನ್ನು ನವಂಬರ್ 21ರಂದು ಬಿಜೆಪಿಯ ಆಗ್ರಾ ರ್‍ಯಾಲಿಯಲ್ಲಿ 'ಸನ್ಮಾನಿಸ'ಲಾಯಿತು! ಆದರೆ ಆ ರ್‍ಯಾಲಿಯಲ್ಲಿ ವೇದಿಕೆಯ ಮೇಲೆ ನರೆಂದ್ರ ಮೋದಿಯವರು ಬರುವ ಮೊದಲು ಅವರನ್ನು ಅಲ್ಲಿಂದ ಕದಲಿಸಲಾಯಿತು. ಸನ್ಮಾನಿಸಿದ್ದೇಕೆ, ನಂತರ ಕದಲಿಸಿದ್ದೇಕೆ?- ಇದು ಕೋಮು ಧ್ರುವೀಕರಣದ ತಂತ್ರ ಫಲಿಸೀತೇ ಎಂಬ ಕಳವಳದ, ಹತಾಶೆಯ ಅಭಿವ್ಯಕ್ತಿಯೇ?



ಜನ-ಮನದಲ್ಲಿ ಅಲೆ ಸೃಷ್ಟಿಸದ ಮೋದಿ ರ್‍ಯಾಲಿ

ಭಾರೀ ಅಬ್ಬರದ ಪ್ರಕಾರದ ನಡುವೆ ಮೋದಿ ಕರ್ನಾಟಕ್ಕೆ ಬಂದು ಹೋಗಿದ್ದು ನಿಜಕ್ಕೂ ಸಂಚಲನವನ್ನು ಹುಟ್ಟಿಸಿತೇ? ಪಟ್ಟಕ್ಕೇರುವ ವ್ಯಸನದಲ್ಲಿರುವ ನ. ಮೋ. ಕರ್ನಾಟಕಕ್ಕೆ ಭೇಟಿ ನೀಡಿದ್ದು ಬಿಜೆಪಿಗೆ ಬಲ ತುಂಬಿತೇ? ಕುಸಿದ, ದೂರವಾದ ಮತದಾರರನ್ನೂ ಸೆಳೆಯಿತೇ? ಮೋದಿ ಮ್ಯಾಜಿಕ್ ರಾಜ್ಯದಲ್ಲಿ ನಡೆದೀತೇ. ಅನುಭವ ಏನು ಹೇಳುತ್ತದೆ?

ಎಸ್. ವೈ. ಗುರುಶಾಂತ್

ಬಿಜೆಪಿಯ ಪ್ರಧಾನಿ ಪಟ್ಟದ ಆಕಾಂಕ್ಷಿ ನರೇಂದ್ರ ಮೋದಿ ಕರ್ನಾಟಕಕ್ಕೆ ಬಂದು ಹೋಗಿದ್ದಾಯ್ತು. ಹಿಂದೆಲ್ಲಾ ಬಂದಿರಲಿಲ್ಲವೇ? ಈಗೇನು? ಆದರೆ 'ಪ್ರಧಾನಿ ಅಭ್ಯರ್ಥಿ'ಯಾಗಿ ಮೊದಲ ಬಾರಿ ಬಂದು ಹೋದರೆಂಬುದಕ್ಕೆ ವಿಶೇಷವಿದೆಯಂತೆ!

ನ.ಮೋ. ಎಂಬ ಬೆಲೂನ್ ಬೇಬಿ!

ಮೋದಿ ಸದಾ ವಿವಾದಾಸ್ಪದ ನಾಯಕ. ಹಲವು ಕಳಂಕಗಳ ಹೊತ್ತು ತಿರುಗುವ, ಆತಂಕ ...ುವ ಆರೋಪಿ. ಭಾರತದ ಇಂದಿನ ಸನ್ನಿವೇಶದಲ್ಲಿ ಆಳುವವರ್ಗಗಳಿಗೆ ಸಮರ್ಥವಾಗಿ ಸೇವೆ ಸಲ್ಲಿಸಲೆಂದೇ ಸಂಘಪರಿವಾರದ ಪ್ರಯೋಗ ಶಾಲೆಯಲ್ಲಿ ಸೃಷ್ಟಿಗೊಂಡ ಚಾರಿತ್ರಿಕ ಅಷ್ಟವಕ್ರ ಶಿಶು. 2002 ರಲ್ಲಿನ ಗುಜರಾತ್ ಹತ್ಯಾಕಾಂಡದ ಘಟನೆಯ ಬಳಿಕ ಅಲ್ಲಿಂದ ಇಲ್ಲಿಯವರೆಗೂ ಈ ಪ್ರನಾಳ ಶಿಶುವನ್ನು ಕಾರ್ಪೋರೇಟ್ ಕಂಪನಿಗಳ 'ಕೋಳಿ ಫಾರಂ'ನಲ್ಲಿ ಹೈಟೆಕ್ ಡೋಸು ಕೊಟ್ಟು ದೈತ್ಯನನ್ನಾಗಿ ಬೆಳೆಸಲು ಪ್ರಯತ್ನಿಸಲಾಗಿದೆ. ಇಂತಹ 'ಬೆಲೂನ್ ಬೇಬಿ' ನ.ಮೋ.ನನ್ನು ಭಾರತದಂತಹ ಮಹಾನ್ ದೇಶಕ್ಕೆ ಪ್ರಧಾನಿಯನ್ನಾಗಿಸುವ ತವಕ, ಅದಕ್ಕನುಗುಣವಾಗಿ 'ಗುಜರಾತ್ ಮಾದರಿ'ಯೇ ದೇಶಕ್ಕೆ ಮಾದರಿ ಎಂಬ ವಂಚನೆಯ ಹುನ್ನಾರಗಳು. ಇದಕ್ಕೆ ಅನುಗುಣವಾಗಿಯೇ ನಮ್ಮ ಮಾಧ್ಯಮಗಳ ಬುಡಮೇಲು ಕಾರ್ಯಾಚರಣೆ!

ಕಾಣದ ಸಂಚಲನ, ಮೂಡದ ಕಂಪನ.

ಮೊನ್ನೆ ನವೆಂ.17ರಂದು(2013) 'ಬೆಂಗಳೂರಿಗೆ ನ,ಮೋ. ಬಂದು ...ಗುವುದು ರಾಜ್ಯದಲ್ಲೆಲ್ಲಾ ಭಾರಿ ಸಂಚಲನವನ್ನೇ ಹುಟ್ಟಿಸಲಿದೆ, ಕಂಪನ ಮೂಡಿಸಲಿದೆ'ಯೆಂದೆಲ್ಲಾ ಪ್ರಚಾರಿಸಲಾಗಿತ್ತು. 'ಜಗದ ಗಮನ ಸೆಳೆದ' ಈ ನಾಯಕ ಇಲ್ಲಿಗೆ ಬಂದಾಗ ಭಯೋತ್ಪಾದಕರು ಕಂಡಲ್ಲೆಲ್ಲಾ ಬಾಂಬ್ ಸಿಡಿಸಲಿದ್ದಾರೆಂದೂ, ರ್‍ಯಾಲಿಯ ಸುತ್ತ ಮುತ್ತಾ ಕೋಮುಗಲಭೆಗಳು ಹೊತ್ತಿ ಉರಿಯಬಹುದೆಂದು ಸ್ವತಃ ಬಿಜೆಪಿ ನಾಯಕರು ಹೇಳ ತೊಡಗಿದ್ದು ನಿಜಕ್ಕೂ ಆತಂಕವನ್ನು ಹುಟ್ಟಿಸಿತ್ತು! (ಮೋದಿ ಸ್ನೇಹಿತರನ್ನು ಗಳಿಸುವುದಕ್ಕಿಂತ ಶತೃಗಳನ್ನಾಕೆ ಕಟ್ಟಿಕೊಳ್ಳುತ್ತಿದ್ದಾನೆ ಅಂತಾ ಅವರಿಗೆ ಹೊಳೆಯಬೇಕಿತ್ತು?) ಇದಕ್ಕೆ ಗುಪ್ತಾಚಾರ ಇಲಾಖೆಯೇ ಹೇಳಿದೆಯೆಂಬ ಹೈಪೂ ಸೃಷ್ಟಿಸಲಾಗಿತ್ತು. ಬಿಹಾರದ ಪ್ರಸಂಗದ ಬಳಿಕ ಪೋಲೀಸರೂ ಹೆಚ್ಚಿನ ಮುತುವರ್ಜಿ ವಹಿಸಿದ್ದರು ಹಾಗೂ ...ಸ್ಥಿಯಾಗಿ ನಿಭಾಯಿಸಿದರು. ಆದರೆ ಅಮೇರಿಕಾದ ಅಧ್ಯಕ್ಷನಂತೆ ಮೋದಿ ಬ್ರಿಗೇಡ್ ಗುಜರಾತ್‌ನಿಂದಲೇ ಪೋಲಿಸರನ್ನು ಕರೆಸಿದ್ದು ಇಲ್ಲಿನ ಪೋಲೀಸರ ಮೇಲೆ ವಿಶ್ವಾಸವಿಲ್ಲದ್ದರ ಸೂಚಕ, ಹೀಗೆ ಪೋಲೀಸರನ್ನು ಅವಮಾನಿಸಿದ ಪ್ರಸಂಗ. ಸದ್ಯಕ್ಕೆ ಬಿಜೆಪಿ ನಾಯಕರು ಹೇಳುತ್ತಿದ್ದಂತಹ ಯಾವುದೇ ಅಹಿತಕರ ಘಟನೆ ನಡೆಯದೇ ಇದ್ದದ್ದು ಸಮಾಧಾನಕರ ಅಂಶ.

ಆದರೆ ಮೋದಿಯ ಆಗಮನ, ಭಾಷಣ ಬಿಜೆಪಿ-ಸಂಘಪರಿವಾರ ಹೇಳಿಕೊಂಡು ತಿರುಗಿದಂತೆ ಸಂಚಲನವನ್ನೇನೂ ತರಲಿಲ್ಲ. ಈ ರ್‍ಯಾಲಿಗೆ ಬಿಜೆಪಿ ಕೊಟ್ಟ ಘೋಷಣೆ 'ಭಾರತ ಗೆಲ್ಲಿಸಿ' ಎಂಬುದನ್ನೇ ಕೇಂದ್ರವಾಗಿಸಿ ವಿಶ್ಲೇಷಣೆಯೂ ನಡೆಯಲಿಲ್ಲ. ಹಾಗೊಂದು ವೇಳೆ ಆಗಿದ್ದರೆ ಪರ್ಯಾಯ ಧೋರಣೆಗಳನ್ನು ಪ್ರತಿಪಾದಿಸಬೇಕಿತ್ತು. ಆದರಲ್ಲಿ ಅದರ ಸುಳಿವೇ ಇಲ್ಲ! ಬಿಜೆಪಿ/ ಮೋದಿ ಗೆದ್ದರೆ ಭಾರತ ಗೆದ್ದಂತೆ ಎಂಬ ಅತ್ಯಂತ ಸಂಕುಚಿತ ಅರ್ಥ ಹೊರಡಿಸಿದ್ದೇ ಅಘಾತಕರ. ಅಲ್ಲಂತೂ ಮೋದಿಯ ಭಾಷಣ ಬಹುತೇಕ ತೇಲು ಮಾತುಗಳ ಮೂಟೆಯಾಗಿತ್ತು. ಆಡಿದ ಮಾತುಗಳು, ವೈಖರಿ ತೀರಾ ಯಾಂತ್ರಿಕವಾಗಿತ್ತು, ಹುಮ್ಮಸ್ಸು ಮರೆಯಾಗಿತ್ತು. ಮುಖ್ಯಮಂತ್ರಿ ಎಂಬುದನ್ನೂ ಮರೆತು ಬಜರಂಗದಳದಂತೆ ಬಾಯಿಗೆ ಬಂದಂತೆ ಮಾತನಾಡುವುದರಲ್ಲಿಯೇ ಸುದ್ದಿಯಾಗುತ್ತಿದ್ದ ಮೋದಿಗೆ ಚುನಾವಣಾ ಆಯೋಗದ ತಾಕೀತು ಬ್ರೇಕ್ ಹಾಕಿದಂತಿತ್ತು. (ಇದಕ್ಕಿಂತ ಹೆಚ್ಚಿಗೆ ಗೊತ್ತಿರದ, ಹುಚ್ಚುಚ್ಚು ಇತಿಹಾಸ ಹೇಳಿ ನಗೆಪಾಟಲಿಗೀಡಾದ ಈ ಪ್ರಧಾನಿ ಅಭ್ಯರ್ಥಿಗೆ ಬಿಜೆಪಿ/ಮೋದಿಯಂತಹವರು ಸೋತರೆ 'ಭಾರತ ಗೆಲ್ಲುತ್ತದೆ' ಎಂದು ಇನ್ನೂ ಯಾರೂ ಹೇಳಿದಂತಿಲ್ಲ!) ಒಂದು ವೇಳೆ ಘೋಷಣೆಯ ಬಗ್ಗೆ ಗಂಭೀರವಾಗಿದ್ದರೆ ನಿರ್ದಿಷ್ಟ ವಿಷಯದ ಕುರಿತು, ಪರ್ಯಾಯವೇನು ಅಂತಲೂ ಹೇಳಬೇಕಾಗುತ್ತಿತ್ತು. ಆದರೆ ಅಂತಹ ನೈಜ ಪರ್ಯಾಯವಿಲ್ಲದ, ಕಾಂಗ್ರೆಸ್ ನೀತಿಗಳೆ ತಮ್ಮವು ಆಗಿರುವ ಅವರು ಅದ್ಹೇಗೆ ಹೇಳಿಯಾರು?



ಹಾಗಾಗಿ ಅವರಿಗೆ ಭಾರತವನ್ನು ಗೆಲ್ಲಿಸುವುದಕ್ಕಿಂತ ಐ.ಟಿ. ಕಂಪನಿ ಉದ್ಯೋಗಿಗಳು, ಇದೀಗ ಜಗದತ್ತ ಕಣ್ಣು ಬಿಡುವ ಹಸಿ ಭಾವನೆಗಳ ಯುವಜನರು, ಮಧ್ಯಮವರ್ಗದ ಜನರನ್ನು ಯಾಮಾರಿಸುವ ಓಟಿನ ರಾಜಕಾರಣದ ಕೆಲ ಮಂಗಳಾರತಿ ಮಾತುಗಳನ್ನು ಹೇಳಿ ಕೈಝಾಡಿಸಿದರು! ಹಿಟ್ಲರ್,ಹಿಟ್ಲರ್ ಎಂದಂತೆ ಮೋದಿ, ಮೋಧಿ ಅಂತಾ ಕೂಗಿಸಿಕೊಂಡರು! ಹೋಗಲಿ, ಕನಿಷ್ಠ ಕರ್ನಾಟಕದ ವಿದ್ಯಮಾನಗಳು, ಜನತೆಯ ಜ್ವಲಂತ ಸಮಸ್ಯೆಗಳ ಪ್ರಸ್ತಾಪವನ್ನೂ ಮಾಡಲಿಲ್ಲ, ಸ್ವತಃ ಹಲವಾರು ಹಗರಣ, ಭ್ರಷ್ಟಾಚಾರದಲ್ಲಿ ಮುಳುಗೇಳುತ್ತಿರುವ ನಾಯಕರೆದುರಲ್ಲಿ ಅದರ ಕುರಿತಂತೂ ಪ್ರಸ್ಥಾಪವೇ ಇಲ್ಲ.



ಬೆಂಗಳೂರಿನಲ್ಲಿ ನರೇಂದ್ರ ಮೋದಿ ಭೇಟಿ ವಿರುದ್ಧ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ನಡೆದ ಪ್ರತಿಭಟನೆ

ಪ್ಲಾಪ್ ಶೋ!

ಇಂತಹ ಅಮೋಘ? ಭಾಷಣ ಕೇಳಲು ಜನ ದುಡ್ಡು ಕೊಟ್ಟು ಬರಬೇಕೆಂಬ ಶೋ ಫ್ಲಾಪ್ ಆಯಿತು. ಬಿಜೆಪಿ ನಾಯಕರೇನೋ ಬೆಂಗಳೂರಿನ ಕೆಲವು ಕ್ಷೇತ್ರಗಳಲ್ಲಿ ಕೌಂಟರ್ ತೆಗೆದು ಹತ್ತು ರೂಪಾಯಿಗಳ ಕೂಪನ್ ಮಾರುವುದಾಗಿ ಹೇಳಿದ್ದರು. ಆದರೆ ವಾಸ್ತವದಲ್ಲಿ ಎಲ್ಲಾ ಕಡೆಗಳಿಂದ ಬಿಜೆಪಿ ನಾಯಕರೇ ಹಣ, ಆಹಾರ ಮತ್ತಿತರೆ ಸೌಲಭ್ಯ ನೀಡಿ ಸಾವಿರಾರು ವಾಹನಗಳಲ್ಲಿ ಜನರನ್ನು ಕರೆದು ತಂದಿದ್ದರು! ಮಂಡ್ಯದ ಗಂಡೊಬ್ಬ ತಮಗೆ 250 ರೂಪಾಯಿ ನೀಡಿರುವುದಾಗಿ ಹೇಳಿದ್ದರೆ, 50 ಜನರನ್ನು ಕರೆದು ತರುವುದಾಗಿ ಹೇಳಿ ನಾಯಕನೊಬ್ಬ 5 ಜನರನ್ನು ತಂದು ಉಳಿದ ಹಣ ನುಂಗಿದ್ದರ ಬಗ್ಗೆ ಮತ್ತೊಬ್ಬ ಆಕ್ರೋಶ ವ್ಯಕ್ತಪಡಿಸುತ್ತಿದ್ದ. ಆದರೆ ಜನರಿಂದ ಸಂಗ್ರಹವಾದ ಪ್ರವೇಶ ಶುಲ್ಕವೆಂದು 35 ಲಕ್ಷ ರೂಪಾಯಿಗಳನ್ನು ಸರ್ದಾರ್ ಪಟೇಲ್ ಸ್ಮಾರಕಕ್ಕೆ ನಿಧಿಗೆ ಸಮರ್ಪಿಸಲಾಯಿತು! ಅಲ್ಲಿ 5 ಲಕ್ಷ ಜನರನ್ನು ಸೇರಿಸುವುದಾಗಿ ಹೇಳಲಾಗಿದ್ದರೂ ಸೇರಿದ್ದು ಅವರೇ ಹೇಳಿದಂತೆ 2ಲಕ್ಷ. ಆದರೆ 35 ಲಕ್ಷ ರೂ.ಹೇಗೆ ಬಂತು? ಈ ರ್‍ಯಾಲಿಗೆ ಏನಿಲ್ಲವೆಂದರೂ ಕೋಟ್ಯಾಂತರ ಹಣ ಖರ್ಚಾಗಿದೆ. ಯಾರು ಕೊಟ್ಟರು? ಇದು ಖಂಡಿತಕ್ಕೂ ಕಪ್ಪು ಹಣ ಎಂಬುದರಲ್ಲಿ ಅನುಮಾನವೇ ಇಲ್ಲ. ಒಟ್ಟಾರೆ ರ್‍ಯಾಲಿ ಜನರನ್ನು ಸೆಳೆಯುವಲ್ಲಿಯೂ ಸೋತಿತು.

ಪರಾವಲಂಬನೆ

ಇದಷ್ಟೇ ಅಲ್ಲ, ಮೋದಿ ಬರುವಾಗ ಬೇರೆ ರಾಜಕೀಯ ಶಕ್ತಿಗಳನ್ನು ಸೆಳೆಯುವುದಾಗಿ ಹೇಳಲಾಗಿತ್ತು. ಬೇರೆಯವರ ನೆರವಿಲ್ಲದೇ ದೇಶದಲ್ಲಿ ಬಿಜೆಪಿ ಸ್ವಂತ ಬಲದ ಮೇಲೆ ಅಧಿಕಾರ ಗಳಿಸುವುದು ಕನಸಿನ ಮಾತು. ಇದನ್ನು ಬಿಜೆಪಿ ನಾಯಕ ಅರುಣ್ ಜೇಟ್ಲಿಯವರೇ ಹೇಳುತ್ತಾರೆ. ಬಿಜೆಪಿ ಕರ್ನಾಟಕ ಬಿಟ್ಟರೆ ದಕ್ಷಿಣ ಭಾರತ, ಪ.ಬಂಗಾಲ, ಈಶಾನ್ಯ ರಾಜ್ಯಗಳಲ್ಲಿ(ಅಸ್ಸಾಂ ಹೊರತು) ದುರ್ಬಲ. ಉಳಿದ ರಾಜ್ಯಗಳಲ್ಲಿ ಹೊಂದಾಣಿಕೆ ಅಗತ್ಯ. ಹೀಗಾಗಿ ಅದೇನಿದ್ದರೂ ಬಿಹಾರ, ಉ.ಪ್ರದೇಶ, ಗುಜರಾತ್, ಎಂ.ಪಿ, ರಾಜಸ್ಥಾನ, ಮಹಾರಾಷ್ಟ್ರ, ಛತ್ತೀಸ್‌ಘಢ ಇಲ್ಲೇ ಗಿರಿಕಿ ಹೊಡೆಯಬೇಕು. ಇಲ್ಲೆಲ್ಲಾ ಅಬ್ಬಬ್ಬಾ ಎಂದರೆ 76 ಗೆಲ್ಲುವ ವಿಶ್ವಾಸವಿದೆಯಂತೆ. ಹಾಗಾಗಿ ಸರಕಾರ ರಚಿಸಲು ಕನಿಷ್ಠ 115 ರಿಂದ 150 ಸ್ಥಾನಗಳನ್ನು ಒಟ್ಟುಗೂಡಿಸಬೇಕಿದೆಯೆಂಬ ಅಂದಾಜು ಅವರಲ್ಲಿದೆ. ಒಂದು ವೇಳೆ ಬಿಜೆಪಿಗೆ ಹೆಚ್ಚಿನ ಸ್ಥಾನ ಸಿಗದೇ ಬೇರೆಯವರ ಮೇಲೆ ಅವಲಂಬಿಸುವಂತಾದರೆ ಮೋದಿಯ ಅಭ್ಯರ್ಥಿತನವೇ ಬರಖಾಸ್ತುಗೊಳ್ಳುವ ಸಂಭವವೇ ಹೆಚ್ಚು. ಹೀಗಾಗಿ ಹೇಗಾದರೂ ಪ್ರಧಾನಿಯಾಗಲೇ ಬೇಕೆಂಬ ಬೇಗುದಿಯಲ್ಲಿರುವ ಮೋದಿ ಇಲ್ಲಿಯವರೆಗೂ ನಡೆಸಿದ ಕಸರತ್ತುಗಳು ಫಲ ನೀಡಿಯೇ ಇಲ್ಲ. ಬದಲಾಗಿ ಇದ್ದ ಮಿತ್ರರು ಎನ್.ಡಿ.ಎ.ಯೊಂದಿಗಿನ ಬಾಂಧವ್ಯವನ್ನು ಕಡಿದುಕೊಂಡು ದೂರವಾಗಿದ್ದಾರೆ. ಈ ಮೊದಲು ದೂರವಾದವರು ಹತ್ತಿರವಾಗುತ್ತಿಲ್ಲ. ಮೋದಿ ಎಂದರೆ ವಿಘಟನೆ ಎಂದಾಗಿದೆ. ಇನ್ನು ರಾಜ್ಯದಲ್ಲಿ ತುದಿಗಾಲ ಮೇಲೆ ನಿಂತಿದ್ದ ಯಡಿಯೂರಪ್ಪ ಮೀನಾ ಮೇಷ ಎಣಿಸುತ್ತಿದ್ದಾರೆ!.

ಮೋದಿಯೇನು ಮಂತ್ರದಂಡವೇ?

ಹಾಗಾದರೆ 'ಮೋದಿ ಮ್ಯಾಜಿಕ್' ಎನ್ನುವ ಫ್ಯಾಕ್ಟರ್ ಕರ್ನಾಟಕದ ಬಿಜೆಪಿಗೆ ಏನಾದರೂ ಸಹಾಯಕವಾಗಬಹುದಾ? ಜನರನ್ನು ಹತ್ತಿರ ಸೆಳೆಯಬಹುದಾ? ಈಗಾಗಲೇ ದುರಾಡಳಿತ, ಭ್ರಷ್ಟತೆಯಿಂದ ಜನತೆಯ ಆಕ್ರೋಶಕ್ಕೆ ಈಡಾಗಿ ತಿರಸ್ಕಾರಕ್ಕೆ ಒಳಗಾದ ಬಿಜೆಪಿಗೆ ಮೋದಿಯ ಮುಖ ತೋರಿಸಿ ಸಾರ್ವಜನಿಕರ ನಡುವೆ ಹೋಗಲು ಒಂದು ಅವಕಾಶ ಮಾಡಿಕೊಂಡಿದೆ ನಿಜ. ಬಿಜೆಪಿಗೆ ಜನ ನೀಡಿದ್ದ ಅಘಾತಕರ ಏಟಿನಿಂದ ಬಸವಳಿದಿದ್ದ ಅವರ ಕಟ್ಟಾ ಕಾರ್ಯಕರ್ತರಿಗೆ ಒಂದಿಷ್ಟು ಹುರುಮ

ಪುಟ 12 ಕ್ಕೆ

'ಹಣಕಾಸುಆಯೋಗ'–ಸಂವಿಧಾನಬದ್ಧ ಸ್ವತಂತ್ರ ಪಾತ್ರವಹಿಸಲಿ

ಕೇಂದ್ರ ಸರ್ಕಾರ ರಾಜ್ಯಗಳ ಕೈತಿರುಚುವುದು ನಿಲ್ಲಲಿ– ರಾಜ್ಯಗಳ ಅಭಿಪ್ರಾಯಕ್ಕೆ ಮನ್ನಣೆ ದೊರೆಯಲಿ

14 ನೇ ಹಣಕಾಸು ಆಯೋಗಕ್ಕೆ ಸಿಪಿಐ(ಎಂ) ಪಕ್ಷವು ಸಲ್ಲಿಸಿರುವ 'ನಿಲುವು ಪತ್ರ'ದ ಸಾರ

ಭಾರತ ದೇಶವು ತನ್ನ ಸಂವಿಧಾನವೇ ಘೋಷಿಸಿಕೊಂಡಿರುವಂತೆ ನಾನಾ ರಾಜ್ಯಗಳ ಒಂದು ಒಕ್ಕೂಟವಾಗಿದೆ. ಹಾಗಿರುವಾಗ ದೇಶದ ಹಣಕಾಸು ಆಯೋಗದ ರಚನೆಯ ವಿಷಯದಲ್ಲಿ ಮತ್ತು ಅದರ ನೀತಿನಿರೂಪಣೆಯಲ್ಲಿ ಮತ್ತು ಆಯೋಗದ ಕಾರ್ಯನಿರ್ವಹಣೆಯಲ್ಲಿ ರಾಜ್ಯಗಳ ಅಭಿಪ್ರಾಯಗಳನ್ನು ಒಳಗೊಳ್ಳುವ ಮತ್ತು ರಾಜ್ಯಗಳ ಹಿತಾಸಕ್ತಿ ಕಾಪಾಡುವ ವಿಷಯವನ್ನು ಕಡೆಗಣಿಸಲಾಗುತ್ತಿದೆ. ಮತ್ತು ರಾಜ್ಯಗಳ ಕೈ ತಿರುಚಿ ದೇಶವಿರೋಧಿ ಉದಾರೀಕರಣ ನೀತಿಗಳನ್ನು ಹೇರಲು ಹಣಕಾಸು ಆಯೋಗವನ್ನು ಬಳಸಿಕೊಳ್ಳಲಾಗುತ್ತಿದೆ. ಈ ನೀತಿಗಳು ಸಂವಿಧಾನವಿರೋಧಿ ಎಂದಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಮೊದಲೇ ಸಂಪನ್ಮೂಲಗಳ ಕೊರತೆಯಿಂದ ನರಳುವ ರಾಜ್ಯಗಳ ಮೇಲೆ ಇನ್ನಷ್ಟು ಹೊರೆ ವರ್ಗಾಯಿಸುವುದು ಜನವಿರೋಧಿ ಕ್ರಮವಾಗುತ್ತದೆ ಎಂದಿದೆ. 14 ನೇ ಹಣಕಾಸು ಆಯೋಗಕ್ಕೆ ಸಿಪಿಐ(ಎಂ) ಪಕ್ಷವು ಸಲ್ಲಿಸಿರುವ ಟಿಪ್ಪಣಿಯ ಸಾರಾಂಶ ಇಲ್ಲಿದೆ.

ಸಂಗ್ರಹಾನುವಾದ: ಜಿ.ಎಸ್.ಮಣಿ

ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ಒಂದು ದೊಡ್ಡ ವೈರುಧ್ಯವಿದೆ. ರಾಜ್ಯ ಸರ್ಕಾರಗಳು ಅಭಿವೃದ್ದಿಗೆ ಹಣಕಾಸು ವ್ಯಯ ಮಾಡಬೇಕಾಗಿರುವಾಗಲೂ ಅವುಗಳಿಗೆ ಈ ಖರ್ಚುಗಳಿಗೆ ಸಮನಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವ ಅವಕಾಶಗಳು ಕೇಂದ್ರ ಸರ್ಕಾರಕ್ಕೆ ಇರುವಷ್ಟು ಇಲ್ಲ. ಇದನ್ನು ಸರಿಪಡಿಸಲು ನಮ್ಮ ಸಂವಿಧಾನ ಹಣಕಾಸು ಆಯೋಗಕ್ಕೆ ಈ ಪರಿಸ್ಥಿತಿಯನ್ನು ಸರಿದೂಗಿಸುವ ಜವಾಬ್ದಾರಿಯನ್ನು ನೀಡಿದೆ. ಹಣಕಾಸು ಆಯೋಗ ಸರಿಯಾಗಿ ಸಂಪನ್ಮೂಲಗಳನ್ನು ಹಂಚುವುದಷ್ಟೇ ಅಲ್ಲ. ಅದು ಬೇಷರತ್ ಆಗಿ ಕೇಂದ್ರದಿಂದ ರಾಜ್ಯಗಳಿಗೆ ಹಂಚಿಕೆ ಆಗುವಂತೆ ನೋಡಿಕೊಳ್ಳಬೇಕಾಗಿದೆ. ಈ ಷರತ್ತಿಲ್ಲದ ಹಂಚಿಕೆ ದೇಶದ ಪ್ರಜಾಸತ್ತಾತ್ಮಕತೆಗೆ ಬಹಳ ಮುಖ್ಯವಾದುದು. ಯಾಕೆಂದರೆ ಜನರ ಆಶೋತ್ತರಗಳನ್ನು ಪ್ರತಿನಿಧಿಸುವ ರಾಜ್ಯ ಸರ್ಕಾರಗಳು ತಮ್ಮ ರಾಜಕೀಯ ಮತ್ತು ಸಾಮಾಜಿಕ ದೃಷ್ಟಿಕೋನ ಮತ್ತು ಸಿದ್ಧಾಂತಗಳಿಗೆ ಅನುಗುಣವಾಗಿ ಅಭಿವೃದ್ಧಿ ಪಥವನ್ನು ಆಯ್ದುಕೊಳ್ಳಲು ಸಾಧ್ಯವಾಗುತ್ತದೆ.

ಇಂತಹ ಜವಾಬ್ದಾರಿಯನ್ನು ನಿಭಾಯಿಸಲು ಹಣಕಾಸು ಆಯೋಗ ಸ್ವತಂತ್ರ ಮೇಲ್ಪಂಕ್ತಿಯ ಸಾಂವಿಧಾನಿಕ ಸಂಸ್ಥೆಯಾಗಿ ಇರಬೇಕಾಗುತ್ತದೆ.

ದುರಾದೃಷ್ಟವಶಾತ್ ಕೇಂದ್ರ ಸರ್ಕಾರ ಇತ್ತೀಚಿನ ಅವಧಿಗಳಲ್ಲಿ ಆಯೋಗದ ಈ ಸಾಂವಿಧಾನಿಕ ಮೇಲ್ಪಂಕ್ತಿಗೆ ಚ್ಯುತಿ ಬರುವಂತೆ ಮಾಡಿ ರಾಜ್ಯಗಳ ಸ್ವಾಯತ್ತತೆಗೆ ಧಕ್ಕೆ ಬರುವಂತೆ ಮಾಡುತ್ತಾ ನವ ಉದಾರವಾದಿ ನೀತಿಗಳನ್ನು ರಾಜ್ಯಗಳ ಮೇಲೆ ಹೇರುವ ಹುನ್ನಾರ ಮಾಡುತ್ತಿದೆ.

'ಹಣಕಾಸು ಆಯೋಗದ ಏಕಪಕ್ಷೀಯ ನೇಮಕ'

ಹಣಕಾಸು ಆಯೋಗದ ಸ್ವಾತಂತ್ರ್ಯ ಮತ್ತು ಪಾತ್ರಚ್ಯುತಿ ಅದು ಏಕಪಕ್ಷೀಯವಾಗಿ ಹಣಕಾಸು ಆಯೋಗದ ನೇಮಕ ಮಾಡುವುದರಿಂದಲೇ ಪ್ರಾರಂಭವಾಗುತ್ತದೆ. ಆಯೋಗದ ಕಾರ್ಯಮಿತಿಗಳನ್ನು ನಿರ್ಧರಿಸುವಲ್ಲೂ ಇದು ಕೆಲಸ ಮಾಡುತ್ತದೆ. ರಾಜ್ಯಗಳಿಗೆ ಆಯೋಗದ ಶಿಫಾರಸ್ಸಿನ ಹೊರಗೆ ಅನುದಾನ ವರ್ಗಾಯಿಸುವುದು, ಷರತ್ತುಗಳನ್ನು ಹೇರುವುದು ಇತ್ಯಾದಿಗಳೂ ಅಸಾಂವಿಧಾನಿಕವಾಗುತ್ತವೆ. ಹನ್ನೊಂದನೇ ಹಣಕಾಸು ಆಯೋಗದ ಸಂದರ್ಭದಲ್ಲಿ ಇದು ಆಯೋಗದ ಸದಸ್ಯರ ಅಸಮ್ಮತಿಗೆ ಕಾರಣವೂ ಆಗಿತ್ತು.

ಹದಿಮೂರನೇ ಹಣಕಾಸು ಆಯೋಗಕ್ಕೆ ನಾವು ಸಲ್ಲಿಸಿದ ಲಿಖಿತ ನಿಲುವುಪತ್ರದಲ್ಲಿ ಸಿಪಿಐ(ಎಂ) "ಸಾಂವಿಧಾನಿಕವಾಗಿ ಅಧಿಕಾರ ಪಡೆದು ರಾಜ್ಯ ಮತ್ತು ಕೇಂದ್ರದ ನಡುವಿನ ತೀರ್ಮಾನಗಳನ್ನು ನೀಡುವ ಹಣಕಾಸು ಆಯೋಗದಂತಹ ಸಂಸ್ಥೆಗಳು ಕೇಂದ್ರ ಮತ್ತು ರಾಜ್ಯಗಳ ನಡುವೆ ಸಮಾಲೋಚನೆಯ ಮೂಲಕ ನೇಮಕಗೊಳ್ಳಬೇಕಲ್ಲದೆ ಈ ನೇಮಕಗಳನ್ನು ಸರಿಯಾದ ಪ್ರಾತಿನಿಧ್ಯವಿರುವ ಅಂತರ್‌ರಾಜ್ಯ ಮಂಡಳಿ ಅನುಮೋದಿಸಬೇಕು" ಎಂದು ಹೇಳಿತ್ತು.

ಕೇಂದ್ರ ಸರ್ಕಾರಗಳು ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಾ ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಮತ್ತು ಅಂತರ್‌ರಾಜ್ಯ ಮಂಡಲಿಗಳು ಬರೀ ಹೌದಪ್ಪಗಳಾಗಿರಬೇಕು ಎಂಬಂತಹ ಧೋರಣೆ ತೋರಿವೆ. ಹದಿನಾಲ್ಕನೇ ಹಣಕಾಸು ಆಯೋಗ ತನ್ನ ಸ್ವಾತಂತ್ರ್ಯ ಮತ್ತು ಅರೆ ನ್ಯಾಯಾಧೀಕರಣ ಅಧಿಕಾರವನ್ನು ಬಿಟ್ಟುಕೊಡದೆ ತನ್ನ ಕಾರ್ಯನಿರ್ವಹಣೆ ಮಾಡುತ್ತದೆ ಎಂಬ ಆಶಯವನ್ನು ಸಿಪಿಐ(ಎಂ) ಇಟ್ಟುಕೊಂಡಿದೆ.


ಆಯೋಗದ ಕಾರ್ಯವ್ಯಾಪ್ತಿ : ರಾಜ್ಯಗಳ ಹಕ್ಕಿನ ಮೇಲೆ ಸವಾರಿ

ಆಯೋಗದ ಕಾರ್ಯವ್ಯಾಪ್ತಿ ಬಗೆಗೆ ಸಿಪಿಐ(ಎಂ) ತೀವ್ರ ಆಕ್ಷೇಪ ಎತ್ತಿದೆ. ಸಂವಿಧಾನದ ಅಧ್ಯಾಯ 1 ರ ಭಾಗ 12 ರ ಪ್ರಕಾರ ತೆರಿಗೆ ಅನುದಾನಗಳಲ್ಲಿ 'ಶೃಂಗೀಯ ಹಂಚಿಕೆ' ಅಂದರೆ ಕೇಂದ್ರದಿಂದ ರಾಜ್ಯಗಳಿಗೆ- ಮೇಲಿನಿಂದ ಕೆಳಹಂತಕ್ಕೆ ಹರಿದುಬರಬೇಕಾದ ಹಂಚಿಕೆಯಲ್ಲಿ ಮತ್ತು 'ಸಮತಲ ಹಂಚಿಕೆ' ಅಂದರೆ ದೇಶದ ನಾನಾ ಭಾಗಗಳಿಗೆ ನಾನಾ ರಾಜ್ಯಗಳಿಗೆ ದೊರಕಬೇಕಾದ ಹಂಚಿಕೆ ಇವುಗಳಲ್ಲಿ ರಾಜ್ಯಗಳಿಗೆ ಬೇಷರತ್ ಹಕ್ಕುಗಳಿವೆ. ಹನ್ನೊಂದನೆ ಹಣಕಾಸು ಆಯೋಗದ ಸಮಯದಿಂದ ಕೇಂದ್ರ ಸರ್ಕಾರ ಈ ಅನುದಾನ ಇತ್ಯಾದಿಗಳಿಗೆ ಷರತ್ತುಗಳನ್ನು ಹೇರುತ್ತಿದೆ. ಹದಿನಾಲ್ಕನೇ ಹಣಕಾಸು ಆಯೋಗದ ಕಾರ್ಯವ್ಯಾಪ್ತಿಯಲ್ಲೂ ಕೆಳಗಿನಂತಹ ಮಾತುಗಳಿವೆ:

"ಆಯೋಗ ರಾಜ್ಯ ಮತ್ತು ಕೇಂದ್ರಗಳ ಹಣಕಾಸಿನ ಪರಿಸ್ಥಿತಿ, ಖೋತಾ ಮತ್ತು ಸಾಲಗಳನ್ನು ಪರಿಶೀಲಿಸಬೇಕು. ಹದಿಮೂರನೇ ಆಯೋಗ ಶಿಫಾರಸ್ಸು ಮಾಡಿದ ಮಾರ್ಗವನ್ನು ಕ್ರೋಢೀಕರಿಸಿ ಸ್ಥಿರಗೊಳಿಸಿ ಸಂಭಾಳಿಕೆಗೆ ತಕ್ಕುದಾಗಿಸಿ, ಆಯ-ವ್ಯಯ ನಿರ್ವಹಣೆ ಕಾನೂನಿನಡಿ ...., ಹಾಗೆಯೇ ಆಯೋಗ ಸೂಕ್ತ ಪ್ರೋತ್ಸಾಹ ನೀಡುವ ಮತ್ತು ತಡೆ ಉಂಟು ಮಾಡುವ ಮೂಲಕ ರಾಜ್ಯಗಳು ಆಯ-ವ್ಯಯ ನಿರ್ವಹಣೆ ಕಾನೂನಿನ ಪಾಲನೆ ಮಾಡುವಂತೆ ನೋಡಿಕೊಳ್ಳಬೇಕು".

ಯಾಂತ್ರಿಕ ಕ್ರಮ- ಕೈ ತಿರುಚುವ ಒಳ ಯೋಜನೆ

ಮೇಲಿನದು ಯಾಂತ್ರಿಕವಾಗಿ ನಿಯಮಗಳನ್ನು ಹೇರುವ ಕ್ರಮ. ಇದನ್ನು ಸಿಪಿಐ(ಎಂ) ಪಕ್ಷ ವಿರೋಧಿಸಿದೆ. ಇದು ಕೇಂದ್ರ ತನ್ನ ನವ ಉದಾರವಾದಿ ಆರ್ಥಿಕ ನೀತಿಗಳನ್ನು ಜಾರಿಗೆ ತರಲು ಮಾಡಿರುವ ಸೂಕ್ಷ್ಮ ಒಳಯೋಜನೆ ಎಂಬುದು ಸ್ವಲ್ಪ ಆಳವಾಗಿ ನೋಡಿದರೂ ಗೊತ್ತಾಗಿಬಿಡುತ್ತದೆ.



ಉದಾಹರಣೆಗೆ ನಾವು ಆದಾಯ ಖೋತಾವನ್ನು ರಾಜ್ಯದ ಒಟ್ಟುತ್ಪಾದನೆ(ಜಿಡಿಪಿ)ಯ ಶೇ.3 ಕ್ಕೆ ಮಿತಿಗೊಳಿಸಬೇಕು ಎಂಬ ನಿಯಮವನ್ನು ನೋಡಬಹುದು. ಇದಕ್ಕೆ ಆದಾಯ ಖರ್ಚನ್ನು ಮಿತಗೊಳಿಸಬೇಕಾಗುತ್ತದೆ. ರಾಜ್ಯಗಳು ಆಯವ್ಯಯ ನಿರ್ವಹಣೆ ಕಾನೂನಿನಡಿಯ ಗುರಿಗಳನ್ನು ಗಮನದಲ್ಲಿರಿಸಿ ಖರ್ಚು ಕಡಿಮೆ ಮಾಡ ಹೊರಟರೆ ಜನತೆಯ ಒಳಿತಿಗಾಗಿ ಮಾಡುವ ಖರ್ಚುಗಳಲ್ಲೇ ಕಡಿತ ಮಾಡಬೇಕಾಗುತ್ತದೆ.

ಆದ್ದರಿಂದಲೇ ಇಂತಹ ಕಾರ್ಯವ್ಯಾಪ್ತಿ ಸೂಚನೆ, ಷರತ್ತುಗಳು ಅನಾವಶ್ಯಕ, ಸಂವಿಧಾನ ಬಾಹಿರ. ಮತ್ತು ಗೊಂದಲಕಾರಿ ಕೂಡ
ಬಹಳವಾಗಿ ಈ ಕಾರ್ಯವ್ಯಾಪ್ತಿ ಸೂ
ಕೇಂದ್ರ ಸರ್ಕಾರದ ನಿಲುವನ್ನು ಪ್ರತಿನಿ
ಕೇಂದ್ರ ಸರ್ಕಾರ ಬೇರೆ ಬೇರೆ ಪ
ಆಗಬಹುದಾದ್ದರಿಂದ ಇವು ಬದಲ
ಇರುತ್ತವೆ. ಈ ವಿಷಯದಲ್ಲಿ ಸಿಪಿಐ
ವಿಮರ್ಶಾತ್ಮಕ ಟಿಪ್ಪಣಿಗಳು ಕೆಳಗಿನಂತಿವ

ಅ) ಒಂದು ಕಾರ್ಯಸೂಚಿ ದ
ಆಯೋಗ ಕೇಂದ್ರ ಸರ್ಕಾರದ
ಮತ್ತು ವೆಚ್ಚಗಳನ್ನು ಪರಿಗಣಿಸಬೇಕು
ಇದು 13ನೇ ಹಣಕಾಸು ಆ
ಕಾರ್ಯಸೂಚಿಯಂತೆಯೇ ಇದೆ.
ಸಿಪಿಐ(ಎಂ) ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತ
ಯಾಕೆಂದರೆ ಇಲ್ಲಿ ಕೇಂದ್ರ ಸ
ಆವಶ್ಯಕತೆಗಳನ್ನು ಮಾತ್ರ ಗಣನೆಗೆ ತೆಗದು
ಮಾತಿದೆ. ರಾಜ್ಯ ಸರ್ಕಾರಗಳ ಅವಶ್ಯ
ಯಾರು ಸ್ಪಂದಿಸಬೇಕು?

ಆ) ಇದು ಕೇಂದ್ರ ಪ್ರಾ
ಯೋಜನೆಗಳಿಗೆ ಅನ್ವಯವಾಗುವುದಾದ
ಕೇಂದ್ರದ ಬದ್ಧ ಖರ್ಚಿನಲ್ಲಿ ಸೇರಿಕೊಳ್ಳು
ಕಾರಣದಿಂದಾಗಿಯೇ ಯೋಜನೆಯನ್ನು
ಕೇಂದ್ರ-ರಾಜ್ಯ ಸಂಬಂಧದ ಶಾಶ್ವತ ಭಾ
ಬಿಡುತ್ತದೆ. ಕೇಂದ್ರ ಪ್ರಾಯೋಜಿತ ಯೋ
ಉಳಿದುಕೊಂಡಿವೆಯಷ್ಟೇ ಅಲ್ಲ. ಅವುಗಳ
ನವ ಉದಾರವಾದಿ ನೀತಿಗಳೂ ಬರುತ್ತ

ಇ) ಕೇಂದ್ರ ಪ್ರಾಯೋಜಿತ ಯೋಜ
ಸಮವಾಗಿ ಸಹಾಯಧನದ ಖರ್ಚನ್ನು
ಮತ್ತು ರಾಜ್ಯಗಳು ಭರಿ
ಎನ್ನುತ್ತಲೇ ರಾಜ್ಯಗಳ ಹೊರ
ಹೆಚ್ಚಿಸುವ ಹುನ
ಇದಾಗಿರಬಹುದು. ಸರ್ವ
ಅಭಿಯಾನದಲ್ಲಿ ಕೇಂದ್ರ
ಹೊರೆ ಹಗುರ ಮಾಡಿ
ರಾಜ್ಯಗಳ ಹೊರೆಯನ್ನು, ರ
ಮುಖ್ಯಮಂತ್ರಿಗಳ ಕೋರಿಕೆ
ಕಡೆಗಣಿಸಿ, ಹೆಚ್ಚಿಸಿರುವುದು
ಜೀವಂತ ಉದಾಹರಣೆ.

ಈ) ಸಾರ್ವಜನಿಕ ಸೇವ
ವಿದ್ಯುತ್, ನೀರು, ನೀ
ಸಾಗಾಣಿಕೆಗಳ ಬೆಲ
ನಿಭಾಯಿಸುವಲ್ಲಿ ರಾಜ್ಯ
ಇಕ್ಕಟ್ಟಿಗೆ ಸಿಲುಕಿಸುವ ಉದ್ದೇ
ಎದ್ದು ಕಾಣುತ್ತಿವೆ.

ಉ) ಸಾರ್ವಜನಿಕ
ಉದ್ದಿಮೆಗಳನ್ನು 'ಸ್ಪರ್ಧಾತ್ಮಕ'
'ಮಾರುಕಟ್ಟೆಮುಖಿ' ಮಾಡು
ಇನ್ನೊಂದು ಮುಖ್ಯ
ಷೇರುಗಳನ್ನು ಮಾರಿ ಆದ್ಯತೆಯ ಕ್ಷೇತ್ರವಲ್ಲ
ಉದ್ದಿಮೆಗಳನ್ನೇ ಕೈ ಬಿಡುವುದು ಕೇ
ಉದ್ದೇಶವಾಗಿರುವಂತೆ ಕಾಣಿಸುತ್ತದೆ.

ಊ) ಸರಕು ಮತ್ತು ಸೇವೆಗಳ
ರಿಗೆ ಇನ್ನೊಂದು ಮುಖ್ಯ ವಿಷಯ. ಕೇ
ಧೋರಣೆಗಳಿಂದಾಗಿ ಇದು ಕಾನೂನಾಗ
ಮುಂದಕ್ಕೆ ಹೋಗಿದೆ.

ಏನಾಗಬೇಕು ?

ಈ ಎಲ್ಲ ಹಿನ್ನೆಲೆಯಲ್ಲಿ ಸಿಪಿಐ
ಆಯೋಗದ ಕಾರ್ಯವ್ಯಾಪ್ತಿಯಲ್ಲಿ ಈ ಕೆಳ
ಪ್ರಸ್ತಾಪವನ್ನು ಸೇರಿಸಬೇಕೆಂದು ಸೂಚಿಸಿದೆ

- 14ನೇ ಹಣಕಾಸು ಆಯೋಗ
ಸ್ವಾಯತ್ತತೆಯನ್ನು ಎತ್ತಿಹಿಡಿಯ
ಕೇಂದ್ರದ ನೀತಿಗಳನ್ನು ಒಪ್ಪಿದರೆ
ಅನುದಾನಗಳು ಎಂಬ ಷರತ್ತುಗಳನ್ನು
ಹಾಕಬೇಕು.
- ಭವಿಷ್ಯತ್ತಿನಲ್ಲಿ ಆಯೋ

ಕನಕ ಜಾತಿಯ ಪ್ರತೀಕವಲ್ಲ – ಹೋರಾಟದ ಸಂಕೇತ


"ಕುಲ ಕುಲ ಕುಲವೆಂದು ಹೊಡೆದಾಡದಿರಿ! ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ! ಬಲ್ಲಿರಾ!" ಎಂಬ ಹಾಡಿನ ಮೂಲಕ ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಿದ ಕನಕದಾಸರು ಜಾತಿ ಪದ್ಧತಿಯನ್ನು ಧಿಕ್ಕರಿಸಿದ್ದನ್ನು ನಾವು ಅವರ ಸಾಹಿತ್ಯದಲ್ಲಿ ಕಾಣುತ್ತೇವೆ. 'ರಾಮಧಾನ್ಯ ಚರಿತೆ' ಎಂಬ ಕೃತಿಯ ಮೂಲಕ ತುಳಿತಕ್ಕೊಳಗಾದವರ ಪರವಾಗಿ ಕನಕದಾಸರು ಧ್ವನಿ ಎತ್ತಿದ್ದಾರೆ. 16ನೇ ಶತಮಾನದಲ್ಲಿ ಭಕ್ತಿ ಚಳುವಳಿಯ ಮೂಲಕ ಕೊಳೆತು ನಾರುತ್ತಿರುವ ಜಾತಿ ವ್ಯವಸ್ಥೆ, ಸಾಮಾಜಿಕ ಶೋಷಣೆ, ಮೂಢನಂಬಿಕೆ, ಕಂದಾಚಾರ, ಅಸ್ಪೃಶ್ಯತೆ ಮತ್ತು ಭ್ರಷ್ಟಾಚಾರದ ವಿರುದ್ಧ ಕಾವ್ಯ ಖಡ್ಗವನ್ನು ಝುಳಪಿಸಿದ ಕನಕದಾಸರು ನಮಗೆ ಇಂದಿಗೂ ಪ್ರಸ್ತುತರಾಗುತ್ತಾರೆ. ಆದರೆ ಆಳುವ ವರ್ಗಗಳು ಕನಕನನ್ನು ಜಾತಿಯ ಚೌಕಟ್ಟಿನೊಳಗೆ ಬಂಧಿಸಿಡಲು ಹವಣಿಸುತ್ತಿವೆ. ಕನಕ ಜಯಂತಿಯನ್ನು ಜಾತಿಗೆ ಸೀಮಿತಗೊಳಿಸಿ, ಹಾಲುಮತ ಜನಾಂಗವನ್ನು ವೋಟ್‌ಬ್ಯಾಂಕ್ ಆಗಿ ಬಳಸಿಕೊಳ್ಳಲು ಪಟ್ಟಭದ್ರ ಶಕ್ತಿಗಳು ಮುಂದಾಗಿವೆ. ಪಂಕ್ತಿಭೇದ, ಮಡೆಸ್ನಾನದಂತಹ ಅನಿಷ್ಠ ಪದ್ಧತಿಗಳನ್ನು ಅನುಸರಿಸುತ್ತಿರುವ ಪುರೋಹಿತ ವರ್ಗವು ಕನಕದಾಸರನ್ನು 'ಹೈಜಾಕ್' ಮಾಡಲು ಷಡ್ಯಂತ್ರ ರೂಪಿಸತೊಡಗಿದೆ. ಇಂತಹ ಸಂದರ್ಭದಲ್ಲಿ ಕನಕದಾಸರನ್ನು 'ಹೈಜಾಕ್' ಮಾಡದಂತೆ ತಡೆಯುವುದು ಹಾಗೂ ಅವರ ಜನಪರ ಕಾಳಜಿ, ಪ್ರಗತಿಪರ ಮೌಲ್ಯಗಳನ್ನು ಜನರೆಡೆಗೆ ಕೊಂಡೊಯ್ಯುವುದು ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಹೊಸಪೇಟೆಯ 'ಸಮುದಾಯ' ಸಂಘಟನೆಯು ಕನಕದಾಸರ ಕುರಿತು ವಿಚಾರ ಸಂಕಿರಣ, ಕವಿಗೋಷ್ಠಿ ಮತ್ತು ಗೀತಗಾಯನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು.

ಭಜನೆಯಲ್ಲ–ಸಾಮಾಜಿಕ ಸುಧಾರಣೆಯ ಧ್ವನಿ

ಮೊದಲಿಗೆ 'ಕನಕದಾಸರ ಸಾಹಿತ್ಯದಲ್ಲಿ ಪ್ರಗತಿಪರ ಮೌಲ್ಯಗಳು' ಕುರಿತು ವಿಚಾರ ಸಂಕಿರಣ ನಡೆಸಲಾಯಿತು. ಪ್ರಾಸ್ತಾವಿಕವಾಗಿ ಮಾತನಾಡಿದ ಸಮುದಾಯದ ಕಾರ್ಯದರ್ಶಿ ಎ.ಕರುಣಾನಿಧಿ 'ಹನ್ನೆರಡರಿಂದ ಹದಿನಾರನೇ ಶತಮಾನದವರೆಗಿನ ಭಕ್ತಿಪಂಥದ ಚಳುವಳಿಯು ಕಾಲದ ಮಿತಿಯಲ್ಲಿಯೂ ಪ್ರಗತಿಪರವಾಗಿತ್ತು. ಭಕ್ತಿಯೆಂಬುದು ಕೇವಲ ದೇವರ ನಾಮ ಭಜಿಸುವುದಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಸಾಮಾಜಿಕ ಸುಧಾರಣೆಯ ಧ್ವನಿಯಾಗಿತ್ತು' ಎಂದು ತಿಳಿಸಿದರು.

ಕನಕದಾಸರ ಬದುಕೇ ಹೋರಾಟ

ವಿಷಯದ ಕುರಿತು ಉಪನ್ಯಾಸ ನೀಡಿದ ಡಾ॥ ಅನ್ನಪೂರ್ಣ ಗೋಸ್ಬಾಳ್ ಕನಕದಾಸರ ಬದುಕು ಹೋರಾಟದಿಂದ ಕೂಡಿತ್ತು ಎಂದರು. ಕನಕ ಯೋಧನಾಗಿ ರಣರಂಗದಲ್ಲಿ ಶತ್ರುಗಳ ವಿರುದ್ಧ ಕತ್ತಿ ಝುಳಪಿಸುತ್ತಿದ್ದುದು ಒಂದು ಹಂತವಾದರೆ, ಕಾವ್ಯ ಕೃತಿಗಳ ಮೂಲಕ ಸಮಾಜದಲ್ಲಿ ಬೇರೂರಿದ್ದ ಜಾತಿಯ ಅಸಮಾನತೆ, ಡಾಂಭಿಕ ಭಕ್ತಿ, ಪುರೋಹಿತಶಾಹಿ ವ್ಯವಸ್ಥೆಯ ಕ್ರೌರ್ಯ, ಮೂಢನಂಬಿಕೆಗಳ ವಿರುದ್ಧ ಧ್ವನಿಯೆತ್ತಿದರು. 'ರಾಮಧಾನ್ಯ ಚರಿತೆ'ಯ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿದ್ದಾರೆ. ಅವರ ಕೀರ್ತನೆಗಳು ಭಕ್ತಿಯ ಜೊತೆಗೆ ಸಾಮಾಜಿಕ ವಿಡಂಬನೆಗೆ ಹೆಸರಾಗಿವೆ. 'ತೀರ್ಥವನು ಕುಡಿದವರು ತಿರುನಾಮಧಾರಿಗಳೇ! ಜನ್ಮ ಸಾಕಪಿಲ್ಲದವರೆಲ್ಲಾ ಭಾಗವತರೇ! ಮೂಗಿಡಿದು ನೀರೊಳಗೆ ಮುಳುಗಿ ಜಪತಪವ ಮಾಡಿ! ವೇದ ಶಾಸ್ತ್ರ ಪುರಾಣಗಳೋದಿ ತಿಳಿದು! ಬಾಗಿ ಪರಸ್ತ್ರೀಯರಿಗೆ ಕಣ್ಣಿಡುವಂಥ! ನೀತಿ ತಪ್ಪಿದವರೆಲ್ಲಾ ದೇವ ಬ್ರಾಹ್ಮಣರೇ ಕೃಷ್ಣಾ! ಜಪವ ಮಾಡಿದರೇನು, ತಪವ ಮಾಡಿದರೇನು! ಕಪಟಗುಣ ವಿಪರೀತ ಕಲುಷಿತವಿದ್ದವರು! ಆದಿಗುರುವರಿಯದೆ ಅತ್ತಲಿತ್ತಲು ತೊಳಲಿ! ವೇದ ಶಾಸ್ತ್ರಗಳೋದಿ ಬಾಯಾರಲು! ಹಾದಿಯನು ಕಾಣದಂತಿರುತ್ತಿದ್ದು ಹಲವೆಂಟು! ವಾದ ತರ್ಕದೊಳಿದ್ದ ಭೇದವಾದಿಗಳು!' ಎಂಬ ಕನಕದಾಸರ ಕೀರ್ತನೆಗಳನ್ನು ವಾಚಿಸಿದ ಅವರು ಕನಕ ಹೋರಾಟದ ಸಂಕೇತವಾಗಿದ್ದಾನೆ ಎಂದರು.



'ವ್ಯಾಸಕೂಟ' ಶೋಷಕ ವರ್ಗದ ಪರ– ದಾಸಕೂಟ ಜನಪರ

ಅತಿಥಿ ನುಡಿಗಳನ್ನಾಡಿದ ಡಾ॥ ಚೆಲುವರಾಜು ಅಂದಿನ ಕಾಲಘಟ್ಟದ ಮಹಾಕೂಟ, ವ್ಯಾಸಕೂಟದ ಶೋಷಕ ವರ್ಗದ ಪರವಾದ ನಿಲುವನ್ನು ಬಿಡಿಸಿಟ್ಟರು. ಮುಂದುವರೆದು ದಾಸಕೂಟ ಜನಪರವಾಗಿತ್ತು. ಅದರಲ್ಲೂ ಕನಕದಾಸರು ಮೇಲ್‌ವರ್ಗದ ದಾಳಿ, ಕಿರುಕುಳಗಳನ್ನೆಲ್ಲಾ ಹಿಮ್ಮೆಟ್ಟಿಸಿ ಶೋಷಿತ ದಲಿತರ ಪರವಾಗಿ ಧೃಢನಿಲುವಿನೊಂದಿಗೆ ಮುನ್ನಡೆದರು. ಜನಪರ ಮೌಲ್ಯಗಳನ್ನು ಎತ್ತಿ ಹಿಡಿದರು ಎಂದು ತಿಳಿಸಿದರು. ಸಮುದಾಯದ ಅಧ್ಯಕ್ಷ ಕೆ.ಚಂದ್ರಪ್ಪ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿ ಪಿ.ಸುನಂದಾ ಗಿಡಕ್ಕೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉಧ್ಘಾಟಿಸಿದರು. ಅತಿಥಿಗಳಾಗಿ ಹಿರಿಯ ವಕೀಲ ಕುರಟ್ಟಿ ಯಂಕಪ್ಪ, ಸರ್ಕಾರಿ ನೌಕರ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಎಂ.ಜಂಬಯ್ಯ ನಾಯಕ, ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಸಿ.ಖಾದರ್‌ವಲಿ, ಪಂಚಾಯಿತ್ ರಾಜ್ ನೌಕರ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಎಂ.ಉಮೇಶ್, ಸಿಐಟಿಯು ಜಿಲ್ಲಾ ಮುಖಂಡರಾದ ಆರ್. ಭಾಸ್ಕರ್‌ರೆಡ್ಡಿ ಭಾಗವಹಿಸಿದ್ದರು.

ನಂತರ 'ಧಾರ್ಮಿಕ ಮೌಢ್ಯತೆ ಮತ್ತು ಜಾತಿವಿನಾಶ'ದ ಕುರಿತು ಕವಿಗೋಷ್ಠಿ ನಡೆಸಲಾಯಿತು. ಟಿ.ಎಚ್.ಎಂ.ಚಂದ್ರಶೇಖರ್ ಕವನ 'ಜಾತಿ ಮತ್ತು ಮಡೆಸ್ನಾನ'ಗಳನ್ನು ಖಂಡಿಸಿತು. ಡಿ.ವಿ.ನಾಯಕ್ ಕವನ 'ಮನುಕುಲದ ಏಳ್ಗೆ, ಸರ್ವರಿಗೂ ಸಮಪಾಲು–ಸರ್ವರಿಗೂ ಸಮಬಾಳು, ವಿವಿಧತೆಯಲ್ಲಿ ಏಕತೆ, ವಿಶ್ವದೃಷ್ಠಿ'ಯನ್ನು ಸಾರಿತು. ಕುಮಾರಿ ಅಂಜಲಿ ವಾಚಿಸಿದ 'ವಿನಾಶದ ಗುಂಡಿ' ಎಂಬ ಕವನವು ಜಾತಿ ಜಗಳವನ್ನು ಬಿಡಿಸಿಟ್ಟಿತು. ನೂರ್‌ಜಹಾನ್‌ರವರ 'ಭಾರತಾಂಬೆಯ ಮಕ್ಕಳು' ಕವನವು ಕೋಮು ಗಲಭೆಯ ದುಷ್ಪರಿಣಾಮಗಳನ್ನು ಹೇಳುತ್ತಾ ಹೃದಯಗಳು ಒಡೆದರೆ ಕಟ್ಟುವುದು ಹೇಗೆ ಎಂದು ಪ್ರಶ್ನಿಸಿತು. ಸೈಯದ್‌ಹುಸೇನ್ 'ಎದ್ದು ಬಾ ಗಾಂಧಿ' ಎಂಬ ಕವನದ ಮೂಲಕ ಗಾಂಧೀಜಿಯವರ ರಾಜಕೀಯದ ನೈತಿಕತೆ ಮತ್ತು ಇಂದಿನ ರಾಜಕೀಯದ ಭ್ರಷ್ಟಾಚಾರದ ಬಗ್ಗೆ ವಿಡಂಬನೆ ಮಾಡಿದರು. ದಯಾನಂದ್ ಕಿನ್ನಾಳ್‌ರವರ 'ತ್ರಿಕಾಲ ಜ್ಞಾನಿ' ಕವನವು ಕನಕದಾಸರ ಬದುಕು ಮತ್ತು ಸಾಹಿತ್ಯದ ನಿಲುವುಗಳನ್ನು ವ್ಯಕ್ತಪಡಿಸಿತು. ಟಿ.ಎಂ.ನಾಗಭೂಷಣ 'ಮೊದಲು ಮಸೀದಿ ಕೆಡವಿದರು, ನಂತರ ಕನಕ ಗೋಪುರ ಕೆಡವಿದರು, ಈಗ ಬುದ್ಧ, ಬಸವ, ಅಂಬೇಡ್ಕರರ ವಿಗ್ರಹಗಳನ್ನು ಕೆಡವಲು ಮುಂದಾಗಿದ್ದಾರೆ. ನಾವು ಸುಮ್ಮನಿದ್ದರೆ ಹೇಗೆ? ಎಂದು ತನ್ನ ಕವನದ ಮೂಲಕ ಪ್ರಶ್ನಿಸಿದರು. ಚನ್ನಪ್ಪ ಅವರ 'ಮನಸ್ಸು ಮನಸ್ಸುಗಳ ನಡುವೆ ಅಂತರವೇಕೆ, ಜಾತಿಯ ಮಾತೇಕೆ?', ಉಮಾಮಹೇಶ್ವರವರ 'ಜಾತಿಯಲ್ಲೋ' ಎಂಬ ಕವನಗಳಿಗೆ ನೆರೆದಿದ್ದವರು ಕರತಾಡನದ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು.

ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಮುದಾಯದ ಜಿಲ್ಲಾ ಸಂಚಾಲಕರಾದ ಹುಲಿಕಟ್ಟಿ ಚನ್ನಬಸಪ್ಪನವರು 'ಭಯೋತ್ಪಾದಕರ ದಾಳಿಗಳು, ಕೋಮು ಗಲಭೆಗಳು, ಜಾತಿ ರಾಜಕಾರಣ, ಹಸಿವಿನ ಸಾವುಗಳು, ರೈತರ ಆತ್ಮಹತ್ಯೆಗಳು ಮತ್ತು ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳು ಇಂತಹ ಸಾಮಾಜಿಕ ವಿಷಮ ಪರಿಸ್ಥಿತಿಯಲ್ಲಿ ಸಾಹಿತಿಗಳು ಗಂಭೀರವಾಗಿ ಚಿಂತನೆ ಮಾಡಬೇಕು. ಜವಾಬ್ಧಾರಿಯಿಂದ ನಡೆದುಕೊಳ್ಳಬೇಕು ಎಂದರು. ಉಡುಪಿಯ ಶ್ರೀ ಕೃಷ್ಣನ ಸನ್ನಿದಿಯಲ್ಲಿ ನಡೆಯುವ ಪಂಕ್ತಿಭೇದ, ಕುಕ್ಕೆ ಸುಬ್ರಮಣ್ಯದಲ್ಲಿ ನಡೆಯುತ್ತಿರುವ ಮಡೆಸ್ನಾನವನ್ನು ಖಂಡಿಸಿದರು. ಕನಕ ಗೋಪುರವನ್ನು ಕೆಡವಿಸಿದ ಪೇಜಾವರ ಶ್ರೀಗಳು ಈಗ ಕುರುಬರಿಗೆ ವೈಷ್ಣವ ದೀಕ್ಷೆ ಕೊಡುವುದಾಗಿ ಹೇಳಿಕೆ ನೀಡಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಈ ಸಂದರ್ಭದಲ್ಲಿ ಮೌಢ್ಯತೆ ವಿರುದ್ಧ ಧ್ವನಿ ಎತ್ತಿದ ಕನಕ ನಮಗೆ ಪ್ರಸ್ತುತನಾಗುತ್ತಾನೆ. ಕನಕದಾಸರ ಪ್ರಗತಿಪರ, ಮಾನವೀಯ ಮೌಲ್ಯಗಳು ಜನಮಾನಸವನ್ನು ತಲುಪುವಂತಾಗಬೇಕು' ಎಂದು ಅಭಿಪ್ರಾಯ ಪಟ್ಟರು.

ಹಿರಿಯ ಚೇತನ ಎ.ನಾಗಪ್ಪ ಪತ್ತಾರ್‌ರವರ ಅಧ್ಯಕ್ಷತೆಯಲ್ಲಿ ಜರುಗಿದ ಕನಕದಾಸರು ರಚಿಸಿದ ಕೀರ್ತನೆಗಳ ಗಾಯನ ತುಂಬಾ ಆಕರ್ಷಣೀಯವಾಗಿತ್ತು. ನಾಗರಾಜ ಪತ್ತಾರ್, ನಾಗಪುಷ್ಪಲತಾ, ವಿಜಯಕುಮಾರ್ ಬಡಿಗೇರ್, ಕೆ.ಸುಜಾತ, ಕುಮಾರಿ ಅನುರಾಧ ಪತ್ತಾರ್, ಭಾರತಿ, ಅಭಿಷೇಕ್, ಶ್ರೀಧರ ಮರೋಳ, ಎ.ಕರುಣಾನಿಧಿ ಸುಮಧುರವಾಗಿ ಹಾಡುವ ಮೂಲಕ ಕಾರ್ಯಕ್ರಮಕ್ಕೆ ಮೆರಗು ನೀಡಿದರು. ಮ.ಬ.ಸೋಮಣ್ಣ ನಿರ್ವಹಿಸಿದರು. ಉಮಾಮಹೇಶ್ವರ ನಿರೂಪಿಸಿದರು. ಬಿ.ಮಹೇಶ್ ಸ್ವಾಗತಿಸಿದರು. ಕೆ.ಎಂ.ಸಂತೋಷ್ ವಂದಿಸಿದರು.

–ವರದಿ: ಹುಲಿಕಟ್ಟಿ ಚನ್ನಬಸಪ್ಪ

ಭಾರತ ಗೆಲ್ಲಿಸಿ........

ಪುಟ 7 ರಿಂದ

ಬಲಿಷ್ಟ ಭಾರತವನ್ನಾಗಿ ರೂಪಿಸಿದ್ದ ಈ ದೇಶವನ್ನು ಅಭದ್ರಗೊಳಿಸಿದ್ದು ನೀವು ಎಂಬುದು ಈ ದೇಶದ ಕಣ್ಣು ಮುಂದೆ ಇರುವ ಸತ್ಯ.

1990ರ ಮೊದಲು ಈ ದೇಶದಲ್ಲಿ ಮುಸ್ಲಿಂ ಮೂಲಭೂತವಾದಿಗಳು ಅಥವಾ ಮುಸ್ಲಿಂ ಉಗ್ರವಾದಿಗಳು ಇರಲಿಲ್ಲವೆಂಬುದು ಅಷ್ಟೇ ಸತ್ಯ. ಇತಿಹಾಸವನ್ನು ವಿಕೃತಗೊಳಿಸುವ ಭಾಗವಾಗಿ ರಾಮಮಂದಿರ ಮತ್ತು ಬಾಬ್ರಿಮಸೀದಿ ವಿವಾದವನ್ನು ಹುಟ್ಟುಹಾಕಿ ಬಾಬರ್ ರಾಮಮಂದಿರವನ್ನು ಕೆಡವಿ ಅಲ್ಲಿ ಮಸೀದಿಯನ್ನು ಕಟ್ಟಿದ್ದಾನೆಂದು ವಿವಾದವನ್ನು ಸೃಷ್ಟಿಸಿ, ರಥಯಾತ್ರೆಯನ್ನು ನಡೆಸಿ, ಕೋಮು ಗಲಭೆಗಳನ್ನು ಹುಟ್ಟುಹಾಕಿ, ದೇಶದ ಉದ್ದಗಲಕ್ಕೂ ಸಾವಿರಾರು ಜನರನ್ನು ಬಲಿತೆಗೆದುಕೊಂಡರು, ಕಡೆಗೆ ಡಿಸೆಂಬರ್ 6ರಂದು ಅಯೋಧ್ಯೆಯ ಬಾಬ್ರಿ ಮಸೀದಿಯನ್ನು ಕೆಡವಿ ಸಾವಿರಾರು ವರ್ಷಗಳಿಂದ ಈ ದೇಶದಲ್ಲಿ ಬೆಳೆದು ಬಂದಿದ್ದ ಮೌಲ್ಯಗಳಿಗೆ ಕೊಡಲಿ ಹಾಕಲಾಯಿತು. ಈ ಹಂತದಿಂದ ತೀವ್ರಗೊಂಡದ್ದು ಉಗ್ರವಾದ. ಅದು ಇಂದು ಪೆಡಂಭೂತವಾಗಿ ಬೆಳೆದು ತನ್ನ ಕೆನ್ನಾಲಿಗೆಯನ್ನು ಚಾಚಿದೆ. ಅಂದಿನಿಂದ ಭಾರತ ಉಗ್ರವಾದ ದಾಳಿಗೆ ತುತ್ತಾಗಿ ಸಾವಿರಾರು ಮುಗ್ದರನ್ನು ಬಲಿತೆಗೆದುಕೊಂಡಿದೆ, ಒಂದು ಕಡೆ ಅಲ್ಪ ಸಂಖ್ಯಾತ ಧರ್ಮೀಯರ ಉಗ್ರವಾದ, ಇನ್ನೊಂದು ಕಡೆ ಬಹುಸಂಖ್ಯಾತ ಧರ್ಮೀಯರ ಉಗ್ರವಾದ ಈ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಅಪಾಯವನ್ನು ಉಂಟುಮಾಡಿದೆ. ಈ ಅಪಾಯವನ್ನು ಹುಟ್ಟುಹಾಕಿದ ಸಂಘ ಪರಿವಾರದ ಶಕ್ತಿಗಳೇ ದೇಶವು ಅಪಾಯಕ್ಕೆ ಸಿಕ್ಕಿದೆ ಮತ್ತು ಅಭದ್ರತೆ ಉಂಟಾಗಿದೆ ಎಂದು ಗುಲ್ಲೆಬ್ಬಿಸಿ ಇಂತಹ ಪರಿಸ್ಥಿತಿಯನ್ನು ಎದುರಿಸಲು ಸಮರ್ಥ ನಾಯಕ ಬೇಕೆಂದು ಹೇಳಿ ಕಳೆದುಹೋದ ರಾಜಕೀಯ ಅಧಿಕಾರವನ್ನು ಪಡೆಯಲು ಅಪಾಯಕಾರಿ ರಾಜಕೀಯಕ್ಕೆ ಕೈ ಹಾಕಿವೆ. ಈ ಅಪಾಯಕಾರಿ ರಾಜಕಾರಣದ ಘೋಷಣೆಯೇ 'ಭಾರತ ಗೆಲ್ಲಿಸಿ' ಅಂದರೆ 'ನರೇಂದ್ರ ಮೋದಿಯನ್ನು ಗೆಲ್ಲಿಸಿ' ಎಂದು. ಫ್ಯಾಸಿಸಂ ಬಲಗೊಂಡಲ್ಲಿ ಜಾತ್ಯಾತೀತತೆಯನ್ನು ಎತ್ತಿಹಿಡಿದಿರುವ ನಮ್ಮ ಸಂವಿಧಾನ, ನ್ಯಾಯಾಂಗ, ಶಾಸಕಾಂಗಗಳು, ಫ್ಯಾಸಿಸ್ಟ್ ರಾಜಕಾರಣದ ಅಂಗಗಳಾಗಿ ಮಾರ್ಪಾಡಾಗುತ್ತವೆ. ಪ್ರಜಾಪ್ರಭುತ್ವವು ಸರ್ವಾಧಿಕಾರಿ ವ್ಯವಸ್ಥೆಯಾಗಿ ಮಾರ್ಪಾಡಾಗುತ್ತದೆ. ಆಗ ದೇಶ ದುರಂತದ ಪ್ರಪಾತಕ್ಕೆ ನೂಕಲ್ಪಡುತ್ತದೆ. ಆದುದರಿಂದ ಈ ದೇಶದ ಎಲ್ಲಾ ದೇಶಪ್ರೇಮಿ ಶಕ್ತಿಗಳು ಒಂದಾಗಿ ಭಾರತವನ್ನು ಉಳಿಸಬೇಕಾಗಿದೆ. ಅದೇ ಸಂದರ್ಭದಲ್ಲಿ ನವ ವಸಾಹತುಶಾಹಿ ಆರ್ಥಿಕ ನೀತಿಗಳನ್ನು ಸೋಲಿಸಿ, ಈ ದೇಶದ ಸಾರ್ವಭೌಮತ್ವವನ್ನು ರಕ್ಷಿಸಬೇಕಾಗಿದೆ.

ಹೈದರಾಬಾದ್ ಕರ್ನಾಟಕ:

'ಬಹುತೇಕರು ಭೂ ಹೀನರಾಗಿರುವುದೇ ಹಿಂದುಳಿದಿರುವಿಕೆಗೆ ಕಾರಣ' – ಜಿ.ವಿ. ಶ್ರೀರಾಮರೆಡ್ಡಿ


'ಸಂವಿಧಾನದ ಕಲಂ 371(ಜೆ) ತಿದ್ದುಪಡಿಯಲ್ಲಿ ಭೂ ಸುಧಾರಣೆ ಪ್ರಸ್ತಾಪವಿಲ್ಲ'

ವರದಿ: ಗ್ಯಾನೇಶ ಕಡಗದ

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಬಹುತೇಕರು ಭೂ ಹೀನರಾಗಿದ್ದಾರೆ. ಹೈ.ಕ. ಭಾಗದ ಕೃಷಿಗೆ ಯೋಗ್ಯವಾದ ಶೇ. 12 ರಷ್ಟು ಭೂಮಿ ಶೇ. 3ರಷ್ಟಿರುವ ಭೂ ಮಾಲೀಕರ ಹಿಡಿತದಲ್ಲಿದೆ. ಅಂ–ದರೆ ಭೂಮಾಲಕರು ಸು. 100 ಎಕರೆಯಿಂದ 500 ಎಕರೆವರೆಗೆ ಕೆಲವರೂ ಇನ್ನೂ ಹೆಚ್ಚು ಭೂಮಿಯನ್ನು ಹೊಂದಿದ್ದಾರೆ. ಶೇ. 78 ರಷ್ಟು ಭೂಮಿಯಲ್ಲಿ ಶೇ. 49 ಸಣ್ಣ ರೈತರು ಹಾಗೂ ಶೇ. 48 ರಷ್ಟು ಬಡ ರೈತರು ತೀರಾ ಕಡಿಮೆ ಭೂಮಿಯನ್ನು ಅವಲಂಬಿಸಿ ಬದುಕುತ್ತಿದ್ದಾರೆ. ತಿದ್ದುಪಡಿ ಅನುಷ್ಠಾನದಲ್ಲಿ ಭೂ ಸುಧಾರಣೆ ಕುರಿತು ಯಾವುದೇ ಪ್ರಸ್ತಾಪ ಮಾಡಿಲ್ಲ. ಭೂ ಸುಧಾರಣೆ ಕಾಯಿದೆಯಡಿ ಭೂಮಿ ಹಂಚಿಕೆ ವಿಷಯವನ್ನು ತಿದ್ದುಪಡಿಯಲ್ಲಿ ಪ್ರಸ್ತಾಪಿಸದೇ ಇರುವುದು ಎಷ್ಟು ಸರಿ ಎಂದು ಬಾಗೇಪಲ್ಲಿ ಕೇತ್ರದ ಮಾಜಿ ಶಾಸಕ, ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಪ್ರಶ್ನಿಸಿದರು.

ಅಕ್ಟೋಬರ್ 31, 2013 ರಂದು ಕೊಪ್ಪಳ ಜಿಲ್ಲೆ ಗಂಗಾವತಿ ನಗರದ ಸಿಬಿಎಸ್ ಕಲ್ಯಾಣ ಮಂಟಪದಲ್ಲಿ ಎಸ್‌ಎಫ್‌ಐ ಸಂಘಟನೆಯಿಂದ ಆಯೋಜಿಸಿದ್ದ 'ಸಂವಿಧಾನದ ಕಲಂ 371 (ಜೆ) ತಿದ್ದುಪಡಿ ಅನುಷ್ಠಾನಕ್ಕಾಗಿ ಅಗತ್ಯ ಎಚ್ಚರಗಳು' ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಕಳೆದ 65 ವರ್ಷಗಳಿಂದ ಆಳ್ವಿಕೆ ಮಾಡಿದ ಸರಕಾರಗಳು ಹೈದರಾಬಾದ್ ಕರ್ನಾಟಕ ಭಾಗವನ್ನು ಕಡೆಗಣಿಸಿದ್ದರಿಂದ ಈ ಪ್ರದೇಶ ಎಲ್ಲ ರಂಗದಲ್ಲೂ ಹಿಂದುಳಿದಿದೆ. ರಾಜಕಾರಣ ಎಂದರೆ ಕೇವಲ ಮತಗಳನ್ನು ಪಡೆದು ಅಧಿಕಾರ



ಅನುಭವಿಸುವುದಕ್ಕಲ್ಲ. ಸಾಮಾಜಿಕ ಬದ್ಧತೆಯ ನೆಲೆಗಟ್ಟಿನಲ್ಲಿ ರಾಜಕಾರಣ ಮಾಡಿದಾಗ ಮಾತ್ರ ಯಾವುದೇ ಪ್ರದೇಶಗಳು ಅಭಿವೃದ್ಧಿ ಹೊಂದಲು ಸಾಧ್ಯ. ಯಾವುದೇ ಒಂದು ಕಾಯಿದೆಗೆ ತಿದ್ದುಪಡಿ ತರುವುದು ಎಂದರೆ, ಆ ಪ್ರದೇಶದ ಕಟ್ಟಕಡೆಯ ಮನುಷ್ಯನಿಗೂ ಮೂರು ಹೊತ್ತು ಊಟ, ವಸತಿ ಸೌಲಭ್ಯ ಸಿಗುವಂತಾಗಬೇಕು ಎಂದು ಅವರು ಹೇಳಿದರು.

ಆರು ದಶಕಗಳ ಹಿಂದೆಯೇ ಇಲ್ಲಿ ಆಳ್ವಿಕೆ ಮಾಡಿದ್ದ ಜನಪ್ರತಿನಿಧಿಗಳು ತಾತ್ವಿಕ ನೆಲೆಗಟ್ಟಿನಲ್ಲಿ ಯೋಚನೆ ಮಾಡಿದ್ದರೆ, ತಿದ್ದುಪಡಿ ಅನುಷ್ಠಾನಕ್ಕಾಗಿ ಹೋರಾಟದ ಅಗತ್ಯವಿರಲಿಲ್ಲ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಪ್ರಬಲ ಅಸ್ತ್ರವನ್ನಾಗಿ ಬಳಸಿಕೊಳ್ಳಲು ತಯಾರಿ ನಡೆಸಿದೆ. ಆದರೆ, ಸ್ವಾತಂತ್ರ್ಯ ಬಂದ ನಂತರ ಬಹು ದಶಕಗಳ ಕಾಲ ಕಾಂಗ್ರೆಸ್ ಆಳ್ವಿಕೆ ನಡೆಸಿತ್ತು ಎಂಬುದನ್ನು ಮರೆಯುವಂತಿಲ್ಲ ಎಂದು ಶ್ರೀರಾಮರೆಡ್ಡಿಯವರು ಹೇಳಿದರು.

ಅಭಿವೃದ್ಧಿ ಎಂದರೆ ಮನುಷ್ಯನಿಗೆ ಸ್ವಾಭಿಮಾನದ ಬದುಕು – ಉದ್ಯೋಗ ನೀಡುವುದು

– ಪ್ರೊ. ಚಂದ್ರಪೂಜಾರಿ

ಇದೇ ಸಂದರ್ಭದಲ್ಲಿ ಹಾವೇರಿ ಜಾನಪದ ವಿ.ವಿ. ಪ್ರಾಧ್ಯಾಪಕ ಪ್ರೊ. ಚಂದ್ರ ಪೂಜಾರಿ ಮಾತನಾಡಿ, 'ಹೈ.ಕ. ಭಾಗದ ಸ್ಥಿತಿಗತಿ ಕುರಿತು ಕಳೆದ 15 ವರ್ಷಗಳಿಂದ ನಾನು ದೀರ್ಘವಾಗಿ ಅಧ್ಯಯನ ಮಾಡಿದ್ದೇನೆ. ಅಭಿವೃದ್ಧಿ ಅಂ–ದರೆ ಕೇವಲ ರಸ್ತೆ, ಚರಂಡಿ, ಶೌಚಾಲಯ ನಿರ್ಮಿಸುವುದು ಅಲ್ಲ. ಮನುಷ್ಯನಿಗೆ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಉದ್ಯೋಗ ನೀಡಿದಾಗ ಮಾತ್ರ ಅಭಿವೃದ್ಧಿ ಸಾಧ್ಯ. ಕಳೆದ 65 ವರ್ಷಗಳಿಂದ ಆಳ್ವಿಕೆ ಮಾಡಿದ ಎಲ್ಲ ಪಕ್ಷಗಳ ಮೂಲ ಅಜೆಂಡಾ ಬಡತನ ನಿವಾರಣೆಯಾಗಿದೆ. ಆದರೆ, ಬಡವರಿಗಾಗಿ ಜಾರಿಗೆ ತಂದ ಅಭಿವೃದ್ಧಿ ಯೋಜನೆಗಳ ಅನುದಾನ ಯಾರ ಪಾಲಾದವು? ಪಂಚವಾರ್ಷಿಕ ಯೋಜನೆಯಲ್ಲಿ ಶೇ. 70ರಷ್ಟು ಅನುದಾನವನ್ನು ನೀರಾವರಿಗೆ ಮೀಸಲಿಡಲಾಗಿದೆ. ಆದರೆ, ಅಭಿವೃದ್ಧಿಯಾಗಿದೆಯೇ? ಬಡತನ ನಿವಾರಣೆ ಮಾಡುವ ಘೋಷಣೆ ಮಾಡುವ ರಾಜಕೀಯ ಪಕ್ಷಗಳು ಶ್ರೀಮಂತರ ಪರ ಯೋಜನೆಗಳನ್ನು ರೂಪಿಸುತ್ತಿವೆ. ಸರ್ಕಾರಕ್ಕೆ ಪರೋಕ್ಷವಾಗಿ ಅತಿ ಹೆಚ್ಚು ತೆರಿಗೆ ಕಟ್ಟುವವರು ಬಡ ಜನರಾಗಿದ್ದಾರೆ' ಎಂದರು. 'ಹೈ.ಕ. ಭಾಗದ ಪ್ರದೇಶದ ವಿದ್ಯಾರ್ಥಿಗಳಿಗೆ ವೃತ್ತಿ
ಕಲಿಯಲು ಶೇ. 70ರಷ್ಟು ಮೀಸಲು ಕ
ಸ್ವಾಗತಾರ್ಹ. ಆದರೆ, ಈ ಭಾಗದಲ್ಲಿ
ವೃತ್ತಿಪರ ಶಿಕ್ಷಣ ಸಂಸ್ಥೆಗಳಿವೆ ?'
ಪ್ರಶ್ನಿಸಿದ ಅವರು, 'ಖಾಸಗಿ ಸಂಸ್ಥೆ
ಶೇ. 70ರಷ್ಟು ಮೀಸಲು ನಿಗದಿಗೊ
ಆದರೆ, ಡೊನೇಶನ್ ಕುರಿತು ಯಾ
ಪ್ರಸ್ತಾಪ ಮಾಡಿಲ್ಲ. ಸರಕಾರಿ ಸಂಸ್ಥೆ
ತೆಗೆದುಕೊಳ್ಳುವಷ್ಟೇ ಶುಲ್ಕವನ್ನು
ಸಂಸ್ಥೆಗಳು ಪಡೆಯುವುದು ಗುಮಾನಿಯಾ
ಎಂದು ಆತಂಕ ವ್ಯಕ್ತಪಡಿಸಿದರು.

ಯಲಬುರ್ಗ ಶಾಸಕ ಬಸವರಾಜ ರಾ
ರೆಡ್ಡಿ ಮಾತನಾಡಿ '2000ನೇ ಇಸ್ವಿಯಲ್ಲಿ
ಕರ್ನಾಟಕದ ದೆಹಲಿ ವಿಶೇಷ ಪ್ರತಿನಿಧಿ
ಸಂದರ್ಭದಲ್ಲಿ ಜೆ.ಎಚ್.ಪಟೇಲ್‌ರೊ
ಅಂದಿನ ಪ್ರಧಾನಿಯನ್ನು ಕಂಡು ತಿದ್ದು
ಒತ್ತಾಯಿಸಿದ್ದೆವು. ಮುಂದೆ ಬಂದ
ನೇತೃತ್ವದ ಎನ್‌ಡಿಎ ಸರಕಾರ ತಿದ್ದು
ಮಾಡಲು ಸ್ಪಷ್ಟವಾಗಿ ನಿರಾಕರಿಸಿತು. '37
ತಿದ್ದುಪಡಿ' ಕೇವಲ ಕಾಂಗ್ರೆಸ್ ಕೊಡುಗೆ
ಸಂವಿಧಾನ ತಿದ್ದುಪಡಿ ಪರವಾಗಿ ಸಿಪಿಐ(
ಸಿಪಿಐ ಮತ್ತಿತರ ಎಡಪಕ್ಷಗಳು
ಚಲಾಯಿಸಿದ ಪರಿಣಾಮ ಇದು ಜಾರಿಗೆ
ಸಾಧ್ಯವಾಯಿತು' ಎಂದರು.

ಎಸ್‌ಎಫ್‌ಐ ರಾಜಾಧ್ಯಕ್ಷ ಅನಂತನಾ
ಕಾರ್ಯದರ್ಶಿ ಹುಳ್ಳಿ ಉಮೇಶ್, ಗುರು
ದೇಸಾಯಿ, ದುರುಗೇಶ ಡಗ್ಗಿ, ಅಂಬ
ಕಡಗದ, ಗ್ಯಾನೇಶ ಕಡಗದ, ಬಾಳಪ್ಪ ಹುಲಿಹೈ
ಮತ್ತಿತರರಿದ್ದರು.

ಅಕ್ಟೋಬರ್ 31 ರಿಂದ ನವೆಂಬರ್ 02, 2
ರವರೆಗೆ ಗಂಗಾವತಿಯಲ್ಲಿ ನಡೆದ ರಾಜ್ಯಮ
ಸಂಘಟನಾ ಕಾರ್ಯಾಗಾರದ ಸಂದರ್ಭ
ಈ ವಿಚಾರಸಂಕಿರಣವನ್ನು ಸಂಘಟಿಸಲಾ
ಕಾರ್ಯಾಗಾರದ ಪ್ರತಿನಿಧಿಗಳಲ್ಲದೇ ದೊಡ್ಡ ಸ
ಖ್ಯೆಯ ವಿದ್ಯಾರ್ಥಿಗಳು, ಶಿಕ್ಷಕರು, ನಾಗರೀ
ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು.

ಜನ – ಮನದಲ್ಲಿ ....

ಪುಟ 9 ರಿಂದ

ನೀಡಿರುವುದೂ ನಿಜ. ಆದರೆ ಗುಂಪುಗಾರಿಕೆ, ಕಿತ್ತಾಟಗಳಿಂದ ಬಿರಿಯುತ್ತಿರುವ ಬಿಜೆಪಿಯಲ್ಲಿನ ಒಳ ಜಗಳ ಬಗೆಹರಿದಿಲ್ಲ. ಅನಂತ್‌ಕುಮಾರ್ ಗುಂಪು ಸುರೇಶ ಕುಮಾರರಂತಹವರನ್ನು ವೇದಿಕೆ ಹತ್ತಲೂ ಬಿಡದೇ ಮೇಲುಗೈ ತೋರಿಸಿತು. ಸಹವರ್ತಿಗಳಲ್ಲೇ ಐಕ್ಯತೆ ಇಲ್ಲದವರು ದೇಶದಲ್ಲಿ ಐಕ್ಯತೆ ತಂದಾರೆಯೇ?

ಬಿಜೆಪಿ ಅದೆಷ್ಟೇ ಮೋದಿಯ ಅಬ್ಬರದ ಪ್ರಚಾರ ಎಬ್ಬಿಸಿದರೂ ಮತದಾರರನ್ನು ಅವರಿಂದಲೇ ಸೆಳೆಯುವುದು ತೀರಾ ಕಷ್ಟಕರ. ಇತ್ತೀಚಿನ 2013ರ ಚುನಾವಣೆಯಲ್ಲಿ ಮೋದಿಯನ್ನು ಬೆಂಗಳೂರು, ಬೆಳಗಾವಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅಬ್ಬರದ ಪ್ರಚಾರ ಮಾಡಲಾಗಿತ್ತು. ಅಧ್ಯಯನದಂತೆ ಇಲ್ಲಿ ಮತ ಸೆಳೆಯಲು ಸಾಧ್ಯವಾಗಿಲ್ಲ. ಬದಲಾಗಿ 2009ರ ಚುನಾವಣೆಯಲ್ಲಿ ಬೆಂಗಳೂರು ಉತ್ತರ, ಗ್ರಾಮಾಂತರದಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚಿನ, ಬಲ ಹೊಂದಿರುವ ದಕ್ಷಿಣದಲ್ಲಿ 83,000 ಮತಗಳ ಕುಸಿತ ಕಂಡಿದೆ. 2009ರ ಸಂಸತ್ ಚುನಾವಣೆಯಲ್ಲಿ ಬೆಂಗಳೂರು ಪ್ರದೇಶದಲ್ಲಿ ಬಿಜೆಪಿ 15.94 ಲಕ್ಷ ಮತಗಳನ್ನೂ, ಕಾಂಗ್ರೆಸ್ 12.91 ಲಕ್ಷ ಮತಗಳನ್ನು ಪಡೆದಿದ್ದವು. ಆದರೀಗ 2013ರ ವಿಧಾನಸಭಾ ಚುನಾವಣೆಯಲ್ಲಿ ಕ್ರಮವಾಗಿ, 12.94 ಲಕ್ಷ, 18.69, ಪಡೆದಿರುವುದು ಏನ್ನು ಸೂಚಿಸುತ್ತದೆ. ಇಲ್ಲೆಲ್ಲಾ ಮೋದಿ ಮ್ಯಾಜಿಕ್ ನಡೆಯಲಿಲ್ಲ. ವಿಶೇಷವಾಗಿ ಕೋಮುವಾದಿಗಳ ಅಟ್ಟಹಾಸದ ಕರಾವಳಿಯಲ್ಲಿ ಗಣನೀಯವಾಗಿ ಮತ ಕಳೆದುಕೊಂಡು, ದಯನೀಯವಾಗಿ ಸೋಲಬೇಕಾಯಿತು. ಈಗಲೂ ಪ್ರಧಾನಿ ಅಭ್ಯರ್ಥಿ ಎಂದಾದರೂ ಅದು ಜಾದು ಸೃಷ್ಟಿಸಲಾರದು. ಆದರೆ ಒಂದು ಹಂತದ ಮೇಲ್ ಮಧ್ಯಮವರ್ಗದ ಒಂದು ವಿಭಾಗ, ಐ.ಟಿ. ಕಂಪನಿಗಳ ಗಣನೀಯ ಯುವ ವಿಭಾಗವನ್ನು ಒಂದಷ್ಟು ಸೆಳೆಯಲು ಈಗ ಸಾಧ್ಯವಾಗಿರಬಹುದು ಎಂಬುದೂ ಗಂಭೀರ ಅಂಶ. ಚಂಚಲ ಚಿತ್ತದವರಾದ ಮಧ್ಯಮ ವರ್ಗದಲ್ಲಿ ಅದನ್ನು ಉಳಿಸಿಕೊಳ್ಳುವುದೂ ಅಷ್ಟು ಸುಲಭವೇನಲ್ಲ.

ವೈಫಲ್ಯಗಳ ಫಲಕ್ಕೆ ಹೊಂಚು

ಇಲ್ಲಿ ಮತ್ತೇ ಎದ್ದು ಬರುವ ಪ್ರಶ್ನೆ, ಬಿಜೆಪಿಯ ಆಕ್ರಮಣಕಾರಿ ಧಾಳಿಯ ಎದುರಲ್ಲಿ ಉಳಿದ ಪಕ್ಷಗಳೇನು ಮಾಡುತ್ತಿವೆ? ಎಡ ಪಕ್ಷಗಳನ್ನು ಹೊರತು ಪಡಿಸಿದರೆ ಕಾಂಗ್ರೆಸ್, ಜೆ.ಡಿ.ಎಸ್‌ಗಳು ಬಹುತೇಕವಾಗಿ ರಾಜಕೀಯವಾಗಿ ನಿಷ್ಕ್ರಿಯವಾಗಿವೆ. ಮುಖ್ಯವಾಗಿ ಕೇಂದ್ರದ ಕಾಂಗ್ರೆಸ್ ಜನವಿರೋಧಿ ಆಡಳಿತ, ಅದರ ನೀತಿಗಳಿಂದ ಜನರು ಅನುಭವಿಸುತ್ತಿರುವ ಸಂಕಷ್ಟಗಳಿಂದ ಬೆಳೆಯುತ್ತಿರುವ ಅತೃಪ್ತಿಯನ್ನೇ ಬಿಜೆಪಿ ಬಂಡವಾಳ ಮಾಡಿಕೊಳ್ಳುತ್ತಿದೆ. ರಾಜ್ಯದಲ್ಲಿಯೂ ಕಾಂಗ್ರೆಸ್ ವಿರುದ್ಧ ಯೋಜಿತ, ಕೇಂದ್ರೀಕರಿಸಿದ ಧಾಳಿಯನ್ನು ಮಾಡುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ಏಕ ಕಾಲದಲ್ಲಿ ಎದುರಿಸದೇ ದೇಶವನ್ನು, ಜನರನ್ನು ರಕ್ಷಿಸಲು ಸಾಧ್ಯವೇ ಇಲ್ಲ. ಇಂತಹ ಸ್ಥಿತಿಯಲ್ಲಿ ಜಾತ್ಯಾತೀತ ಜನತಾ ದಳ ರಾಜಕೀಯ ಹೊಯ್ದಾಟದಿಂದ ಹೊರ ಬಂದಂತೆ ಕಾಣುತ್ತಿಲ್ಲ. ಇಲ್ಲವಾಗಿದ್ದರೆ ಕಾಂಗ್ರೆಸ್ ಮತ್ತು ಬಿಜೆಪಿಗಳಿಗೆದುರಾಗಿ ಮೂರನೆಯ ಶಕ್ತಿಗಳನ್ನು ಬಲಪಡಿಸಲು ಎಡಶಕ್ತಿಗಳೊಂದಿಗೆ ಮುತುವರ್ಜಿಯನ್ನು ವಹಿಸಬೇಕಿತ್ತು. ಇದರ ಕೊರತೆ ಬಿಜೆಪಿಯ ಮುನ್ನುಗ್ಗುವಿಕೆಗೆ ಅವಕಾಶ ಕಲ್ಪಿಸುತ್ತಿದೆ. ಈ ವಿಳಂಬ ಹೆಚ್ಚಿನ ಹಾನಿ ತರಬಲ್ಲುದು.

ಹಾಗಾದರೆ . . .?

ಕೊನೆಯಲ್ಲಿ, ಹೇಳಲೇ ಬೇಕಾದ, ಎಲ್ಲರೂ ಯೋಚಿಸಬೇಕಾದ ವಿಷಯ: ಭಾರತ ಉಳಿದಿರುವುದೇ ಜಾತ್ಯಾತೀತತೆ, ಪ್ರಜಾಪ್ರಭುತ್ವದ ಭದ್ರ ಅಡಿಪಾಯದಲ್ಲಿ. ವೈವಿಧ್ಯಮಯ ಸಂಸ್ಕೃತಿ, ಪುರಾತನ ನಾಗರೀಕತೆಯ ಇಂತಹ ಹೆಮ್ಮರದ ಟೊಂಗೆಯ ಮೇಲೆ ಕುಳಿತು, ಕುಳಿತ ಟೊಂಗೆಯನ್ನೇ ಕತ್ತರಿಸ ಹೊರಟ ಮೋದಿ ಸಂತತಿ ಭಾರತವನ್ನು ಬಲಪಡಿಸೀತೆ? ಉಳಿಸೀತೆ? ಹಾಗಾದರೆ ಮಾಡಬೇಕಾದುದೇನು?

ಬೀದಿ ಬದಿ.....

ಪುಟ 5 ರಿಂದ್ಕ

ಪಿಂಚಣಿ) ಯೋಜನೆಗಳನ್ನು ಅಲ್ಪ ಪರಿ
ನೀಡಲು ರೂಪಿಸಲಾಗಿದೆ.

ಕಾಯ್ದೆಯ ಮಿತಿ ಏನೇ ಇದ್ದರೂ ಕಾಯ್ದೆ
ನಿಯಮಗಳನ್ನು ರೂಪಿಸಲು, ಸೌಲಭ್ಯಗಳ
ಒದಗಿಸಲು, ಕಲ್ಯಾಣ ಯೋಜನೆಗಳನ್ನು ರೂ
ಜಾರಿಗೊಳಿಸಲು ಒತ್ತಾಯಿಸಿ ಬೀದಿ
ವ್ಯಾಪಾರಿಗಳು ಸಂಘಟಿತರಾಗಿ ಹೋರಾಟಗಳ
ನಡೆಸಬೇಕಿದೆ. ಆ ಮೂಲಕ ನಗರ ವೆಂಡಿ
ಕಮಿಟಿಗಳಲ್ಲಿ ಬೀದಿ ಬದಿ ವ್ಯಾಪಾರಿಗಳ
ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ಪಡೆಯಲು ಮತ್ತು ಬ
ಬದಿ ಮಾರಾಟದ ಹಕ್ಕನ್ನು ಸಾಕಾರಗಳಿಸಿಕೊಳ್ಳ
ಮುಂದಾಗಬೇಕಿದೆ. ಬೀದಿ
ಮಾರಾಟಗಾರರಿಗೆ ಈ ವ್ಯವಸ್ಥೆ ಕಟ್ಟಿಕೊಡುತ್ತಿರು
ಕನಸು ಕನ್ನಡಿಯೊಳಗಿನ ಗಂಟಾಗದು
ನೋಡಿಕೊಳ್ಳಲು, ಕನಸನ್ನು ನನಸಾಗಿಸ
ರಾಜ್ಯ ಸರ್ಕಾರವು ನಿಯಮಾವಳಿಗಳ
ರೂಪಿಸಬೇಕೆಂದು, ಅಸಂಘಟಿತ ಕಾರ್ಮಿ
ಕಲ್ಯಾಣ ಯೋಜನೆಗಳನ್ನು ರೂ
ಜಾರಿಗೊಳಿಸಬೇಕೆಂದು ಒತ್ತಾಯಿಸಿ ಸಿಐಟಿಯು
ನಡೆಸುತ್ತಿರುವ 2014 ಜನವರಿ 21ರ
ಸೌಧ ಚಲೋನಲ್ಲಿ ದೊಡ್ಡ ಸಂಖ್ಯೆ
ಭಾಗವಹಿಸಿ ಯಶಸ್ವಿಗೊಳಿಸಲು ಬೀದಿ ಬ
ಮಾರಾಟಗಾರರು ಮುಂದಾಗಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುಪಿಎ ಸರಕಾರಕ್ಕೆ ಕೈಕೊಟ್ಟ ಖಾಸಗೀಕರಣದ ಖಯಾಲಿ

ಟಾಟಾ-ಬಿರ್ಲಾಗಳ ಕಲ್ಲಿದ್ದಲು ಲೈಸೆನ್ಸ್ ರದ್ದು; ವಿದ್ಯುತ್ ಒದಗಿಸಲಾರದ ಅಂಬಾನಿ ಕಂಪನಿ ವಿರುದ್ಧ ಎಫ್‌ಐಆರ್

ಎನ್.ಕೆ. ವೇದರಾಜ

ಖಾಸಗೀಕರಣ ಯುಪಿಎ-2 ಸರಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಗಳ ಜೀವಾಳ. ಈ ಖಾಸಗಿ ಉದ್ಯಮಗಳ/ಉದ್ಯಮಿಗಳ 'ದಕ್ಷತೆ' ಯಾವ ರೀತಿಯದ್ದು ಎಂದು ಮತ್ತೆ-ಮತ್ತೆ ಕಾಣಲಾಗುತ್ತಿದೆ. ಎಷ್ಟೆಂದರೆ ಈಗ ಯುಪಿಎ-2 ಸರಕಾರವೇ 'ನಿಮ್ಮನ್ನು ನಂಬುವಂತಿಲ್ಲ' ಎಂದು ಲೈಸೆನ್ಸ್ ರದ್ದು ಮಾಡುವ ಮೂಲಕ ಅವರಿಗೆ ಹೇಳಬೇಕಾಗಿ ಬಂದಿದೆ.


ಕಳೆದ ವಾರ, ದೊಡ್ಡ ಖಾಸಗಿ ಕಂಪನಿಗಳಿಗೆ ಉದ್ದಿಮೆಯ ಸ್ವಂತ ಬಳಕೆಗೆಂದು ಅಭಿವೃದ್ಧಿಪಡಿಸಲು ನೀಡಲಾಗಿದ್ದ ಕಲ್ಲಿದ್ದಲು ಗಣಿಗಾರಿಕೆ ಲೈಸೆನ್ಸುಗಳನ್ನು ರದ್ದು ಪಡಿಸಬೇಕೆಂದು ಯುಪಿಎ-2 ಸರಕಾರದ ಒಂದು ಅಂತರ-ಮಂತ್ರಾಲಯ ಗುಂಪು ಶಿಫಾರಸು ಮಾಡಿದೆಯೆಂದು ವರದಿಯಾಗಿದೆ. ಈ ಪಟ್ಟಿಯಲ್ಲಿ ಟಾಟಾ ಸನ್ಸ್, ಜಿಂದಾಲ್ ಸ್ಟೀಲ್ ಅಂಡ್ ಪವರ್, ಬಿರ್ಲಾಕಾರ್ಪ್ ಇತ್ಯಾದಿ ಘಟಾನುಘಟಿ ಉದ್ಯಮಿಗಳಿಗೆ ನೀಡಿರುವ ಲೈಸೆನ್ಸ್‌ಗಳೇ ಸೇರಿವೆ.

ಒಡಿಶಾ, ಛತ್ತೀಸ್‌ಗಡ, ಝಾರ್ಖಂಡ್, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿನ 450 ಕೋಟಿ ಟನ್‌ಗಳಿಗೂ ಮೀರಿದ 11 ಕಲ್ಲಿದ್ದಲು ಗಣಿಗಳನ್ನು ಹಿಂದಕ್ಕೆ ಪಡೆಯಬೇಕೆಂದು ಅದು ಶಿಫಾರಸು ಮಾಡಿದೆ-ಕಾರಣ, ತಮಗೆ ಕೊಡಲಾದ ಈ ಬ್ಲಾಕುಗಳ ಅಭಿವೃದ್ಧಿಗೆ ಈ ಉದ್ಯಮಿ ಗುಂಪುಗಳು ಯಾವ ಕೆಲಸವನ್ನೂ ಮಾಡಿಲ್ಲ!

ಈ ರೀತಿ ಶಿಫಾರಸು ಮಾಡುವ ಮೊದಲು ಸಂಬಂಧಪಟ್ಟ ಕಂಪನಿಗಳಿಂದ ವಿವರಣೆ ಕೇಳಲಾಗಿತ್ತು. ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ತಮಗೆ ಸಹಕಾರ ದೊರೆಯದ್ದ-ರಿಂದ ಏನೂ ಮಾಡಲಾಗಲಿಲ್ಲ ಎಂಬುದು ಅವರೆಲ್ಲರ 'ವಿವರಣೆ'. 'ಸಹಕಾರ' ಎಂದರೆ ಕೆಜಿ ಡಿ6 ತೈಲ ನಿಕ್ಷೇಪದಲ್ಲಿ ರಿಲಯಂಸ್ ಕೇಳುತ್ತಿದ್ದಂತಹ ದರ ಏರಿಕೆಯೂ ಸೇರಿದಂತೆ ಮತ್ತಷ್ಟು ಸೌಲಭ್ಯಗಳನ್ನು ಒದಗಿಸಬಹುದೆಂಬ 'ಸಹಕಾರ'ವಿರಬಹುದೇ ಎಂಬುದು ಗೊತ್ತಾಗಿಲ್ಲ. ಏನೇ ಆಗಲಿ, ಅಭಿವೃದ್ಧಿ ಪಡಿಸುವುದು ಲೈಸೆನ್ಸ್ ಪಡೆದವರ ಜವಾಬ್ದಾರಿ ಎಂದಿರುವ ಅಂತರ-ಮಂತ್ರಾಲಯ ಗುಂಪು ಲೈಸೆನ್ಸ್‌ಗಳನ್ನು ರದ್ದು ಮಾಡುವ ಶಿಫಾರಸು ನೀಡಿದೆಯಂತೆ.

ಅತ್ತ ಒಡಿಶಾದಲ್ಲಿ ಖಾಸಗೀಕರಣದ 'ದಕ್ಷತೆ'ಯ ಇನ್ನೊಂದು ಮಾದರಿಯೂ ಈಗ ಪ್ರದರ್ಶನಗೊಳ್ಳುತ್ತಿದೆ. ಪ್ರವಾಹಪೀಡಿತ ಗಂಜಾಂ ಜಿಲ್ಲೆಯಲ್ಲಿ ಕಳೆದ ಒಂದು ತಿಂಗಳಿಗಿಂತಲೂ ಹೆಚ್ಚು ಸಮಯದಿಂದ ವಿದ್ಯುತ್ ಪೂರೈಕೆಯೇ ಇಲ್ಲ. ಇಲ್ಲಿ ಅಂಬಾನಿ ಒಡೆತನದ ವಿದ್ಯುತ್ ಪೂ-ರೈಕೆ ಕಂಪನಿ ಸೌತ್ಕೊಗೆ ಒಂದು ತಿಂಗಳ ಹಿಂದೆ ಉಂಟಾಗಿದ್ದ ವಿದ್ಯುತ್ ಕಡಿತವನ್ನು ಸರಿಪಡಿಸಲು ಇನ್ನೂ ಆಗಿಲ್ಲ.

1999 ರ ಮಹಾ ಬಿರುಗಾಳಿಯ ನಂತರ ವಿದ್ಯುತ್ ಮೂಲರಚನೆಯ ನಿರ್ವಹಣೆಗೆ ಈ ಅಂಬಾನಿ ಕಂಪನಿ ಏನೂ ಹಣ ಖರ್ಚು ಮಾಡಿಲ್ಲ. ಅಲ್ಲದೆ ಈ ಅವಧಿಯಲ್ಲಿ ಬಳಕೆದಾರರ ಸಂಖ್ಯೆ 2.69ಲಕ್ಷದಿಂದ 10.82 ಲಕ್ಷಕ್ಕೆ ಏರಿದ್ದರೂ ನುರಿತ ಕೆಲಸಗಾರರ ಸಂಖ್ಯೆ ಏರಿಲ್ಲ, ಬದಲಿಗೆ ಅದರಲ್ಲಿ ಕಡಿತ ಮಾಡಲಾಗಿದೆ. ಆದ್ದರಿಂದ ಪ್ರವಾಹದಿಂದ ವ್ಯತ್ಯಯಗೊಂಡಿರುವ ವಿದ್ಯುತ್ ಪೂರೈಕೆಯನ್ನು ಪುನರಾರಾಂಭಿಸಲು ಒಂದು ತಿಂಗಳಾದರೂ ದೇಶದ ಮಹಾಶ್ರೀಮಂತನೊಬ್ಬನ ಈ ಕಂಪನಿಗೆ ಆಗಿಲ್ಲವಂತೆ. ಎಷ್ಟೆಂದರೆ ಈಗ ಅಲ್ಲಿ ಆಸ್ಪತ್ರೆಗಳು, ಪಂಪ್ ಸೆಟ್‌ಗಳು, ನೀರು ಪೂರೈಕೆಯಂತಹ ಅತ್ಯಗತ್ಯ ಸೇವೆಗಳಿಗೂ ವಿದ್ಯುತ್ ಪೂರೈಕೆಯಿಲ್ಲ.



ಈ ಹಿನ್ನೆಲೆಯಲ್ಲಿ ಸಿಪಿಐ(ಎಂ)ನ ಕಾರ್ಯಕರ್ತರು ಈ ಖಾಸಗಿ ವಿದ್ಯುತ್ ಕಂಪನಿಯೆದುರು ಮತಪ್ರದರ್ಶನ ನಡೆಸಿದ ನಂತರ ಸಿಪಿಐ(ಎಂ)ನ ಒಡಿಶಾ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಅಲಿ ಕಿಶೋರ್ ಪಟ್ನಾಯಕ್ ಬೆರ್ಹಾಂಪುರದ ಬಿಎನ್‌ಪರ್ ಪೋಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿ ಒರಿಸ್ಸಾ ಅಗತ್ಯ ಸೇವೆಗಳು(ನಿರ್ವಹಣೆ) ಕಾನೂನು, 1988ರ ಅಡಿಯಲ್ಲಿ ಕಂಪನಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಈಗ ಜಿಲ್ಲಾ ಆಡಳಿತವೂ ಒಂದು ವಾರದ ಒಳಗೆ ವಿದ್ಯುತ್ ಪೂರೈಕೆ ಪುನರಾರಂಭಿಸುವಂತೆ ವಿದ್ಯುತ್ ಕಂಪನಿಗೆ ತಾಕೀತು ಮಾಡಿದೆ. ಆದರೆ ಈ 'ದಕ್ಷ' ಖಾಸಗಿ ಕಂಪನಿ ಇನ್ನೂ ಡಿಸೆಂಬರ್ 7 ರವರೆಗೆ ಸಮಯ ಕೇಳಿದೆಯಂತೆ.

ಮಹಿಳೆಯರ ವಿರುದ್ಧ ಪಕ್ಷಪಾತ : 'ಕಟು ವಾಸ್ತವತೆ' ಎಂದರಷ್ಟೇ ಸಾಕೇ?

ಭಾರತದಲ್ಲಿ ಮಹಿಳೆಯರು ಮನೆಯಲ್ಲೂ, ಕೆಲಸದ ಸ್ಥಳದಲ್ಲೂ ಪಕ್ಷಪಾತವನ್ನು ಎದುರಿಸುತ್ತಿದ್ದಾರೆ, ಮಹಿಳಾ ಸಬಲೀಕರ ಇನ್ನೂ ದೂರದ ಗುರಿಯಾಗಿಯೇ ಉಳಿದಿದೆ, ಇದೊಂದು ಕಟು ವಾಸ್ತವತೆ-ಹೀಗೆಂದವರು ಸ್ವತಃ ದೇಶದ ಪ್ರಧಾನ ಮಂತ್ರಿಗಳು- ಒಂದಲ್ಲ, ಎರಡಲ್ಲ, ಒಂಭತ್ತು ವರ್ಷಗಳಿಗೂ ಹೆಚ್ಚು ಕಾಲದಿಂದ ದೇಶದ ಪ್ರಧಾನ ಮಂತ್ರಿಗಳಾಗಿರುವವರು.


ಮಹಿಳಾ ರಾಷ್ಟ್ರಾಧ್ಯಕ್ಷರನ್ನು ಪಡೆದೆವು, ಮಹಿಳಾ ಲೋಕಸಭಾಧ್ಯಕ್ಷರನ್ನೂ ಪಡೆದಿದ್ದೇವೆ. ದೇಶದ 'ಅತ್ಯಂತ ಹಳೆಯ ರಾಜಕೀಯ ಪಕ್ಷ'ದ ಅಧ್ಯಕರೂ ಮಹಿಳೆಯೇ, ವಿರೋಧ ಪಕ್ಷದ ನಾಯಕರೂ ಮಹಿಳೆಯೇ, ಇಬ್ಬರು ಮಹಿಳಾ ಮುಖ್ಯಮಂತ್ರಿಗಳಿದ್ದಾರೆ. ಜಗತ್ತಿನಲ್ಲಿ ಅತ್ಯುನ್ನತ 50 ಮಹಿಳಾ ಉದ್ಯಮಿಗಳಲ್ಲಿ ನಾಲ್ವರು ಭಾರತದವರು. ಆದರೂ ಇದು ನಮ್ಮ ದೇಶದ ಸರಾಸರಿ ವಾಸ್ತವತೆಯನ್ನು ಬಿಂಬಿಸುತ್ತಿಲ್ಲ- ಹೀಗೆಂದವರೂ ಅವರೇ.

ಆದರೆ ಇದಕ್ಕೆಲ್ಲ ಏನು ಕಾರಣ ಎಂದೇನೂ ಅವರು ಹೇಳಿದಂತಿಲ್ಲ. ಇದನ್ನೆಲ್ಲ ಅವರು ಹೇಳಿದ್ದು ಯುಪಿಎ-2 ಸರಕಾರದ ಹೊಸ ಅರ್ಪಣೆ 'ಭಾರತೀಯ ಮಹಿಳಾ ಬ್ಯಾಂಕ್' ಎಂಬುದನ್ನು ಉದ್ಘಾಟಿಸುತ್ತಾ. ಈ ಬ್ಯಾಂಕ್ 'ಬಹುಪಾಲು' ಮಹಿಳೆಯರಿಗೆ, ಮಹಿಳಾ ಸ್ವಸಹಾಯ ಗುಂಪುಗಳಿಗೆ ಹಣಕಾಸು ಸೇವೆಗಳನ್ನು ಒದಗಿಸುತ್ತದೆ ಎಂದು ಅವರು ಹೇಳಿದರು.

ಕೆಲವರು ಇದು ಮಹಿಳಾ ವೋಟ್ ಬ್ಯಾಂಕಷ್ಟೇ ಎಂದು ಹೇಳಿದ್ದಾರೆ. ಸಮಸ್ಯೆಯ ಮೂಲಕ್ಕೆ ಹೋಗದೇ ಇರುವ ಸಂದರ್ಭದಲ್ಲಿ ಬಹುಶಃ ಅದನ್ನು ತಳ್ಳಿ ಹಾಕಲು ಸಾಧ್ಯವಿಲ್ಲ.ಗ್ರಾಮೀಣ ಜನರಿಗೆಂದು ರಚಿಸಿದ ಗ್ರಾಮೀಣ ಬ್ಯಾಂಕುಗಳ ಸ್ಥಿತಿ ಉದಾರೀಕರಣದ ಯುಗದಲ್ಲಿ ಏನಾಗಿದೆ ಎಂಬುದು ನಮ್ಮ ಕಣ್ಣೆದುರಿಗಿದೆ. ಮಹಿಳಾ ಬ್ಯಾಂಕಿನ ಸ್ಥಿತಿ ಇದಕಿಂತ ಭಿನ್ನವಾಗಬಹುದು ಎಂಬುದಕ್ಕೆ ಆಧಾರಗಳೇನೂ ಕಾಣುತ್ತಿಲ್ಲ. ಅದಕ್ಕೂ ಮುಖ್ಯವಾಗಿ ಮಹಿಳೆಯರೇ ಹೆಚ್ಚಾಗಿ ಇರುವ ಅಂಗನವಾಡಿ, ಆಶಾ, ಮಧ್ಯಾಹ್ನದ ಊಟ ಮುಂತಾದ ಸರಕಾರದ ಯೋಜನೆಗಳಲ್ಲೇ ದುಡಿಯುವವರಲ್ಲಿ ಬಹುಪಾಲು ಮಹಿಳೆಯರೇ, ಅದೂ ಬಡ ಮಹಿಳೆಯರೇ ಆಗಿರುವಾಗ ಅವರ ಕೆಲಸದ ಪರಿಸ್ಥಿತಿಗಳನ್ನು ಉತ್ತಮ ಪಡಿಸಲು ಸತತವಾಗಿ ನಿರಾಕರಿಸುತ್ತಿರುವ, ಬದಲಾಗಿ ಈ ಯೋಜನೆಗಳನ್ನು ಖಾಸಗೀಕರಿಸಿ ಕೈತೊಳೆದುಕೊಳ್ಳಲು ಮುಂದಾಗಿರುವ ಸರಕಾರದ ಮುಖ್ಯಸ್ಥರ ಬಾಯಿಂದ ಇಂತಹ ಮಾತುಗಳಿಗೆ ಎಷ್ಟು ಬೆಲೆಯಿದೆ ಎಂಬ ಪ್ರಶ್ನೆ ಸಹಜ.

ಇದರ ಹಿಂದಿನ ದಿನ ಭಾರತದ ಶಾಲಾ ಶಿಕ್ಷಕರ ಒಕ್ಕೂಟ(ಎಸ್‌ಟಿಎಫ್‌ಐ)ದ ಪ್ರತಿನಿಧಿ ಮಂಡಲವೊಂದು ರಾಷ್ಟ್ರಪತಿಗಳನ್ನು ಭೇಟಿಯಾಗಿ ದೇಶದ ಶಿಕ್ಷಕಿಯರು, ಹೆಣ್ಣುಮಕ್ಕಳು ಮತ್ತು ಮಹಿಳೆಯರ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರಕ್ಕೆ ಬೆಂಬಲವಾಗಿ ಸಂಗ್ರಹಿಸಿದ ಒಂದು ಕೋಟಿ ಸಹಿಗಳನ್ನು ಅವರಿಗೆ ಸಲ್ಲಿಸಿದರು. ರಾಷ್ಟ್ರಪತಿಗಳು ಒಂದು ಕೋಟಿ ಜನಗಳನ್ನು ಸಂಪರ್ಕಿಸಿದ ಸಂಘಟನೆಯ ಪ್ರಯತ್ನಗಳನ್ನೇನೋ ಪ್ರಶಂಸಿಸಿದರು, ಮಹಿಳೆಯರಿಗೆ ಗೌರವ ಕೊಡದ ಒಂದು ಸಮಾಜ ನಾಗರಿಕ ಸಮಾಜ ಎನಿಸಿಕೊಳ್ಳುವುದಿಲ್ಲ ಎಂದೂ ಹೇಳಿದರು.

ಅಂತೂ ಮಾತಿನಲ್ಲಿ ದೇಶದ ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು ಕೃತಾರ್ಥರಾಗಿದ್ದಾರೆ.



ಇದುವರೆಗಿನ ಚುನಾವಣಾ ಪ್ರಚಾರ !
- ದಿ ಹಿಂದೂನಲ್ಲಿ ಕೇಶವ್ ವ್ಯಂಗ್ಯ

ಅರಣ್ಯ ಮಾಫಿಯಾವನ್ನು, ರೈತರನ್ನು ಒಂದೇ ತಕ್ಕಡಿಯಲ್ಲಿ ತೂಗುವ ಆದೇಶ

ಯುಪಿಎ-2 ಸರಕಾರದ ಪರಿಸರ ಮತ್ತು ಅರಣ್ಯ ಇಲಾಖೆ ನವಂಬರ್ 16ರಂದು ಕಸ್ತೂರಿ ರಂಗನ್ ಸಮಿತಿಯ ವರದಿಯನ್ನು 'ತತ್ವಶಃ' ಸ್ವೀಕರಿಸಲಾಗಿದೆ ಎಂಬ ಅಧಿಕೃತ ಸೂಚನೆ ಹೊರಡಿಸಿದೆ. ಇದರ ಪ್ರಕಾರ ಪಶ್ಚಿಮ ಘಟ್ಟ ಪ್ರದೇಶದ 4156 ಹಳ್ಳಿಗಳಲ್ಲಿ ಕೃಷಿ ಮತ್ತು ಮೂಲ ಬೆಳವಣಿಗೆಯ ಚಟುವಟಿಕೆಗಳ ಮೇಲೆ ಮಿತಿಗಳನ್ನು ಹಾಕಲಾಗುವುದು. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಪರಿಸರ ರಕ್ಷಣೆ ಕುರಿತ ಪರಿಣಿತರ ತಂಡದ ವರದಿ ಅಥವ ಮಾಧವ ಗಾಡ್ಗೀಳ್ ವರದಿಯನ್ನು 'ಅತ್ಯಂತ ಪರಿಣಾಮಕಾರಿಯಾಗಿ ಮತ್ತು ಸಮಗ್ರವಾಗಿ ಜಾರಿಗೊಳಿಸಲು ಒಂದು ಕ್ರಿಯಾಯೋಜನೆಯನ್ನು' ಸಲ್ಲಿಸಲು ಮತ್ತು "ಸ್ಥಳೀಯ ಮತ್ತು ಮೂಲನಿವಾಸಿಗಳ ಅಗತ್ಯಗಳು ಮತ್ತು ಆಕಾಂಕ್ಷೆಗಳನ್ನು" ಗಮನದಲ್ಲಿಟ್ಟುಕೊಂಡು ವರದಿಯನ್ನಿ ಪರಿಶೀಲಿಸಲಿಕ್ಕಾಗಿ ಕಸ್ತೂರಿ ರಂಗನ್ ಅವರ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು ರಚಿಸಲಾಗಿತ್ತು.

ಸರಕಾರದ ಈ ಪ್ರಕಟಣೆಗೆ ವ್ಯಾಪಕ ವಿರೋಧ ವ್ಯಕ್ತಗೊಂಡಿದೆ. ಇದನ್ನು ಅತ್ಯಂತ ಸರ್ವಾಧಿಕಾರಶಾಹೀ ರೀತಿಯಲ್ಲಿ, ರೈತ ಸಂಘಟನೆಗಳು ಮತ್ತು ಇತರ ಸಂಘಟನೆಗಳು ಸಲ್ಲಿಸಿದ ಆಕ್ಷೇಪಗಳನ್ನು ಪರಿಗಣಿಸದೆಯೇ ತರಲಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಇದನ್ನು ಖಂಡಿಸಿದೆ. ಪರಿಸರ ಮಂತ್ರಿಗಳು ಇದರಲ್ಲಿ ರೈತ-ವಿರೋಧಿ ಅಂಶಗಳೇನೂ ಇಲ್ಲ ಎಂದಿರುವುದು ಅರ್ಥಹೀನ ಎಂದು ಎಐಕೆಎಸ್ ಹೇಳಿದೆ.

ಸರಕಾರದ ಈ ಆದೇಶ ಗೋವಾದ 99 ಹಳ್ಳಿಗಳು, ಗುಜರಾತಿನ 64, ಕರ್ನಾಟಕದ 1576, ಕೇರಳದ 123, ಮಹಾರಾಷ್ಟ್ರದ 2159 ಮತ್ತು ತಮಿಳುನಾಡಿನ 135 ಹಳ್ಳಿಗಳನ್ನು ಪರಿಸರಾರ್ಥಕವಾಗಿ ಸೂಕ್ಷ್ಮ ವಲಯ (ಇಎಸ್‌ಝಡ್) ಎಂದು ಸಾರಿದೆ. ಹೀಗೆ ವಲಯಗಳಾಗಿ ವಿಂಗಡಿಸಲು ರೆವಿನ್ಯೂ ಹಳ್ಳಿಗಳನ್ನು ಆಧಾರವಾಗಿಸಿರುವುದು ಅವೈಜ್ಞಾನಿಕ ಎಂದು ಎಐಕೆಎಸ್ ಹೇಳಿದೆ.

ಈ ಎರಡೂ ವರದಿಗಳು ತಲೆತಲಾಂತರದಿಂದ ಈ ಪ್ರದೇಶದಲ್ಲಿ ಬಾಳಿ-ಬದುಕಿರುವ ಜನಗಳು ಬೇಕೆಂದೇ ಪರಿಸರವನ್ನು ಹಾಳುಗೆಡವಿದ್ದಾರೆ ಎಂದು ಭಾವಿಸಿಕೊಂಡು ರೈತಾಪಿ ಜನಗಳನ್ನು ಅರಣ್ಯ ಮಾಫಿಯಾ ಮತ್ತು ಗಣಿಗಾರ ಒಡೆಯರೊಂದಿಗೆ ಸಮೀಕರಿಸಿ ಕಂಡಂತಿದೆ. ವಾಸ್ತವವಾಗಿ ಈ ಪ್ರದೇಶದ ಈ ನಿವಾಸಿಗಳೇ ಪರಿಸರದ ಅತ್ಯಂತ ಪರಿಣಾಮಕಾರಿ ರಕ್ಷಕರು ಎಂಬುದನ್ನು ಉಪೇಕ್ಷಿಸಲಾಗಿದೆ.


ಈ ಎರಡೂ ವರದಿಗಳಲ್ಲಿನ ರೈತ-ವಿರೋಧಿ, ಜನ-ವಿರೋಧಿ ಶಿಫಾರಸುಗಳನ್ನು ಕೈಬಿಡಬೇಕು, ರೈತ ಸಂಘಟನೆಗಳು ಮತ್ತು ಸಂಬಂಧಪಟ್ಟ ಎಲ್ಲ ಜನವಿಭಾಗಗಳೊಂದಿಗೆ ಚರ್ಚಿಸಿ ಈ ಹಿಂದೆ ಸರ್ಕಾರವೇ ಒಪ್ಪಿಕೊಂಡಂತೆ ಒಂದು ಸಮಗ್ರ ಕಣ್ನೋಟ ರೂಪಿಸಬೇಕು, ಈ ಪ್ರದೇಶದ ಜನಗಳ ಜೀವನಾಧಾರಗಳ ಭದ್ರತೆಯ ಬಗ್ಗೆ ಎದ್ದಿರುವ ಸಂದೇಹಗಳನ್ನು ನಿವಾರಿಸಿಯೇ ಮುಂದುವರೆಯಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ಜಗದಗಲ

ಶರತ್‌ಚಂದ್ರ

ಮಹಾಯುದ್ಧ ತಡೆಯಲು ಶಾಂತಿ ಪ್ರಚಾರಕ್ಕೆ ಕರೆ

ಮುಂದಿನ ವರ್ಷ (2014) ಬಹಳ ವಿಶಿಷ್ಟ ವರ್ಷ. ಮೊದಲ ಮಹಾಯುದ್ಧ ಆರಂಭವಾಗಿ (1914) ನೂರು ವರ್ಷಗಳು, ಎರಡನೇ ಮಹಾಯುದ್ಧ (1939) ಶುರುವಾಗಿ 75 ವರ್ಷಗಳು ತುಂಬುತ್ತವೆ. ಹೊಸ ಅಂತರ್ರಾಷ್ಟ್ರೀಯ ಮಿಲಿಟರಿ ಸಂಘರ್ಷಗಳು ಇನ್ನೊಂದು ಮಹಾಯುದ್ಧಕ್ಕೆ ಎಡೆ ಮಾಡಿಕೊಡಬಹುದು ಎಂಬ ಅಪಾಯ ಸದಾ ಇಡೀ ಜಗತ್ತಿನ ಜನತೆಯನ್ನು ಕಾಡುತ್ತಿದೆ. ಇಂತಹ ಅಪಾಯ ತಂದೊಡ್ಡುವ ಸಾಮ್ರಾಜ್ಯಶಾಹಿಯ ಆಕ್ರಮಣಕೋರತನ ಮತ್ತು ಯುದ್ಧಗಳ ಬಗ್ಗೆ ಇಡೀ ಜಗತ್ತಿನ ಜನತೆಯನ್ನು ಎಚ್ಚರಿಸಿ ಶಾಂತಿ ಸ್ಥಾಪನೆಗೆ ಅಣಿ ನೆರೆಸುವುದು ತುರ್ತು ಅಗತ್ಯ. 2014ರ ಇಡೀ ವರ್ಷ ಈ ಶಾಂತಿಗಾಗಿ ಪ್ರಚಾರಕ್ಕೆ ತೊಡಗಬೇಕು ಎಂದು ಅಂತರ್ರಾಷ್ಟ್ರೀಯ ಸಭೆಯೊಂದು ಇತ್ತೀಚೆಗೆ ಕರೆ ನೀಡಿತು.



ಇದು ಕಮ್ಯೂನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ 15ನೇ ಅಂತರ್ರಾಷ್ಟ್ರೀಯ ಸಭೆಯ ಕರೆ. ಈ ಸಭೆಯಲ್ಲಿ 61 ದೇಶಗಳ 77 ಕಮ್ಯೂನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳು ಭಾಗವಹಿಸಿದ್ದವು. ಸಭೆಯಲ್ಲಿ ಭಾಗವಹಿಸಲಾಗದ 14 ಪಕ್ಷಗಳು ಸಂದೇಶ ಕಳಿಸಿದ್ದವು. ಈ ಸಭೆ ಪೋರ್ಚುಗಲ್ಲಿನ ರಾಜಧಾನಿ ಲಿಸ್ಬನಿನಲ್ಲಿ ನವಂಬರ್ 7 ರಿಂದ 10 ರವರೆಗೆ ಜರುಗಿತು. ಶಾಂತಿಗಾಗಿ ಹೋರಾಟ ಸಮಾಜವಾದಕ್ಕಾಗಿ ಹೋರಾಟದ ಜತೆ ನಿಕಟ ಸಂಬಂಧ ಹೊಂದಿದೆ ಎಂಬುದನ್ನು ಈ ಶಾಂತಿ ಪ್ರಚಾರ ಒತ್ತಿ ಹೇಳಬೇಕೆಂದು ಸಭೆ ನಿರ್ಧರಿಸಿತು. ಈ ಶಾಂತಿ ಪ್ರಚಾರ, ಎಲ್ಲಾ ಪಕ್ಷಗಳು ಒಪ್ಪಿಕೊಂಡ ಜಗತ್ತಿನಾದ್ಯಂತ ಸಂಯೋಜಿತ ಜಂಟಿ ಕಾರ್ಯಕ್ರಮಗಳಲ್ಲಿ, ಮೊದಲನೆಯದ್ದು ಆಗಿತ್ತು. ಮುಂದಿನ ಫೆಬ್ರುವರಿ 15ರಂದು ಜರ್ಮನಿಯ ಗಡಿ ಪಟ್ಟಣವೊಂದರಲ್ಲಿ (ಜರ್ಮನಿ, ನೆದರ್ ಲ್ಯಾಂಡ್ಸ್, ಬೆಲ್ಜಿಯಂ, ಲಕ್ಸಂಬರ್ಗ್ ಈ ದೇಶಗಳ) ನಾಲ್ಕು ಕಮ್ಯೂನಿಸ್ಟ್ ಪಕ್ಷಗಳು ಶಾಂತಿ ಪ್ರಚಾರ ಕಾರ್ಯಕ್ರಮ ಆರಂಭಿಸಲಿವೆ.

ಸಭೆ ನಿರ್ಧರಿಸಿದ ಇತರ ವಿಶ್ವವ್ಯಾಪಿ ಜಂಟಿ ಕಾರ್ಯಕ್ರಮಗಳು :

- ಸಾಮ್ರಾಜ್ಯಶಾಹಿ ಮಿಲಿಟರಿ ವ್ಯೂಹದ ಇತ್ತೀಚಿನ ಹಂತವನ್ನು ಆರಂಭಿಸಿದ ಯುಗೊಸ್ಲಾವಿಯದ ಮೇಲೆ ನಾಟೋ ಮಿಲಿಟರಿ ಆಕ್ರಮಣದ 15ನೇ ವಾರ್ಷಿಕವನ್ನು ನೆನಪಿಸಿಕೊಳ್ಳುವುದು
- ಅಭಿವೃದ್ಧಿಶೀಲ ದೇಶಗಳ ಮೇಲೆ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಣಾಮದ ಬಗ್ಗೆ ಅಂತರ್ರಾಷ್ಟ್ರೀಯ ಸಮ್ಮೇಳನ
- ಲ್ಯಾಟಿನ್ ಅಮೆರಿಕದ ಜನತೆಯ ಹೋರಾಟಗಳ (ಅದರಲ್ಲೂ ವಿಶೇಷವಾಗಿ ಸಮಾಜವಾದಿ ಕ್ಯೂಬಾ, ಬೊಲಿವಾರಿಯನ್ ವೆನೆಜುವೆಲಾ, ಕೊಲಂಬಿಯಾ) ಜತೆಗೆ ಸೌಹಾರ್ದತೆಗೆ ಅಂತರ್ರಾಷ್ಟ್ರೀಯ ಪ್ರಚಾರ
- ಕಾರ್ಯಾಗಾರವೊಂದರಲ್ಲಿ ಸೈದ್ಧಾಂತಿಕ ದಾಳಿ ಹಾಗೂ ಸಾಮೂಹಿಕ ಮಾಧ್ಯಮಗಳ ಪಾತ್ರದ ಬಗ್ಗೆ ಚರ್ಚೆ; ಮತ್ತು ಸಾಮೂಹಿಕ ಸಂವಹನದಲ್ಲಿ ಪಕ್ಷಗಳ ಅನುಭವಗಳ ವಿನಿಮಯ
- ಮಾರ್ಚ್ 8 (ಮಹಿಳಾ ದಿನ) ರಂದು ರಾಷ್ಟ್ರೀಯ ದಮನಕ್ಕೆ ಒಳಗಾದ ಮತ್ತು ದುಡಿಯುವ ಮಹಿಳೆಯರ ಮೇಲೆ ಬಂಡವಾಳಶಾಹಿ ಬಿಕ್ಕಟ್ಟಿನ ಮತ್ತು ಸಾಮ್ರಾಜ್ಯಶಾಹಿಯ ಬಹುರೂಪಿ ದಾಳಿಗಳ ಪರಿಣಾಮದ ಮೇಲೆ ಒತ್ತು ನೀಡುವ ಸೌಹಾರ್ದ ಹೋರಾಟಗಳು
- ಮೇ 1 (ಕಾರ್ಮಿಕ ದಿನ) ರಂದು ಸಾಮೂಹಿಕ (ಅದರಲ್ಲೂ ಯುವಜನರಲ್ಲಿ ವ್ಯಾಪಕ) ನಿರುದ್ಯೋಗದ ಕಾರಣಗಳನ್ನು ಬಿಚ್ಚಿಡುವ; ಕಾರ್ಮಿಕರ ಟ್ರೇಡ್ ಯೂನಿಯನ್ ಹಾಗೂ ಜನತೆಯ ಸಾಮಾಜಿಕ–ಆರ್ಥಿಕ ಹಕ್ಕುಗಳನ್ನು ರಕ್ಷಿಸುವ; ಬಂಧಿತ ಟ್ರೇಡ್ ಯೂನಿಯನ್ ನಾಯಕರನ್ನು ಬಿಡುಗಡೆ ಮಾಡುವ – ಹೋರಾಟಗಳಿಗೆ ಒತ್ತು
- ವರ್ಣಬೇಧ, ಅನ್ಯದ್ವೇಷವಾದ, ಫ್ಯಾಸಿಸಂಗಳ ವಿರುದ್ಧ ಕಾರ್ಯಾಚರಣೆಗಳು; ಕಮ್ಯೂನಿಸಂ ಮತ್ತು ಫ್ಯಾಸಿಸಂಗಳನ್ನು ಸಮೀಕರಿಸುವ ಇತಿಹಾಸ ಪುನಃ ಬರೆಯುವ ಕಮ್ಯೂನಿಸ್ಟ್-ವಿರೋಧಿ ಪ್ರಚಾರದ ವಿರುದ್ಧ ಹೋರಾಟಗಳು
- ಕಮ್ಯೂನಿಸ್ಟ್ ಪಕ್ಷಗಳ ಮೇಲೆ ಪೂರ್ತಿ ನಿಷೇಧ ಸೇರಿದಂತೆ ಹಲವು ತರದ ನಿರ್ಬಂಧಗಳ ವಿರುದ್ಧ ಕಾರ್ಯಾಚರಣೆ
- ಕಮ್ಯೂನಿಸ್ಟ್ ಅಂತರ್ರಾಷ್ಟ್ರೀಯದ ರಚನೆಯ (ಮಾರ್ಚ್ 1919) 95ನೇ ವಾರ್ಷಿಕ ಮತ್ತು ಲೆನಿನ್ ನಿಧನದ 90ನೇ ವಾರ್ಷಿಕ
- ಅರಬ್ ಮತ್ತು ಮಧ್ಯಪ್ರಾಚ್ಯ (ವಿಶೇಷವಾಗಿ ಪ್ಯಾಲೆಸ್ಟೈನ್, ಸಿರಿಯಾ) ದೇಶಗಳ ಜನತೆಯ ಸಾಮಾಜಿಕ ಮತ್ತು ರಾಷ್ಟ್ರೀಯ ಹೋರಾಟಗಳ ಜತೆ ಸೌಹಾರ್ದ ಬೆಸೆಯುವ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣ
- ಸಿರಿಯಾ ಮತ್ತು ಇರಾನ್‌ಗಳಲ್ಲಿ ಸಾಮ್ರಾಜ್ಯ... ಮಧ್ಯಪ್ರವೇಶದ ವಿರುದ್ಧ ಮತ್ತು ಪ್ಯಾಲೆ... ಸರ್ಕಾರಕ್ಕೆ ಮಾನ್ಯತೆಗೆ ಒತ್ತಾಯಿಸಿ ಪ್ರಚಾ...
- ಸಾಮ್ರಾಜ್ಯಶಾಹಿಯ ವಿರುದ್ಧ ವ್ಯಾಪಕ ರಂ... ಬೆಳೆಸಲು ಅಂತರ್ರಾಷ್ಟ್ರೀಯ ಸಾಮ್ರಾಜ್ಯ... ವಿರೋಧಿ ಸಾಮೂಹಿಕ ಸಂಘಟನ... (ವಿಶ್ವ ಟ್ರೇಡ್ ಯೂನಿಯನ್ ಫೆಡರೇ... ಡಬ್ಲ್ಯೂ.ಎಫ್.ಟಿ.ಯು.; ವಿಶ್ವ ... ಮಂಡಳಿ ಡಬ್ಲ್ಯೂ.ಪಿ.ಸಿ.; ವಿಶ್ವ ಪ್ರಜಾಸ... ಯುವ ಫೆಡರೇಶನ್ –ಡಬ್ಲ್ಯೂ.ಎಫ್.ಡಿ... ಅಂತರ್ರಾಷ್ಟ್ರೀಯ ಮಹಿಳಾ ಪ್ರಜಾಸ... ಫೆಡರೇಶನ್ –ಡಬ್ಲ್ಯೂ.ಐ.ಡಿ.ಎಫ್) ಪ್ರೋ... ಮತ್ತು ಬೆಂಬಲ.

ಏಶ್ಯಾ ಟ್ರೇಡ್ ಯೂನಿಯನ್‌ಗಳ 'ಮಲೇಶ್ಯಾ ಘೋಷಣೆ'

ವಿಶ್ವ ಟ್ರೇಡ್ ಯೂನಿಯನ್ ಫೆಡರೇಶನ್ (ಡಬ್ಲ್ಯೂ.ಎಫ್.ಟಿ.ಯು.)ನ ಏಶ್ಯಾ–ಪೆಸಿಫಿಕ್ ಪ್ರಾದೇಶಿಕ (ಎ.ಪಿ.ಆರ್.) ಸಭೆ ಅಕ್ಟೋಬರ್ 25–26ರಂದು ನಡೆಯಿತು. ಮಲೇಶ್ಯಾದಲ್ಲಿ ಈ ಸಭೆ ನಡೆದಿದ್ದು ವಿಶೇಷವಾಗಿತ್ತು. ಮಲೇಶ್ಯಾದ ಬ್ಯಾಂಕಿಂಗ್ ಯೂನಿಯನುಗಳ ಕೇಂದ್ರ ಡಬ್ಲ್ಯೂ.ಎಫ್.ಟಿ.ಯು.ಗೆ ಸೇರಿದ್ದು ಈ ಸಭೆಯ ಆತಿಥ್ಯ ವಹಿಸಿದ್ದು ವಿಶೇಷವಾಗಿತ್ತು. ಇದು ಏಶ್ಯಾ–ಪೆಸಿಫಿಕ್ ಪ್ರದೇಶದಲ್ಲಿ ಡಬ್ಲ್ಯೂ.ಎಫ್.ಟಿ.ಯು. ವಿಸ್ತರಣೆಯ ಮೊದಲ ದೊಡ್ಡ ಪ್ರಯತ್ನವಾಗಿದೆ. ಸಭೆಯ ವಿಷಯ 'ಜೀವನೋಪಾಯದ ಹಕ್ಕು' ಆಗಿತ್ತು. ಬಾಂಗ್ಲಾದೇಶ, ಶ್ರೀಲಂಕಾ, ನೇಪಾಳ, ಇಂಡೋನೇಶ್ಯಾ, ವಿಯೇಟ್ನಾಂ, ಫಿಲಿಪ್ಪೀನ್ಸ್, ಇರಾನ್, ಕಝಾಕಿಸ್ತಾನ ಸೇರಿದಂತೆ 15 ದೇಶಗಳ ಟ್ರೇಡ್ ಯೂನಿಯನ್ ಕೇಂದ್ರೀಯ ಸಂಘಟನೆಗಳ ಮತ್ತು ಅಂತರ್ರಾಷ್ಟ್ರೀಯ ಟ್ರೇಡ್ ಯೂನಿಯನುಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತದ ಸಿಐಟಿಯು, ಎಐಟಿಯುಸಿ ಮತ್ತಿತರ ಎರಡು ಟ್ರೇಡ್ ಯೂನಿಯನ್ ಕೇಂದ್ರಗಳ; ಹಾಗೂ ಕಟ್ಟಡ ನಿರ್ಮಾಣ, ಶಕ್ತಿ ಮತ್ತು ಹಣಕಾಸು ಕ್ಷೇತ್ರದ ಅಂತರ್ರಾಷ್ಟ್ರೀಯ ಟ್ರೇಡ್ ಯೂನಿಯನುಗಳ ಅಂಗ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಭೆಯ ಉದ್ಘಾಟನಾ ಅಧಿವೇಶನ... ಉದ್ದೇಶಿಸಿ ಪ್ರಧಾನ ಕಾರ್ಯದರ್ಶಿ ಜಾ... ಮಾವ್ರಿಕೊಸ್ (ಫ್ರಾನ್ಸ್) ಮತ್ತು ಸಹಾ... ಪ್ರಧಾನ ಕಾರ್ಯದರ್ಶಿ ಸ್ವದೇಶ್ ದೇವ್ ರಾ... (ಸಿಐಟಿಯು) ಸೇರಿದಂತೆ ಪ್ರಮುಖ ಡಬ್... ಎಫ್.ಟಿ.ಯು. ನಾಯಕರು ಮಾತನಾಡಿ... ಏಶ್ಯಾ–ಪೆಸಿಫಿಕ್ ಪ್ರಾದೇಶಿಕ (ಎ.ಪಿ.ಆ... ಕಾರ್ಯದರ್ಶಿ ಮಹಾದೇವನ್ (ಎಐಟಿಯ... ವರದಿಯನ್ನು ಮಂಡಿಸಿದರು. 50ಕ್ಕೂ ... ಪ್ರತಿನಿಧಿಗಳು ವರದಿಯ ಮೇಲೆ ಮತ್ತು ... ದೇಶ–ಕ್ಷೇತ್ರಗಳ ಹೋರಾಟಗಳು ಎದುರಿಸಬೇ... ದಮನಗಳ, ಒಟ್ಟಾರೆ ಅನುಭವದ ಕ್ರೋಢೀಕ... ಮತ್ತು ಕಾರ್ಮಿಕರ ಅಂತರ್ರಾಷ್ಟ್ರೀಯ ... ಪ್ರತಿನಿಧಿಸುವ ಡಬ್ಲ್ಯೂ.ಎಫ್.ಟಿ. ಮತ್ತು ಅ... ಪ್ರಾದೇಶಿಕ ಸಂಘಟನೆಗಳನ್ನು ಗಟ್ಟಿಗೊಳಿ... ಅಗತ್ಯದ ಬಗ್ಗೆ ವಿವರವಾಗಿ ಮಾತನಾಡಿದ... ಮಹಾದೇವನ್ 15 ಅಂಶಗಳ ಹಕ್ಕೊತ್ತಾಯ ... ಮತ್ತು ಕ್ರಿಯಾ ಯೋಜನೆಯನ್ನು ಒಳಗೊ... 'ಮಲೇಶ್ಯಾ ಘೋಷಣೆ'ಯನ್ನು ಮಂಡಿಸಿದರು... ಚರ್ಚೆಯ ನಂತರ ಕೆಲವು ತಿದ್ದುಪಡಿಗಳೊಂ... 'ಮಲೇಶ್ಯಾ ಘೋಷಣೆ'ಯನ್ನು ಅಂಗೀಕರಿಸಿ...

ಗೃಹ ಪ್ರವೇಶದ ಸಂತೋಷ 'ಜನಶಕ್ತಿ'ಗೆ ಕೊಡುಗೆ

ಎಸ್. ಲಕ್ಷ್ಮಣ ಕುಮಾರ್, ಸಿಪಿಐ(ಎಂ)ನ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರು. ಬೆಂಗಳೂರಿನ ಬೇಗೂರು, ಮೈಕೋಲೇಔಟ್‌ನಲ್ಲಿ ಇವರ ಕುಟುಂಬವು ಕಟ್ಟಿಸಿರುವ ಹೊಸಮನೆಯ ಗೃಹಪ್ರವೇಶ ಸಮಾರಂಭವು ಇದೇ ನವೆಂಬರ್ 14, 2013 ರಂದು ನಡೆದಿದೆ. ಈ ಸಂತೋಷದ ಸಂದರ್ಭದಲ್ಲಿ ಅವರು 'ಜನಶಕ್ತಿ' ಪತ್ರಿಕೆಗೆ 1,000 ರೂ.ಗಳ ಕೊಡುಗೆ ನೀಡಿದ್ದಾರೆ. ಅದೇ ರೀತಿ ಅವರು ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಪೂರ್ಣಾವಧಿ ಕಾರ್ಯಕರ್ತರ ನಿಧಿಗೆ 1,000 ರೂ.ಗಳ ಕಾಣಿಕೆ ನೀಡಿದ್ದಾರೆ. 'ಜನಶಕ್ತಿ' ಅವರನ್ನು ಅಭಿನಂದಿಸುತ್ತದೆ.

–ಸಂ

ಶಾಪ

ಧರಗಿಳಿದು ಬಗೆಬಗೆದು
ಇಣುಕಿಣುಕಿ ನೋಡಿದರು ಏನಿರುವುದೆಂದು
ಚೆನ್ನದಾ ಬೆಲೆ ಮಣ್ಣಿಗಿರುವ ಈ ನಾಡು
ದಂಡು ಕೋರರ ದಾಳಿಗೆ ನಲುಗಿ ಹೋದರೇನೆಂದು.
ಬಾಚಿ ಬಾಚಿ ದೋಚಿಟ್ಟುಕೊಂಡರು.

ದುರಾಸೆಗೆ ದುಂಬಾಲು ಬಿದ್ದು
ಬುಕ್ಕ ಲೆಕ್ಕಗಳ ಕಿತ್ತು ತೂರಿದರು
ಕೋಟಿ ಕೋಟಿ ಕೊಳ್ಳೆ ಹೊಡೆದು ಮುಕ್ಕಿಕೊಂಡರು
ಕರುನಾಡು ಕಿತ್ತಿದ ಕೈಗಳಿಗಿನ್ನು ಕೋಳದ ಸಂಕೋ...

ಧಣಿಗಳೇ ನಿಮ್ಮ ಕೈ ಕೊಳೆ ಮೆತ್ತಿಕೊಂಡಿದೆ ಪಾಪ
ಬೆನ್ನಿಗಂಟಿದೆ ನಿಮಗೆ ಮಣ್ಣಿನ ಶಾಪ
ಹೆಣ್ಣು ಹೊನ್ನು ಮಣ್ಣಿನ ಋಣವು
ಗಣಿಯು ಕಾಯುತಿದೆ ನಿಮ್ಮ
ಕೈ ಬೀಸಿ ಕರೆಯುತಿದೆ, ಸಾವು ಸಮೀಪಿಸುತಿದೆ
ಮುಕ್ತಿಗೆಲ್ಲಿದೆ ಸಮಯ..?


–ಕೆ.ಸುರೇಶ್ ಚೌವ್ಹಾಣ್. ಹೊಸಪೇ...

...ಾದ ಮೆರಿಟ್‌ನ ರೆಕ್ಕೆ....

...2 ರಿಂದ

...ಗಳೇ ಒಳ್ಳೆಯದು ಎನುವಂತಾಯಿತು. ...ನವೆಂದರೆ ಇಂಗ್ಲಿಷ್. ಎಂದರೆ ಬಹಳಷ್ಟು ...ತಿಗಳ ಜನಕ್ಕೆ ವಿಜ್ಞಾನ ಕಲಿಕೆಯ ... ಎಂದೂ ಆಗಿ ಹೋಯಿತು. ಇದ–...ಳ ಜಾತಿಗಳ ಜನರಿಗೆ ಆದ ಅಪಾರ ...ನ್ನು ಅಂದಾಜು ಮಾಡಬಹುದೇ? ಈ ...ಗಗಳಲ್ಲಿ ಅಪಾರ ಪರಿಣತಿ ಪಡೆದ ಜನ ...ದಾಯವನ್ನು ದೂರ ಇಟ್ಟು ಅದರ ಗಂಧ ...ಯೂ ಇಲ್ಲದ ಜನ ವಿಜ್ಞಾನ–ತಂತ್ರಜ್ಞಾನ ...ಲ್ಲಿ ಮೆರೆಯುವಂತಾಗಿದೆ. ಇಲ್ಲದಿದ್ದರೆ ... ಚಂದ್ರನ ಅಂಗಳಕ್ಕೆ, ಮಂಗಳನ ಅಂಗಳಕ್ಕೆ ...ಗ್ರಹಗಳನ್ನು ಉಡಾಯಿಸುವ ಇಸ್ರೋಗಳಲ್ಲಿ, ...ತ ವಿಜ್ಞಾನ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ... ಈ ಕೆಳಜಾತಿ ಜನ ಸಮುದಾಯಗಳ ಜನರು ...ಜಿಸುವುದನ್ನು ನೋಡಬಹುದಾಗಿತ್ತು. ... ಕೇವಲ ಅವರಿಗೆ ಆದ ನಷ್ಟ ಮಾತ್ರವಲ್ಲ, ...ಕ್ಕೆ ಆದ ದೊಡ್ಡ ನಷ್ಟ. ಈ ನಷ್ಟದಿಂದ ...ತ ಭಾಷೆಯೇ ಕುಗ್ಗಿ ಹೋಗುವ ಅಪಾಯ ...ಾಗುತ್ತಿದೆ. ಅಷ್ಟೇ ಅಲ್ಲ ನಮ್ಮ ದೇಶವನ್ನು, ...ವನ್ನು ಕಟ್ಟುವ ಕೆಲಸಕ್ಕೆ, ಭಾರತದ ವಿಜ್ಞಾನ–... ಸಂಶೋಧನೆಗೆ ಕೂಡ ದೊಡ್ಡ ಪೆಟ್ಟು ...ದೆ.

...ನ್ನಡದಲ್ಲಿ ವಿಜ್ಞಾನದ ತತ್ವಗಳು, ...ಮಗಳನ್ನು, ತಂತ್ರಜ್ಞಾನದ ಉಪಕರಣಗಳನ್ನು ವಿವರಿಸಲು ಪದಗಳಿಲ್ಲ ಹೊಸ ಪದಗಳನ್ನು ಸೃಷ್ಟಿಸಬೇಕು. ಅದಕ್ಕೆ ಸಂಸ್ಕೃತವೇ ಆಧಾರ ಎಂಬ ವಾದವನ್ನು ಕಳೆದ ಐದು ದಶಕಗಳಿಂದಲು ಮಾಡುತ್ತಾ ಬಂದಿದ್ದಾರೆ. ಅವರೆಲ್ಲರೂ ಕನ್ನಡದಲ್ಲಿ ಮೊತ್ತ ಮೊದಲ ಬಾರಿಗೆ ದುಡಿಮೆಯಲ್ಲಿ



ನಿರತರಾದ ಕೆಳ ಜಾತಿಗಳಿಗೆ ದನಿ ನೀಡಿದ ವಚನ ಸಾಹಿತ್ಯದ ಅದರಲ್ಲಿಯೂ ಕೆಳ ಜಾತಿ ವಚನಕಾರರ ವಚನಗಳ ಕಡೆಗೆ ಕಣ್ಣೆತ್ತಿ ನೋಡಿಯೂ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಕೀಳುಜಾತಿಗಳ ಭಾಷೆ ವಿಜ್ಞಾನದಂತಹ ಉನ್ನತ ವಿಚಾರಗಳಿಗೆ ವಾಹಕವಾಗುವುದು ಸಾಧ್ಯವೇ ಇಲ್ಲ ಎಂಬುದು ಅವರ ಮೇಲ್ಜಾತಿ ಮೇಲರಿಮೆಯ ತೀರ್ಮಾನ. ಹೀಗೆ ಜಾತಿ ವ್ಯವಸ್ಥೆ ನಮ್ಮ ಜ್ಞಾನ ವ್ಯವಸ್ಥೆಯನ್ನು ಕೆಡಿಸಿ ನಮ್ಮ ಭಾಷೆಯ ಬೆಳವಣಿಗೆ, ಸಮಾಜದ ಬೆಳವಣಿಗೆಗೆ ಹಲವು ರೀತಿಯ ಅಪಾರ ನಷ್ಟಗಳನ್ನುಂಟು ಮಾಡಿದೆ.

"ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೇಳ ಮೆಟ್ಟಿದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ
ನುಂಗಿತ್ತು
ಈ ಸೀರೆಯ ನೆಯ್ದವ ನಾನೋ ನೀನೋ
ರಾಮನಾಥ"

-- ಜೇಡರ ದಾಸಿಮಯ್ಯ

"ನಾ ತಿರುಹುವ ರಾಟೆಯ ಕುಲಜಾತಿಯ
ಕೇಳಿರಣ್ಣಾ
ಅಡಿಯ ಹಲಗೆ ಬ್ರಹ್ಮ; ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ;
ರುದ್ರನ ಬೆಂಬಳಿಯವೆರಡು ಸೂತ್ರದ ಕರ್ಣ
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ
ತಿರುಹಲಾಗಿ
ಸುತ್ತಿತ್ತು ನೂಲು, ಕದಿರು ತುಂಬಿತ್ತು,
ರಾಟೆಯ ತಿರುಹಲಾರೆ ಎನ್ನ ಗಂಡ ಕುಟ್ಟಿಹ
ಇನ್ನೇವೆ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ"

-- ಕದಿರ ರೆಮ್ಮವ್ವೆ

ಇಂತಹ ನೂರಾರು ವಚನಗಳ ಉದಾಹರಣೆ ನೀಡಬಹುದು ಆದರೆ ಕೇವಲ ನೇಯ್ಗೆ, ಇಂದಿನ ಭಾಷೆಯಲ್ಲಿ 'ಟೆಕ್ಸ್ ಟೈಲ್ ಟೆಕ್ನಾಲಜಿ'ಗೆ ಸಂಬಂಧಿಸಿದ ವಚನಗಳ ಉದಾಹರಣೆ ಮಾತ್ರ ನೀಡಲಾಗಿದೆ. ಇವುಗಳಲ್ಲಿ ಈ ತಂತ್ರಜ್ಞಾನಕ್ಕೆ ಅವಶ್ಯವಾದ ಪರಿಭಾಷೆ ಇದೆ. ಹೊಸ ಪದಗಳನ್ನು ಕಟ್ಟಲು ಅಡಿಪಾಯವೂ ಇದೆ.

ಮತ್ತೊಂದು ಉದಾಹರಣೆಯನ್ನು ಇಲ್ಲಿ ನೀಡಬಹುದು. ಕನ್ನಡ ಪದಗಳನ್ನು ಹುಡುಕುತ್ತಾ ದೇ.ಜವರೇ ಗೌಡರು ನಾಡು ಸುತ್ತುತ್ತಿದ್ದರಂತೆ. ಆಗ ಉತ್ತರ ಕರ್ನಾಟಕದಲ್ಲೆಲ್ಲೋ ರೈತನೊಬ್ಬ ತನ್ನ ಎತ್ತಿನ ಬಂಡಿಯನ್ನು ನಿಲ್ಲಿಸಲು ಬಳಸುವ ಮರದ ತುಂಡಿಗೆ 'ಅಡರ್' ಎಂಬ ಪದವನ್ನು ಬಳಸಿದನಂತೆ. ಅದನ್ನು ಕೇಳಿದ ಕೂಡಲೆ ಸಂತೋಷದಿಂದ ಈಗಲೀಗ ನನಗೆ ಒಂದು ಆಧುನಿಕ ಸಾರಿಗೆ ವಾಹನದ ಬಿಡಿ ಭಾಗಗಳನ್ನು ಅಚ್ಚ ಕನ್ನಡದಲ್ಲಿ ವಿವರಿಸಲು ಬೇಕಾದ ಎಲ್ಲ ಪದಗಳು ಸಿಕ್ಕವು ಎಂದು ಕೂಗು ಹಾಕಿದರಂತೆ. ಹಂಪಿ ಕನ್ನಡ ವಿಶ್ವ ವಿದ್ಯಾನಿಲಯವು ವಿವಿಧ ವೃತ್ತಿ ಪದಕೋಶಗಳನ್ನು ಹೊರತರುವ ಕೆಲಸಕ್ಕೆ ಕೈ ಹಾಕಿತ್ತು. ಆದರೆ ಅದರ ಫಲ ಶಿಕ್ಷಣದ ಭಾಷೆಯಾಗಿ ಕನ್ನಡಿಗರಿಗೆ ದೊರಕುವುದೆಂತು ? ಯಾವಾಗ ?

ಇದು ಕನ್ನಡದಲ್ಲಿಯೇ ಕಲಿಯುವ ಸಮಸ್ಯೆಯಾದರೆ ಕನ್ನಡ ಮಾತೃಭಾಷೆಯಲ್ಲದ ತುಳು, ಕೊಡವ, ಕೊಂಕಣಿ, ಉರ್ದು, ತೆಲುಗು, ತಮಿಳು ಮಾತನಾಡುವ ಬಡ, ಕೆಳಜಾತಿಯ ಜನರ ಶಿಕ್ಷಣದ ಪಾಡೇನು ?

...ಕಾಸು ಆಯೋಗ....

10 ರಿಂದ

...ರ್ಯವ್ಯಾಪ್ತಿಯನ್ನು ಎರಡೂ ...ಕ್ಷಗಳು ಕುಳಿತು ಸಮಾಲೋಚಿಸಿ ...ರ್ಧರಿಸುವಂತಿರಬೇಕು. ಇದನ್ನು ಅಂತರ‍್ರಾಜ್ಯ ...ಂಡಳಿ ಅನುಮೋದನೆ ಮಾಡಬೇಕು.

... ಆಯೋಗ ಕೇಂದ್ರ ಮತ್ತು ರಾಜ್ಯಗಳ ...ಷಯದಲ್ಲಿ ತಟಸ್ಥ ನಿಲುಮೆ ...ಳುವಂತಿರಬೇಕು.

...ೀಲಿನದು ಒಪ್ಪಿತವಾದಲ್ಲಿ ರಾಜ್ಯಗಳ ಆಡಳಿತ ... ಸಾಲ ಮರುಪಾವತಿ ವೆಚ್ಚ, ಸಂಬಳ ಮತ್ತು ... ವೇತನ ಖರ್ಚುಗಳನ್ನು ರಾಜ್ಯಗಳ ಬದ್ಧ ...ಗಳೆಂದು ಪರಿಗಣಿಸಬೇಕು.

...ತ್ತಿರುವ ರಾಜ್ಯಗಳ ಹೊರೆ

...ನ ದಿನಗಳಲ್ಲಿ ಕೇಂದ್ರದ ಯೋಜನಾ ...ನ್ನು ಮೊತ್ತವಾಗಿ ನೀಡುವ ಬದಲು ಕೇಂದ್ರ ...ೋಜಿತ ಕಾರ್ಯಕ್ರಮಗಳ ರೂಪದಲ್ಲಿ ...ಾಗುತ್ತಿದೆ. ಹೀಗೆ ಮಾಡುವುದರ ಮೂಲಕ ...ರವಿನಲ್ಲಿ ಕಡಿತ ಮಾಡಿ ರಾಜ್ಯಗಳ ಪಾಲನ್ನು ...ಲಾಗುತ್ತಿದೆ. ಹೀಗೆ ಒಟ್ಟಾರೆ ಸಂಪನ್ಮೂಲ ...ವಣೆ ಶೇ.28 ರಷ್ಟು ಇದ್ದದ್ದು ಶೇ. ... ಇಳಿದಿದೆ. ಉದಾಹರಣೆಗೆ: ಸರ್ವ ಶಿಕ್ಷಣ ...ಯಾನದಲ್ಲಿ ರಾಜ್ಯಗಳ ಪಾಲು ಶೇ. 25 ಇದ್ದದ್ದು ಈಗ ಶೇ. 50 ಕ್ಕೆ ಏರಿಬಿಟ್ಟಿದೆ!! ...012–13 ರ ಸಾಲಿನಲ್ಲಿ 1.3 ಲಕ್ಷ ಕೋಟಿ ...ಪಾಯಿಗಳನ್ನು ರಾಜ್ಯಗಳ ಬಜೆಟ್ಟಿನ ...ರಗೇ ಹರಿಸಲಾಗಿದೆ. ಈ ಮೊತ್ತ ...ಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ...ಂದ್ರದ ಯೋಜನಾ ನೆರವಿನ ಮೊತ್ತಕ್ಕಿಂತ ...ಚ್ಚಿನದಾಗಿದೆ.

...ಜ್ಯಗಳ ಮೇಲೆ ಷರತ್ತುಗಳನ್ನು ಹೇರುವುದು ...ನ್ಯವಾಗಿಬಿಟ್ಟಿದೆ: ಜವಹರಲಾಲ್ ...ು ನಗರ ಅಭಿವೃದ್ಧಿ ಯೋಜನೆಯಡಿ ...ರವು ಪಡೆಯಲು ರಾಜ್ಯ ಸರ್ಕಾರಗಳೂ ...ಂಪ್ ಶುಲ್ಕ ಕಡಿತಗೊಳಿಸುವಂತೆ ನಿರ್ದೇಶಿಸಲಾಯಿತು. ಇದು ರಾಜ್ಯ ಸರ್ಕಾರಗಳ ಅಧಿಕಾರದಲ್ಲಿ ನೇರ ಹಸ್ತಕ್ಷೇಪ. ಯಾಕೆಂದರೆ ಇಂತಹ ನಿರ್ಧಾರಗಳನ್ನು ರಾಜ್ಯ ವಿಧಾನಸಭೆಗಳು ಕೈಗೊಳ್ಳುತ್ತವೆ.

- ಪ್ರತಿ ರಾಜ್ಯಕ್ಕೆ (ಅದು ಚಿಕ್ಕದಿರಲಿ ಅಥವಾ ದೊಡ್ಡ ದಿರಲಿ) ಒಂದು ಕನಿಷ್ಠ ಗಾತ್ರದ ಆಡಳಿತಯಂತ್ರ ಬೇಕಾಗುತ್ತದೆ. ವೇತನ ಪರಿಷ್ಕರಣೆ ಆದಾಗ ರಾಜ್ಯಗಳು ಚಿಕ್ಕವಿರಲಿ ದೊಡ್ಡದಿರಲಿ ಇದರ ಪರಿಣಾಮವಾಗುತ್ತದೆ. ದೊಡ್ಡ ಒಟ್ಟುತ್ಪಾದನೆಯ ರಾಜ್ಯ ಇದನ್ನು ತಾಳಿಕೊಳ್ಳಬಲ್ಲುದು. ಆದರೆ ಚಿಕ್ಕ ಒಟ್ಟುತ್ಪಾದನೆಯ ರಾಜ್ಯ ಕಷ್ಟ ಅನುಭವಿಸುತ್ತದೆ. ಆದ್ದರಿಂದ ಇಂತಹ ಚಿಕ್ಕ ರಾಜ್ಯಗಳಿಗೆ ಹೆಚ್ಚಿನ ನೆರವಿನ ಅಗತ್ಯ ಉಂಟಾಗುತ್ತದೆ.
- ದೇಶ ಜಾಗತಿಕ ಮಟ್ಟದಲ್ಲಿ ಹಲವು ಒಪ್ಪಂದಗಳಿಗೆ ಸಹಿ ಹಾಕುತ್ತದೆ. ರಾಜ್ಯ ಸರ್ಕಾರಗಳ ಪಾತ್ರ ಒಪ್ಪಂದ ಮಾಡಿಕೊಳ್ಳುವುದರಲ್ಲಿ ಇರುವುದಿಲ್ಲ. ಆದರೆ ರಾಜ್ಯ ಸರ್ಕಾರಗಳು ಈ ಒಪ್ಪಂದಗಳ ಬೆಲೆ ತೆರಬೇಕಾಗುತ್ತದೆ. ಅಂ–ದರೆ ಪರಿಣಾಮಗಳಿಗೆ ತುತ್ತಾಗಬೇಕಾಗುತ್ತದೆ. ಉದಾಹರಣೆಗೆ ವಿಶ್ವ ವ್ಯಾಪಾರ ಒಪ್ಪಂದ. ಇದರ ಪರಿಣಾಮಗಳು ಜನತೆಯ ಮೇಲೆ/ ರಾಜ್ಯಗಳ ಮೇಲೆ ಉಂಟಾಗುತ್ತದೆ. ಇಂತಹ ಸಂದರ್ಭಗಳಲ್ಲಿ ರಾಜ್ಯಗಳಿಗೆ ಕೇಂದ್ರ ಸರ್ಕಾರ ಅವಶ್ಯ ನೆರವು ನೀಡಬೇಕಾಗುತ್ತದೆ. ಕೇಂದ್ರ ಇದನ್ನು ಮಾಡುತ್ತಿಲ್ಲ.

ಹಣಕಾಸು ಹಂಚಿಕೆಯಲ್ಲಿ ಅಸಮತೆ

ಕೇಂದ್ರ ಮತ್ತು ರಾಜ್ಯಗಳ ನಡುವೆ ಹಣಕಾಸು ಹಂಚಿಕೆಯ ಅಸಮತೆ ಇದೆ. ಉದಾಹರಣೆಗೆ 2011–12ರ ಬಜೆಟ್ಟಿನ ಅಂದಾಜಿನ ಪ್ರಕಾರ ರಾಜ್ಯ ಸರ್ಕಾರಗಳ ವೆಚ್ಚ 13.06 ಲಕ್ಷ ಕೋಟಿ ರೂಪಾಯಿಗಳು. ಇದು ರಾಜ್ಯಗಳ ಒಟ್ಟುತ್ಪಾದನೆಯ ಶೇ. 14.54 ರಷ್ಟು, ಆದ–ರೆ ರಾಜ್ಯಗಳ ಆದಾಯ 6.42 ಲಕ್ಷ ಕೋಟಿ ರೂಪಾಯಿಗಳು. ಅಂದರೆ ರಾಜ್ಯಗಳಿಗೆ 6.63 ಲಕ್ಷ ಕೋಟಿ ರೂಪಾಯಿಗಳ ಕೊರತೆ ಇರುತ್ತದೆ. ಕೇಂದ್ರ 4.80 ಲಕ್ಷ ಕೋಟಿ ರೂಪಾಯಿಗಳ ವರ್ಗಾವಣೆ ಮಾಡಿದ ಮೇಲೂ ಒಟ್ಟುತ್ಪಾದನೆಯ ಶೇ. 2.05 ರಷ್ಟು ಕೊರತೆ ಉಳಿಯುತ್ತದೆ. ಈ ಕೊರತೆ ನೀಗಲು ರಾಜ್ಯ ಸರ್ಕಾರಗಳೂ ಸಾಲ ಎತ್ತಬೇಕಾಗುತ್ತದೆ. ರಾಜ್ಯಗಳ ಸಾಲದ ಸಮಸ್ಯೆ ಇಲ್ಲಿಂದಲೇ ಪ್ರಾರಂಭವಾಗುತ್ತದೆ ಎಂಬುದನ್ನು ಗಮನಿಸಬೇಕು. ಕೇಂದ್ರ ಅವಶ್ಯ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ವರ್ಗಾಯಿಸಿದರೆ ಈ ಸಮಸ್ಯೆ ಉಂಟಾಗುವುದಿಲ್ಲ.

ಇದನ್ನು ಗಮನದಲ್ಲಿಟ್ಟುಕೊಂಡು ಸಿಪಿಐ(ಎಂ) ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹದಲ್ಲಿ ಶೇ. 50 ರಷ್ಟನ್ನು ರಾಜ್ಯಗಳಿಗೆ ವರ್ಗಾಯಿಸಬೇಕು ಎಂಬ ಒತ್ತಾಯಿಸಿದೆ.

ಹಂಚಿಕೆ ಮತ್ತು ಅನುದಾನ

ಹಂಚಿಕೆ ಮತ್ತು ಅನುದಾನಗಳು ವಾಸ್ತವಿಕ ಅಂದಾಜುಗಳ ಮೇಲೆ ಆಗುವ ಬದಲು ಆಶಯಗಳ ಮೇಲೆ ಆಗುತ್ತಿದೆ. ಇದಕ್ಕೆ ಪರಿಹಾರವಾಗಿ 14ನೇ ಹಣಕಾಸು ಆಯೋಗ ಹಳೆಯ ಪದ್ಧತಿಯಾದ ರಾಜ್ಯ ಸರ್ಕಾರಗಳ ಅಂದಾಜುಗಳ ಮೇಲೆ ಹಂಚಿಕೆ ಮತ್ತು ಅನುದಾನ ನೀಡಬೇಕೆಂದು ಸಿಪಿಐ(ಎಂ) ಕೇಳಿದೆ. ಹೀಗೆ ಮಾಡುವಾಗ ರಾಜ್ಯ ಸರ್ಕಾರಗಳ ಅಂದಾಜಿನ ವಿಧಾನಗಳನ್ನು ಗಣನೆಗೆ ತೆಗೆದುಕೊಳ್ಳುವುದು ಸೂಕ್ತ.

1950ರ ಅವಧಿಯಲ್ಲಿ ಸರ್ಕಾರದ ಸಾಲಗಳಲ್ಲಿ ರಾಜ್ಯ ಮತ್ತು ಕೇಂದ್ರಗಳ ಪಾಲು 50:50 ರಷ್ಟಿದ್ದದ್ದು ಈಗ 15:85 ಕ್ಕೆ ಕುಸಿದಿದೆ. ಅಭಿವೃದ್ಧಿಯಲ್ಲಿ ರಾಜ್ಯಗಳಿಗೂ ಸಮ ಜವಾಬ್ದಾರಿ ಇರುವುದರಿಂದ ಈ ಅನುಪಾತವನ್ನು ಕೂಡಲೇ 33:66 ಕ್ಕೆ ಏರಿಸಿ ಮುಂದಿನ ಐದು ವರ್ಷಗಳ ಅವಧಿಯಲ್ಲಿ 50:50 ಕ್ಕೆ ಏರಿಸಬೇಕು.

ರಾಜ್ಯ ಸರ್ಕಾರಗಳ ಋಣಭಾರ

1991 ಮತ್ತು 2012ರ ನಡುವೆ ರಾಜ್ಯ ಸರ್ಕಾರಗಳ ಋಣಭಾರ ಅಂದರೆ ಸಾಲದ ಹೊರೆ ಹೆಚ್ಚುತ್ತಲೇ ಹೋಗಿದೆ. ಈ ಭಾರದ ಹೆಚ್ಚು ಪಾಲು 1991 ಮತ್ತು 2000ದ ನಡುವೆ ಉಂಟಾಗಿದ್ದು. ಈ ಅವಧಿಯಲ್ಲಿ ರಾಜ್ಯಗಳಿಗೆ ಆಗಬೇಕಾಗಿದ್ದ ಕಂದಾಯ ವರ್ಗಾವಣೆಯಲ್ಲಿ ಕಡಿತ ಉಂಟಾಗಿ ಋಣಭಾರ ಹೆಚ್ಚಾಗಿದ್ದು ಸ್ಪಷ್ಟ. ಈ ಅವಧಿಯಲ್ಲಿ ಕೇಂದ್ರ ರಾಜ್ಯಗಳಿಗೆ ಹೆಚ್ಚಿನ ಬಡ್ಡಿ ದರ ಹೇರಿದ್ದು ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿತು.

ಸಣ್ಣ ಉಳಿತಾಯ ಒಂದು ಉದಾಹರಣೆ. ಸಣ್ಣ ಉಳಿತಾಯದಾರರಿಗೆ ಅವರ ಉಳಿತಾಯದ ಮೇಲೆ ನೀಡುವ ಬಡ್ಡಿಗಿಂತ ಹೆಚ್ಚಿನ ದರವನ್ನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಮೇಲೆ ಹೇರುತ್ತದೆ. ಒಂದು ಹಂತದಲ್ಲಿ ರಾಜ್ಯ ಸರ್ಕಾರಗಳಿಗೆ ಶೇ. 16ರ ಬಡ್ಡಿ ದರವನ್ನು ವಿಧಿಸಲಾಗಿತ್ತು!!

ಇತ್ತೀಚೆಗೆ ಇನ್ನೊಂದು ಸಮಸ್ಯೆ ಉಂಟಾಗಿದೆ. ಬ್ಯಾಂಕುಗಳ ಬಡ್ಡಿ ದರಗಳು ಸಣ್ಣ ಉಳಿತಾಯಗಳ ಬಡ್ಡಿ ದರಕ್ಕಿಂತ ಹೆಚ್ಚಿಗೆ ಇವೆ. ಇದರಿಂದ ಸಣ್ಣ ಉಳಿತಾಯಗಳಿಗೆ ಹೂಡಿಕೆ ಬರುತ್ತಿಲ್ಲ. ರಾಜ್ಯಗಳ ಸಂಪನ್ಮೂಲಗಳಿಗೆ ಇದರಿಂದಲೂ ಹೊಡೆತ ಬೀಳುತ್ತಿದೆ. ಸಣ್ಣ ಉಳಿತಾಯಗಳ ಬಡ್ಡಿ ದರಗಳನ್ನು ಏರಿಸುವ ಅವಶ್ಯಕತೆ ಇದೆ.

ಸೌಲಭ್ಯಗಳನ್ನು ನೀಡಲು ಕೇಂದ್ರ, ಸ್ಪರ್ಧಾತ್ಮಕವಾಗಿ ರಾಜ್ಯಗಳಿಂದ ರಿಯಾಯತಿಗಳನ್ನು ನಿರೀಕ್ಷಿಸುವುದು ಅಸಮ ಬೆಳವಣಿಗೆಗೆ ಕಾರಣವಾಗುತ್ತದೆ. ಅಂದರೆ ಯಾವ ರಾಜ್ಯ ಹೆಚ್ಚು ರಿಯಾಯಿತಿಗಳನ್ನು ನೀಡುವುದೋ ಆ ರಾಜ್ಯಕ್ಕೆ ಹೆಚ್ಚು ಸೌಲಭ್ಯವನ್ನು ನೀಡುವುದು. ಇತ್ತೀಚೆಗೆ ಭಾರತೀಯ ರೈಲ್ವೇ ಮತ್ತು ವಿಮಾನ ನಿಲ್ದಾಣಗಳ ಪ್ರಾಧಿಕಾರ ಇಂತಹ ನಿರೀಕ್ಷೆ ಮಾಡುತ್ತಿವೆ.

ಪಡಿತರ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವ ಅವಶ್ಯಕತೆ ತೀವ್ರವಾಗಿ ಇದೆ.


ರಾಜ್ಯಗಳಿಗೆ ಕೇಂದ್ರ ಹಿಂದೆ ನೀಡಿದ್ದ ಸಾಲಗಳನ್ನು ಮನ್ನಾ ಮಾಡುವ ಅವಶ್ಯಕತೆಯೂ ಇದೆ.

ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವುದು

ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲು ಅವುಗಳಿಗೆ ಈಗ ನೀಡುತ್ತಿರುವ ಶೇ. 2.5 ರಷ್ಟು ಪಾಲನ್ನು ಶೇ. 5 ಕ್ಕೆ ಏರಿಸಬೇಕು.

JANASHAKTHI KANNADA VARA PATRIKE DEC 01, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on eve
Licensed to Post without prepayment License No.

ಕಾಶ್ಮೀರ : ನವಿಲಗರಿಯಂತ ಊರು



ಉತ್ತರ ಭಾರತ ಪ್ರವಾಸ ಮತ್ತೊಂದು ಅನುಭವ

ಆರ್. ರಾಮಕೃಷ್ಣ

ರೈಲು ಬೆಳಗಿನ ಜಾವ 'ಜಮ್ಮು' ನಗರವನ್ನು ತಲುಪಿದಾಗ ಕಂಡ ದೃಶ್ಯದ ಪ್ರಕಾರ ಭಾರತದ ನಾನಾ ನಗರಗಳಂತೆ . ಅದೂ ಒಂದು. ಆಗಲೇ ಖಾಲಿ ಬಿಂದಿಗೆ ಹಿಡಿದು ನೀರಿಗಾಗಿ ಅಲೆಯುತ್ತಿರುವ ಜನರು ಹಿಂಡು ಹಿಂಡು.

ಮತ್ತೆ ಎರಡು ಗಂಟೆಗಳ ಬಸ್ ಪ್ರಯಾಣ. ಆಮೇಲೆ ಸಿಕ್ಕ ಊರ ಹೆಸರು 'ಕಟ್ರ'. ಚೌಕಾಸಿ ಮುಗಿಸಿ ಕುದುರೆಗಳ ಮೇಲೆ ಕುಳಿತಾಗ ಗಂಟೆ ಹನ್ನೆರಡು, ಮತ್ತೆ ಪರೆಯೋ ಏನೋ. ಕಟ್ಟುಮಸ್ತಾದ ಕುದುರೆಗಳು. ಬಾಲಮುರಿದು ಮುಂದೆ ನೂಕಿ, ಬೆನ್ನ ಹಿಂದೆ ಓಡಿ ಬರುವನು 'ಜಾಕಿ'. ಹಾದಿ ಹರಿಯುವ ಹಾವು. ಯಾಕೆ ಇಂಗದು ನೋವು. 'ಎಕ್ಕೀತ್ ಎಕ್ಕೀತ್.. ..' ಏನು ರೆಕ್ಕೆಕಟ್ಟಿಕೊಂಡು ಹಾರುತಿರುವೆವಾ ? ಇಲ್ಲ. ನಾಗಾಲೋಟ. ಕೊಂಚವೆ ಅದು ..ಮಳೆಯ ಹನಿಗಳ ಕಾಟ. ಅಮ್ಮಮ್ಮ. ಓ ಅಗೋ ಅಲ್ಲಿ ದೂರ ತಲೆ ಮೇಲೆ ಮೋಡಗಳ ಲೋಕ. 'ಎಕ್ಕೀತ್ ಎಕ್ಕೀತ್.. ..' ಹೋಯ್, ನಾವು ಬಂದೇವಾ ಈಗ ಮೋಡಗಳ ಸಮಕ .. ಎಡಕೆ ಪರ್ವತ ಗೋಡೆ ಕಡಿದು. ಬಲಕೆ ಜಾರಿದರೆ ಪ್ರಪಾತ ಆಳ ಕಣ್ಣಿನಳತೆಗೆ ಸಿಗದು. ಏನಿದು ಬೆಟ್ಟವಾ ? ಪರ್ವತವಾ ? ಒಂದರ ಮೇಲೊಂದು ಜೋಡಿಸಿದ ಪರ್ವತ ಶ್ರೇಣಿಯಾ ? ಪರ್ವತ ಶೃಣಿಗಳ ಏಣಿಯಾ ? ಒಹೋ !! ಈಗ ಮೋಡಲೋಕ ಅಲ್ಲಿ, ಪಾತಾಳದಲ್ಲಿ.. .. ಎಲ್ಲಿ ಹಾಂ !.. ..ಈಗ ಕಾಣುತ್ತಲೇ ಇಲ್ಲ. ಎಲ್ಲಿ ? ಎಲ್ಲಿ ?

ಏನು !! ಇನ್ನೂ ಒಂದು ದೇಗುಲವಿಹುದಾ, ಭೈರವನದು, ಇನ್ನೂ ಮೇಲೆ. ಅಣ್ಣ, ಇಲ್ಲ- ಮುಂದೆ ಜನ್ಮ. ಇರುವುದೊಂದೇ ಬದುಕು. .. ಮಬ್ಬುಗತ್ತಲು.. ಸಾಕು ಸಾಕು. ಈ ಎತ್ತರಕೆ ಬಂದು ನೆಲೆಸಿದುದಕೆ -ತಾಯಿ 'ವೈಷ್ಣೋದೇವಿ'ಗೆ ನಮೋ ನಮಃ. ಮುಗಿಯಿತು. ಕ್ಷೇಮದಿ ಕೆಳಗೆ ಕರೆತಂದ ಹಿರಿಯಣ್ಣನೇ, ಇಗೋ ನಿನಗೂ ದೀರ್ಘ ಪ್ರಣಾಮ.

ಇಕೋರಿ. ಒಬ್ಬರದು, ರೂ. 1,500. ಇದು ಮಾತಾಡಿದ್ದು. ಮತ್ತೆ ನೂರು ಭಕ್ಷಿಸು, ಮತ್ತೆ ಕೇಳಿದ್ದು. ಆಕಾಶಕೆ ಮುಖಮಾಡಿ 14 ಕಿ.ಮಿ.-ವಾಪಸ್ ಪಾತಾಳಕೆ ಮುಖಮಾಡಿ 14 ಕಿ.ಮಿ. ಓಡಿಹಿರಿ. ಎಷ್ಟು ನಿಮಗೆ ದಿನಕೆ ದಕ್ಕುವ ಮಜೂರಿ ?

-300 ರೂ. ಉಳಿದದ್ದು ? ಕುದುರೆ ಮಾಲೀಕರಿಗೆ. ಕರೆಯಿರಿ, ಎಲ್ಲಿ ಮಲಗಿಹರು ಅವರು ಕಾಶ್ಮೀರಿ ಶಾಲು ಹೊದ್ದು ?

* * *

ಬೆಳಗಿನ ಚುಮುಚುಮು ಚಳಿ. ವಾಹನ ಹತ್ತೋದಕ್ಕೆ ಅಂತ ಉಳಕೊಂಡ ಜಾಗದಿಂದ ಹೊರಗೆ ಬಂದರೆ .. ಅದೆಲ್ಲಿ ಕಾದಿದ್ದರೋ ? ಸೈಕಲ್ ಮೇಲೆ ಸ್ವೆಟರುಗಳು. ಸ್ಕೂಟರ್ ಮೇಲೆ ಶಾಲುಗಳು, ಟೋಪಿಗಳ ಕೈಲಿ ಹಿಡಿದೇ ಮಾರುವವರು, ಯಾರೋ ತಂದು ನಿಲ್ಲಿಸಿದರು ಕಾರು. ಏನು ಬೇಕೋ ನೋಡಿಕೊಳ್ಳಿ, ಒಳ್ಳೆ ವಸ್ತು ಕೊಂಡುಕೊಳ್ಳಿ.

* * *

'ಗ್ರೂಪ್ ಫೋಟೋ ಪ್ಲೀಸ್'

ವಾಹ್, ಇಂಥದ್ದೂ ಒಂದು ಹೂ ತೋಟ..ವಿಶಾಲ ಹಸಿರ ಹುಲ್ಲು ಹರಡಿದ ನೋಟ, ಬೀಸುವ ಗಾಳಿಗೆ ಮಂಜುಣಿಸಿ ಕಳಿಸುವ ಬೆಟ್ಟ ಸಾಲು, ನಮ್ಮ ಊರಿನಲ್ಲಿ ಇರಬಾರದಾ ? 'ಗುಲ್ ಮಾರ್ಗ್'

ಓಹೋ, ಎಷ್ಟು ಬೇಗ ಗೆಳತಿಯರಾಗಿ ಬಿಟ್ಟಿದ್ದೀರಿ. ಎಷ್ಟೋ ವರ್ಷದಿಂದ ಜೊತೆ-ಗೆ ಬಿದ್ದವರಂತೆ. ಓ ಕಾಲೇಜು ಓದುವ ಹುಡುಗಿಯರದು, ನಿಮ್ಮದೇ ಒಂದು ಸಪರೇಟು ಟೀಮಾ ?. ಕರ್ನಾಟಕದವರು ಉಯ್ಯಾಲೆಯಲ್ಲಿ ಕೂರುವುದು, ಕಾಶ್ಮೀರದ ಹುಡುಗಿಯರು ನೂಕುವುದು. ಆಮೇಲೆ ತಿರುಗು ಮುರುಗು. ಏತ-ಪೇತ. ಅವರು ಮೇಲೆ ಇವರು ಕೆಳಗೆ. ಇವರು ಮೇಲೆ ಅವರು ಕೆಳಗೆ. - ಮಕ್ಕಳೂ ಇದ್ದಾರೆ ಹುಷಾರಾಗಿ ಆಡಿ.

ಹೌದು, ನಾವು ಬೆಂಗಳೂರಿನವರು. ನೀವು ? ಓ, ಇಲ್ಲೆ ಶ್ರೀನಗರದವರಾ ? ಭಾನುವಾರ ಸಂಜೆ ಬೇಸರ ನೀಗಲು ಬಂದಿದ್ದೀರಾ ? ನೀವೆಲ್ಲಾ ಅಕ್ಕ ತಂಗಿಯರ ? ಅವರು ನಿಮ್ಮಮ್ಮ, ಅವರು ಚಿಕ್ಕಮ್ಮನಾ ? ಓ.ಕೆ. ನೀವೇನು ಓದುತ್ತಿದ್ದೀರಿ.- ಜರ್ನಲಿಸಂ. ಒಳ್ಳೇದು. ಕಾಲೇಜು ಚೆನ್ನಾಗಿದೆಯಾ ?

ನೋಡೋದಕ್ಕೆ ಕಾಶ್ಮೀರ ತುಂಬಾ ಚೆನ್ನಾಗಿದೆ. ಇಲ್ಲಿ ಜನ ತುಂಬಾ ಫ್ರೆಂಡ್ಲಿ ಅನಿಸುತ್ತೆ. ಆದ-ರೆ ಇಲ್ಲಿ ಯಾವಾಗಲೂ ಗಲಭೆ ಅಂತ ಸುದ್ದಿ ಓದ್ತಾ ಇರತಿವಿ. ಯಾಕೆ ಏನು ಸಮಸ್ಯೆ ಇಲ್ಲಿ ಜನಕ್ಕೆ. ?

.. .. ಅಂಥದ್ದೇನು ಸಮಸ್ಯೆ ಇಲ್ಲ ಅಂತಿರಾ ? ಇಲ್ಲಿ ಹೆಜ್ಜೆ ಹೆಜ್ಜೆಗೂ ಪೋಲಿಸರು, ಮಿಲಿಟರಿಯವರು, ಅವರ್ ಕಡೆಯಿಂದ ..ಅಥವಾ ಸೆಂಟ್ರಲ್ ಗೌರನಮೆಂಟ್‌ನಿಂದ.. ಇಲ್ಲಿ ಜನರ ಭಾವನೆ ಅರ್ಥ ಮಾಡಿಕೊಳ್ಳದೆ ಏನಾದರೂ ತೊಂದರೆ ಆಗಿರೋದು.. ?

.. .. ಕೆಲವು ಸಾರಿ ಆಗಿರಬಹುದು, ಕೆಲವು ಘಟನೆಗಳು. ಈಗೇನು ಅಂಥಾ ಸಮಸ್ಯೆ ಇಲ್ಲ .. ಅಂದರೆ, ನಿಮ್ಮ ಪ್ರಕಾರ ಜಮ್ಮು-ಕಾಶ್ಮೀರದ ವಿಷಯದಲ್ಲಿ ಈಗ ಮುಖ್ಯವಾಗಿ ಆಗಬೇಕಾಗಿರೋದು ಟೂರಿಸಂ ಅಭಿವೃದ್ಧಿ ಅನ್ನಿ. ಈ ಸಮಸ್ಯೆಗೆ ಕಾರಣ .. .. ಓಹೋ, ಜೋಕಾಲಿ ಆಡೋದಕ್ಕೆ ಹೋಗ್ತೀರಾ ? ಓ.ಕೆ. ಹೊರಡಿ, ಹೊರಡಿ. -ಯುವತಿಯರು, ಮಕ್ಕಳು, ಮಹಿಳೆಯರ ಜೋಕಾಲಿ. ಚಿಲಿಪಿಲಿ.- ಸಾಕಾಯ್ತಾ ಆಡಿದ್ದು. ಬೆಂಗಳೂರ್ ನೋಡ್‌ಬೇಕಾ ? ನೀವು ಒಂದ್ ಸಾರಿ ಬೆಂಗಳೂರಿಗೆ ಬರ್ತಿರಾ ? ಓ.ಕೆ. ಫೋಟೋ.. ಅದಕ್ಕೇನಂತೆ ತಗೆಸಿಕೊಳ್ಳೋಣ. ಏ ಎಲ್ಲ ಒಂದ್ ನಿಮಿಷ ಈ ಕಡೆ ಬನ್ನಿ- ಎಲ್ಲರೂ ನಿಂತ ಮೇಲೆ ಗ್ರೂಪ್ ಫೋಟೋ. ಆಮೇಲೆ.. .. ಬಾಯ್ ಎವೆರಿಬಡಿ.

* * *

ಅಲ್ಲಿ ಆಕಾಶ ಬುಟ್ಟಿಯಾನ. ನವಿಲೂರ ಬೆಟ್ಟಸಾಲು ನೋಡಲು ತೇಲುವ ವಿಮಾನ. ಈ ನೀಲ ಗಿರಿಶ್ರೇಣಿ ದಾಟಿಹೋದರೆ ? ಅತ್ತ ಪಾಕಿಸ್ತಾನ. ಮರಳುವೆವು. ಓ ನೀವು ಕರ್ನಾಟಕದವರ ? ಬೆಂಗಳೂರಲ್ಲಿ ಹೊಸಕೆರೆಹಳ್ಳಿಯವರೇನಾ ? ಸಂತೋಷ. ಓ ನೀವು ಮಿಲಿಟರಿ ಅಧಿಕಾರಿಗಳ ? ದೇಶಕಾಯುವ ಯೋಧರೇ ಇದೋ ಎಮ್ಮ ನಮನ.

* * *

ಈಗ್ಯಾಕೆ ಆ ಮಾತು

ಇವರೇ, ನೋಡೋದಕ್ಕೆ ಕಾಶ್ಮೀರ ತುಂಬಾ ಚೆನ್ನಾಗಿದೆ. ಇಲ್ಲಿ ಜನ ತುಂಬಾ ಫ್ರೆಂಡ್ಲಿ ಅನಿಸುತ್ತೆ. ಮನೆಗಳೂ ಅಷ್ಟೆ ಒಂದೊಂದು ಮನೆನೂ ಮತ್ತೆ ನೋಡಬೇಕು ಅನಿಸುತ್ತೆ. ಆದರೆ ಇಲ್ಲಿ ಯಾವಾಗಲೂ ಗಲಭೆ ಅಂತ ಸುದ್ದಿ ಓದ್ತಾ ಇರತಿವಿ. ಯಾಕೆ ಏನು ಸಮಸ್ಯೆ ಇಲ್ಲಿ ಜನಕ್ಕೆ.

ಗಲಭೆನಾ ? ಅದೆಲ್ಲಾ ಹಳೇ ವಿಷಯ. ಈಗ್ಯಾಕೆ ಅದರ ಬಗ್ಗೆ ಮಾತು ? ಈಗ
ಅಂಥದ್ದೇನು ಸಮಸ್ಯೆ ಇಲ್ಲ.
ಬೇಕಾದರೆ.
ಅರೆ, ಹೌದಲ್ಲ ನಡೆದಿಹು
ವ್ಯವಹಾರ ಎಲ್ಲ ಊರಿನಂತೆ.
ಕಿರಿಯರು. ಪುರುಷರು ಮಹಿ
ಎಂಥ ಹೆಣ್ಣು ಮಕ್ಕಳು ಇವರು.
ನೋಡಿ ಚಲಾಯಿಸುವರು ಸ್ಕೂ
ಮಾರುವರು ಸ್ವೆಟರು, ಹಣ್ಣು, ತ
- ಯಾರಿಗೆ ಕಡಿಮೆ ? ಹೇಗೆ
ನೋಡಿ ತಲೆ ಎತ್ತಿ? ಹೇಗಿ
ಮೈಮುರಿಯೇ ದುಡಿಮೆ-ಬರುವ
ದಾರಿಯಲಿ ಕಂಡದ್ದೇನು ? ಇ
ಕಡಿದು, ಭತ್ತ ಬಡಿದು, ಅಂಗಳ
ಗುಡಿಸಿ, ..ಪರ್ವತದ ಉತ್ತುಂಗ ಶಿ
ಎಲಲಾ.. ಎನುವಂತೆ ದನಕೆ ಹು
.. ಇತ್ತ ವಿಶಾಲ ಸರೋವರದ
ದೋಣಿ ನಡೆಸಿ..ಓಹೋ.

* * *

ಶ್ರೀನಗರದ ತಿಳಿನೀರ 'ದಾಲ್'
ಪಕ್ಕ ಬೆಟ್ಟ. ನೆತ್ತಿಯಲಿ ಒಂದು ಬಿ
ಸವೆದು ನಿಂತ ಪ್ರಾಚೀನ ಶಿಲಾ
ಹೊಕ್ಕು ಪೂರ್ಣ ಒಂದು ಸು
ನೋಡಿ.
ಕ್ರಿಸ್ತಪೂರ್ವ ನಾಲ್ಕನೇ ಶ
ಅಂದರೆ ಸು. 2400 ವರ್ಷಗಳ
ಬೌದ್ಧರ ಮಂದಿರ 'ಪಾಸ್' ಪ
ಸಾಮ್ರಾಟ ಅಶೋಕನ ಮಗ ಜಾಲು
ಅಂತೆ. ಕ್ರಿ.ಶ. 800 ಸುಮಾರಿನಲ್ಲಿ
ಕಾಲಿಟ್ಟ ಮೇಲೆ.. ಅಲ್ಲಿ ಶಿವಲಿಂಗ: ಅ
ದೇಗುಲ. ಪಕ್ಕ ಒಂದು ಕಲ್ಲಿನ ಮ
ಅದೋ ಶಂಕರಾಚಾರ್ಯ ನೆಲಸಿ
(ಕೇರಳದ 'ಕಾಲಟಿ'ಯಿಂದ ನೀನು
ಬಂದಿದ್ದೆಯಾ ತಂದೆ. -ಶಂಕರ !!)
ಬಿಡಿ. ಹೋದ ಕಡೆಯೆಲ್ಲಾ ಅ
ಕೆಲಸವಾ ? ಊರಿಗೆ ವಾಪಸ್ ಹ
ಹೌದು. ಶ್ರೀನಗರದಿಂದ ಒಂದಿಡಿ
ಪ್ರಯಾಣ.
ಅಯ್ಯೋ ಇಲ್ಲಿ ಎಲ್ಲುಂಟು
ಜಾಗ. ಉದ್ದಕ್ಕೂ ಬೆಟ್ಟ ಗುಡ್ಡ, ಪವ
ಓ ಅಗೋ, ಇಲ್ಲಿ ಮೂರು ಕಿ.ಮಿ
ಸುರಂಗ ಮಾರ್ಗ-ಓಣಿ. ಅದಕು
ಮಿಲಿಟರಿ ಠಾಣೆ. ಓಹೋ ಈ ಕಡೆ
ಆತ. ಈಗ ವಾಹನಗಳ ತಪಾಸ
ಹೊತ್ತಾಗುವುದು ? ಅವರಿಗೋ
ಚಳಿ ಬೇರೆ. ಹಾಂ. ಐವತ್ತರ ನೋ
ಕೈ ಬಿಸಿ. ಪಕ್ಕದಲ್ಲಿರುವವರಿಗೂ ಸುಳಿ
ನಿಮಗೆ ತಿಳಿಯಿತಾ ಸುಮ್ಮನಿರಿ,
ಇವೆಲ್ಲಾ ಮಾಮೂಲಿ, ಯಾಕೆ ಕಸಿ
ರೈಟ್. ಯಾನ ಸರಾಗ. ಯೋ
ಇಲ್ಲ ..ಪಾಸಣೆ, ಏನೊಂದು ಅಡಚಣ

* * *

ಶಾಲೆಬಿಟ್ಟು ಮನೆಗೆ ಮರಳುತಿರು
ಕಂಡು ಹಿರಿಯಕ್ಕ ಕನಲಿದರು-
ಎಷ್ಟು ಚಂದ ಅಲ್ಲಿನ ಹೆಣ್ಣು
ಮೈತುಂಬ ಬಟ್ಟೆ, ಸೆಲ್ವಾರ್ ಕಮೀ
-ಎಲ್ಲಿಯಾದರೂ ಬುರ್ಕ ಕಂಡೆವಾ
ಎಣಿಸಿದೆ- ಸುತ್ತಿದ್ದು ಕಿ.ಮೀ. ನೂರಾ
ಯಾನದಲಿ ಕಂಡದ್ದು ಬುರ್ಕಾ ಮ
ಬರೀ ಐದು ಇಲ್ಲ ಆರು.

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, "BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI